**ಸಂಪುಟ:** 05 **ಸಂಚಿಕೆ:** 282 **ಪುಟಗಳು:** 08 **ಶುಕ್ರವಾರ** 26 **ಡಿಸೆಂಬರ್** 2025
www.udayavahini.in epaper.udayavahini.in Udaya vahini news Udaya vahini news Udayavahini news youtube udayavahininews@gmail. com
ಸಂಪಾದಕರು: ಟಿ. ಹೊಂಬೇಗೌಡ
RNI No. KARKAN/2021/80833
9448225696 +91 8035841833
₹5

**ಮುಂಜಾನೆ ಮಾತು**
ಅರಮನೆಯ ಹಾಳಾದರೆ ಅದು ಪಾಳುಮನೆ ಎನ್ನಿಸಿಕೊಳ್ಳುತ್ತದೆ. ಆದರೆ ದೇವಾಲಯ ಎಷ್ಟು ಹಾಳಾದರೂ ಅದು ದೇವಾಲಯವೆಂದೇ ಎನ್ನಿಸಿಕೊಳ್ಳುತ್ತದೆ ನಿನ್ನ ಬಾಳನ್ನು ದೇವಾಲಯವನ್ನಾಗಿ ಮಾಡಿಕೊ

# ಉದಯ ವಾಹಿನಿ
UV
ಸರ್ವ ಸಮಾನತೆಯ
ಕನ್ನಡ ದಿನಪತ್ರಿಕೆ

## ನಾಳೆ ಚುನಾವಣೆ ನಡೆದರೂ ರಾಜ್ಯದಲ್ಲಿ ಬಿಜೆಪಿಗೆ ಬಹುಮತ: ಬಿವೈವಿ ವಿಶ್ವಾಸ

### ಅಸ್ತಿತ್ವ ಕಳಕೊಳ್ಳುತ್ತಿರುವ ಕಾಂಗ್ರೆಸ್ಸಿನ ಸ್ಥಿತಿ ರಾಜ್ಯದ ಪಟ್ಟಣ ಪಂಚಾಯಿತಿ ಚುನಾವಣೆ ತೋರಿಸಿಕೊಟ್ಟಿದೆ

• **ಉದಯವಾಹಿನಿ, ಬೆಂಗಳೂರು**

ನಮ್ಮ ಸ್ವಯಂಕೃತ ಅಪರಾಧದಿಂದ ವಿಪಕ್ಷದಲ್ಲಿದ್ದೇವೆ. ನಾವ್ಯಾರೂ ಆತಂಕ ಪಡಬೇಕಿಲ್ಲ. ರಾಜ್ಯದ ಜನವಿರೋಧಿ, ಬಡವರ ವಿರೋಧಿ ಕಾಂಗ್ರೆಸ್ ಸರಕಾರದ ವಿರುದ್ಧ ಜನಕ್ರೋಶ ಹೆಚ್ಚಾಗಿದೆ.

ಜನರು ಆಕ್ರೋಶ ಹೊರಹಾಕುತ್ತಿದ್ದಾರೆ. 2028ರಲ್ಲಿ ಅಥವಾ ನಾಳೆ ಚುನಾವಣೆ ನಡೆದರೂ ಕರ್ನಾಟಕದಲ್ಲಿ ಬಿಜೆಪಿ ಸ್ವಂತ ಶಕ್ತಿಯ ಮೇಲೆ 130-140 ಶಾಸಕರೊಂದಿಗೆ ಸ್ಪಷ್ಟ ಬಹುಮತ ಪಡೆದು ಅಧಿಕಾರಕ್ಕೆ ಬರಲಿದೆ ಎಂದು ಬಿಜೆಪಿ ರಾಜ್ಯಾಧ್ಯಕ್ಷ ಬಿವೈ ವಿಜಯೇಂದ್ರ ವಿಶ್ವಾಸ ವ್ಯಕ್ತಪಡಿಸಿದರು.

**ಅಟಲ್‌ಜೀ ಹೆಸರಿನ ಉಚ್ಚಾರಣೆಯೇ ರೋಮಾಂಚನ:** ಅಟಲ್ ಜೀ ಹೆಸರಿನ ಉಚ್ಚಾರಣೆಯೇ ನಮಗೆ ರೋಮಾಂಚನವನ್ನುಂಟು ಮಾಡುತ್ತದೆ. ಆ ಹೆಸರು ಪ್ರೇರಣೆ, ಉತ್ಸಾಹ ತುಂಬುತ್ತದೆ. ಅಂಥ ಶ್ರೇಷ್ಠ ವ್ಯಕ್ತಿತ್ವ ಅವರದು ಎಂದರು. ಹಲವಾರು ಬಾರಿ ಅವರು ಕರ್ನಾಟಕದಲ್ಲಿ ಪ್ರವಾಸ ಮಾಡಿದ್ದರು. ರಾಜ್ಯದಲ್ಲಿ ಬಿಜೆಪಿ ಸಂಘಟನೆಗೆ



ಯಡಿಯೂರಪ್ಪ, ಶಂಕರಮೂರ್ತಿ, ರಾಮಚಂದ್ರೇಗೌಡ, ಜಗದೀಶ ಶೆಟ್ಟರ್, ಪಕ್ಷದ ಹಿರಿಯರಿಗೆ ಪ್ರೇರಣೆ ನೀಡಿದ ಮಹಾನ್ ನಾಯಕರು ಎಂದು ನುಡಿದರು. ಕರ್ನಾಟಕವು

**ದೇಶಭಕ್ತಿ ನಮಗೆ ಪ್ರೇರಣೆ**

ಮುಂದೊಂದು ದಿನ ದಕ್ಷಿಣ ಭಾರತದಲ್ಲಿ ಬಿಜೆಪಿಯ ಭದ್ರ ಕೋಟೆ ಆಗಲಿದೆ ಎಂಬ ದೂರದೃಷ್ಟಿತ್ವ ಅವರಲ್ಲಿತ್ತು. ಕಾರ್ಯಕರ್ತರ ಕುರಿತು ಅದಮ್ಯ ವಿಶ್ವಾಸ ಅವರದಾಗಿತ್ತು ಎಂದು ವಿವರಿಸಿದರು. ಜವಾಹರಲಾಲ್ ನೆಹರೂ ಅವರು ಹಿಂದೆ ಪ್ರಧಾನಮಂತ್ರಿಯಾಗಿದ್ದಾಗ ಅಟಲ್ ಜೀ ಅವರ ಮಾತು, ಭಾಷಣವನ್ನು ಸಂಸತ್ತಿನಲ್ಲಿ ಕೇಳಿದಾಗ ಮುಂದೊಂದು ದಿನ ಅಟಲ್ ಅವರು ಪ್ರಧಾನಿ ಆಗಲಿದ್ದಾರೆ ಎಂದು ತಿಳಿಸಿದ್ದನ್ನು ನೆನಪಿಸಿದರು. ಸೋಲಿನಿಂದ ಅಂಜುವಂಥ ಪ್ರಶ್ನೆಯೇ ಇಲ್ಲ ಎಂದು ಅಟಲ್ ಜೀ ಅವರು ಹಿಂದೆ ಹೇಳಿದ್ದರು ಎಂದು ವಿವರ ನೀಡಿದರು. ಬಿಜೆಪಿ ದೃಢವಾಗಿ ಕಟ್ಟುವ ಆತ್ಮವಿಶ್ವಾಸವನ್ನು ಕಾರ್ಯಕರ್ತರಲ್ಲಿ ಅವರು ತುಂಬಿದ್ದರು ಎಂದು ಹೇಳಿದರು.

ಅಟಲ್ ಜೀ, ಲಾಲ್ ಕೃಷ್ಣ ಅಡ್ವಾಣಿ ಜೀ ಅವರಂಥ ಶ್ರೇಷ್ಠರ ನಾಯಕತ್ವ ನಮಗೆ ಸಿಕ್ಕಿದೆ. ಮೋದಿಜೀ, ಅಮಿತ್ ಶಾ ಜೀ, ನಡ್ಡಾ ಜೀ ಅವರ ನೇತೃತ್ವದಲ್ಲಿ ಬಿಜೆಪಿ ದಾಪುಗಾಲು ಹಾಕುತ್ತಿದೆ. ಪಶ್ಚಿಮ ಬಂಗಾಳದಲ್ಲೂ ಬಿಜೆಪಿ ಅಧಿಕಾರಕ್ಕೆ ಬರಲಿದೆ ಎಂದು ವಿಶ್ವಾಸ ವ್ಯಕ್ತಪಡಿಸಿದರು.

ಅಟಲ್ ಜೀ ಅವರ ಕುರಿತಾದ ಸಾಹಿತ್ಯ ಕಿರು ಹೊತ್ತಗೆಯನ್ನು ಇದೇ ಸಂದರ್ಭದಲ್ಲಿ ಮಾಜಿ ಮುಖ್ಯಮಂತ್ರಿ ಮತ್ತು ಸಂಸದ ಜಗದೀಶ್ ಶೆಟ್ಟರ್ ಅವರು ಬಿಡುಗಡೆ ಮಾಡಿದರು. ಅಟಲ್ ಜೀ ಅವರ ಜೊತೆಗಿನ ಒಡನಾಟವನ್ನು ನೆನಪಿಸಿದರು. ಪೋಖ್ರಾನ್ ಅಣು ಪರೀಕ್ಷೆ ದೇಶಕ್ಕೆ ಹೆಮ್ಮೆ. ಇದಕ್ಕೆ ಅಟಲ್ ಬಿಹಾರಿ ವಾಜಪೇಯಿ ಅವರು ಕಾರಣ ಎಂದು ನುಡಿದರು. ವಾಜಪೇಯಿ ಅವರು ಇವತ್ತಿಗೂ ನಮ್ಮ ಮನಸ್ಸಿನಲ್ಲಿ ಇದ್ದಾರೆ ಎಂದು ತಿಳಿಸಿದರು. ಹಿಂದುಳಿದ ವರ್ಗ, ದಲಿತರ ಒಳಿತಿಗೆ ಹೆಚ್ಚಿನ ಒತ್ತು ಕೊಡುವಂಥ ಕೆಲಸ ಮಾಡಿದ್ದಾರೆ ಎಂದರು.

## ಬೆಂಗಳೂರಿನಿಂದ ವಿಜಯಪುರಕ್ಕೆ ಹುಬ್ಬಳ್ಳಿ, ಗದಗ ಬೈಪಾಸ್ ಮೂಲಕ ವಿಶೇಷ ರೈಲು

• **ಉದಯವಾಹಿನಿ, ಬೆಂಗಳೂರು**

ಕ್ರಿಸ್ಮಸ್ ಮತ್ತು ವರ್ಷಾಂತ್ಯದ ರಜೆ ಹಿನ್ನೆಲೆಯಲ್ಲಿ ಪ್ರಯಾಣಿಕರ ದಟ್ಟಣೆ ತಗ್ಗಿಸಲು ನೈರುತ್ಯ ರೈಲ್ವೆಯು ಇದೇ ಮೊದಲ ಬಾರಿಗೆ ಬೆಂಗಳೂರಿನಿಂದ ಹುಬ್ಬಳ್ಳಿ ಮತ್ತು ಗದಗ ಬೈಪಾಸ್ ಮೂಲಕ ವಿಜಯಪುರಕ್ಕೆ ವಿಶೇಷ ರೈಲನ್ನು ಓಡಿಸಿರುವುದು ಸ್ವಾಗತಾರ್ಹವಾಗಿದೆ.

ಮುಂದಿನ ದಿನಗಳಲ್ಲಿ ಇದನ್ನು ಖಾಯಂ ರೈಲು ಸೇವೆಯಾಗಿ ಪರಿವರ್ತಿಸಬೇಕು ಎಂದು ಮೂಲಸೌಕರ್ಯ ಅಭಿವೃದ್ಧಿ ಮತ್ತು ಜಿಲ್ಲಾ ಉಸ್ತುವಾರಿ ಸಚಿವ ಎಂ ಬಿ ಪಾಟೀಲ ಆಗ್ರಹಿಸಿದ್ದಾರೆ.

ಬೆಂಗಳೂರಿನಿಂದ ವಿಜಯಪುರಕ್ಕೆ ಈ ಎರಡೂ ಬೈಪಾಸ್ ಮೂಲಕವೇ ರೈಲು ಸಾಗುವಂತೆ ಮಾಡಬೇಕು ಎಂದು ನಿರಂತರವಾಗಿ ಪ್ರಯತ್ನಿಸಲಾಗುತ್ತಿದೆ. ಈ ನಿಟ್ಟಿನಲ್ಲಿ ನೈರುತ್ಯ ರೈಲ್ವೆ ಅಧಿಕಾರಿಗಳ ಜತೆ ಹಲವು ಸಭೆಗಳನ್ನು ನಡೆಸಲಾಗಿದೆ. ನಮ್ಮ ಪ್ರಯತ್ನಕ್ಕೆ ವಿಶೇಷ ರೈಲಿನ ರೂಪದಲ್ಲಿ ಮೊದಲ ಯಶಸ್ಸು ಸಿಕ್ಕಿರುವುದು ಸಂತಸ ತಂದಿದೆ ಎಂದಿದ್ದಾರೆ. ಬೈಪಾಸ್ ಮೂಲಕ ಚಲಿಸಿದ್ದ ಕಾರಣಕ್ಕೆ ಎರಡೂ ಕಡೆ ಇಂಜಿನ್ ಬದಲಿಸುವ ಪ್ರಮೇಯ ಬಂದಿಲ್ಲ. ಬಾಗಲಕೋಟೆ, ವಿಜಯಪುರ ಕಡೆಗೆ ಹೋಗುವ ಎಲ್ಲಾ ರೈಲುಗಳನ್ನು ಇದೇ ರೀತಿ ಬೈಪಾಸ್ ಮೂಲಕ ಸಂಚರಿಸುವಂತೆ ಮಾಡಿದರೆ ಪ್ರಯಾಣದ ಅವಧಿ ಕಡಿಮೆ ಮಾಡಬಹುದು ಎಂಬುದು ನನ್ನ ನಿಲುವು. ಈ ನಿಟ್ಟಿನಲ್ಲಿ ರೈಲ್ವೆ ಅಧಿಕಾರಿಗಳ ಜತೆ ಸಭೆಗಳು ನಡೆದಿವೆ ಎಂದು ಹೇಳಿದರು. ಈ ವಿಶೇಷ ರೈಲು ಕೇವಲ ಒಂಬತ್ತು ನಿಲುಗಡೆ ಹೊಂದಿತ್ತು.

## ದೀರ್ಘಾಯುಷ್ಯ ಪೂಜೆಯಲ್ಲಿ ಪಾಲ್ಗೊಂಡ ದಲೈಲಾಮಾ

• **ಉದಯವಾಹಿನಿ, ಮುಂಡಗೋಡ**

ತಾಲ್ಲೂಕಿನ ಟಿಬೆಟನ್ ಕ್ಯಾಂಪ್ ನಂ.6ರ ಡ್ರೆಪುಂಗ್ ಲಾಚಿ ಬೌದ್ಧಮಂದಿರದಲ್ಲಿ ಬುಧವಾರ ನಡೆದ ವಿಶೇಷ ಡ್ರೆಪುಂಗ್ ಪೂಜೆಯಲ್ಲಿ ದಲೈಲಾಮಾ ಪಾಲ್ಗೊಂಡರು. 24ನೇ ಡ್ರೆಪುಂಗ್ ತ್ರಿಪಾ ಆಗಿ ಸಿಂಹಾಸನಗೊಂಡ ದಲೈಲಾಮಾ ಅವರಿಗೆ, ಧಾರ್ಮಿಕ ವಿಧಿವಿಧಾನಗಳ ಮೂಲಕ ಗೌರವಿಸಲಾಯಿತು.

ಸುಮಾರು ಮೂರು ಗಂಟೆಗಳ ಕಾಲ ನಡೆದ ಕಾರ್ಯಕ್ರಮದಲ್ಲಿ ನೂರಾರು ಬಿಕ್ಕುಗಳು, ಬೌದ್ಧ ಅನುಯಾಯಿಗಳು ಪಾಲ್ಗೊಂಡಿದ್ದರು. ದಲೈಲಾಮಾ ದೀರ್ಘಾಯುಷ್ಯಕ್ಕಾಗಿ ವಿಶೇಷ ಪ್ರಾರ್ಥನೆಯನ್ನು ಬಿಕ್ಕುಗಳು ಸಲ್ಲಿಸಿದರು. ಡ್ರೆಪುಂಗ್ ಲೋಸಲಿಂಗ್ ಬೌದ್ಧಮಂದಿರದ ಹಿರಿಯ ಬೌದ್ಧ ಮುಖಂಡ ಟಿ ರಿನ್ ಪೋಚೆ ಅವರು ದಲೈಲಾಮಾ ಅವರ ದೀರ್ಘಾಯುಷ್ಯಕ್ಕಾಗಿ ಪೂಜೆ ಸಲ್ಲಿಸಿ, ಲೋಸಲಿಂಗ್ ಹಾಗೂ ಗೋಮಾಂಗ್ ಬೌದ್ಧ ಮಂದಿರದ ವತಿಯಿಂದ ಗೌರವಿಸಿದರು. ಗೋಮಾಂಗ್ ಬೌದ್ಧಮಂದಿರದಿಂದ ಡ್ರೆಪುಂಗ್ ಲಾಚಿ ಬೌದ್ಧ ಮಂದಿರದವರೆಗೆ ದಲೈಲಾಮಾ ಆಗಮನದ ಸಮಯದಲ್ಲಿ, ನೂರಾರು ಬಿಕ್ಕುಗಳು, ಟಿಬೆಟಿಯನ್ನರು ರಸ್ತೆ ಬದಿಯಲ್ಲಿ ನಿಂತು, ಧಾರ್ಮಿಕ ನಾಯಕ ದಲೈಲಾಮಾ ಅವರಿಗೆ ನಮಿಸಿದರು.

## ಮರ್ಯಾದೆಗೇಡು ಹತ್ಯೆ: ಕಠಿಣ ಕಾಯ್ದೆ ರೂಪಿಸಲು ಆಗ್ರಹ

• **ಉದಯವಾಹಿನಿ, ಬೆಂಗಳೂರು**

'ಮರ್ಯಾದೆಗೇಡು ಹತ್ಯೆ ವಿರುದ್ಧ ಕಠಿಣ ಕಾಯ್ದೆ ರೂಪಿಸಬೇಕು' ಎಂದು ಪತ್ರಕರ್ತರು ಆಗ್ರಹಿಸಿದ್ದಾರೆ. ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಪತ್ರ ಬರೆದಿರುವ ಅವರು, 'ಇನಾಂ ವೀರಾಪುರದಲ್ಲಿ ನಡೆದ ಮರ್ಯಾದೆಗೇಡು ಹತ್ಯೆ ಹೆಸರಿನ ಜಾತಿ ಭಯೋತ್ಪಾದನೆಗೆ ಬಲಿಯಾದ ಮಾನ್ಯ ಅವರ ಹೆಸರಿನಲ್ಲಿ ಉಗ್ರ ಶಿಕ್ಷೆ ನೀಡುವ ಕಾಯ್ದೆ ರೂಪಿಸಬೇಕು' ಎಂದು ಒತ್ತಾಯಿಸಿದ್ದಾರೆ. 'ರಾಜ್ಯದಲ್ಲಿ ದಿನದಿಂದ ದಿನಕ್ಕೆ ಜಾತಿ ವೈಷಮ್ಯ ಹೆಚ್ಚಾಗುತ್ತಿದೆ. ಇದು ಆತಂಕಕಾರಿ ಬೆಳವಣಿಗೆ. ಜಾತಿ ವಿನಾಶಕ್ಕೆ ಅಥವಾ ಜಾತಿ ಆಧಾರಿತ ತಾರತಮ್ಯ, ಹಿಂಸೆಗಳಿಗೆ ಅಂತರ್ ಜಾತಿ ವಿವಾಹಗಳು ಪರಿಹಾರ ಎಂಬುದನ್ನು ಬಸವಣ್ಣನವರು, ಡಾ.ಬಿ.ಆರ್. ಅಂಬೇಡ್ಕರ್ ಅವರು ಪ್ರತಿಪಾದಿಸುವ ಮೂಲಕ ಅದನ್ನು ಅನುಷ್ಠಾನ ಮಾಡುವಲ್ಲಿ ತಮ್ಮ ಬದುಕನ್ನು ಸಮರ್ಪಿಸಿಕೊಂಡಿದ್ದಾರೆ' ಎಂದು ತಿಳಿಸಿದ್ದಾರೆ. 'ಅಂತರ್ ಜಾತಿ ವಿವಾಹಗಳನ್ನು ಒಪ್ಪಲಾರದ ಜಾತೀಯತೆಯ ರೋಗಪೀಡಿತ ಮನಸ್ಥಿತಿ ವಿಜ್ಞಾನ ಯುಗದಲ್ಲೂ ಮುಂದುವರೆದಿದೆ. ಇದು ಸಮಸಮಾಜ ನಿರ್ಮಿಸುವ ಪ್ರಯತ್ನಗಳನ್ನು ಹತ್ತಿಕ್ಕುತ್ತಿದೆ. ಮುಂದಿನ ದಿನಗಳಲ್ಲಿ ಜಾತಿವಾದಿಗಳು ಇಂತಹ ಕ್ರೌರ್ಯವನ್ನೇ ಸಾಮಾಜಿಕ ಘನತೆ, ಮೌಲ್ಯ ಎಂಬಂತೆ ಪ್ರತಿಷ್ಠಾಪಿಸುವ ಅಪಾಯವೂ ಇದೆ' ಎಂದು ಹೇಳಿದ್ದಾರೆ.

## ಖರ್ಗೆ ಮತ್ತೆ ಮೌನ

# ಸಿಎಂ ದೆಹಲಿಗೆ ಯಾನ ಡಿಕೆಶಿಗೆ ಅರಣ್ಯ ರೋದನ




• **ಉದಯವಾಹಿನಿ, ಬೆಂಗಳೂರು**

ನಾನು ಕೇವಲ ವೇದಿಕೆಯಲ್ಲಿ ಕುಳಿತು, ಭಾಷಣ ಮಾಡಿಕೊಂಡು ಹೋಗಿಲ್ಲ. ಪಕ್ಷದಲ್ಲಿ ಎಲ್ಲಾ ಕೆಲಸ ಮಾಡಿದ್ದೇನೆ ಎಂದು ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ತಿಳಿಸಿದರು.

ಎಐಸಿಸಿ ಅಧ್ಯಕ್ಷರಾದ ಮಲ್ಲಿಕಾರ್ಜುನ ಖರ್ಗೆ ಅವರನ್ನು ಭೇಟಿ ಮಾಡಿದ ನಂತರ ಹಾಗೂ ಸದಾಶಿವನಗರದ ತಮ್ಮ ನಿವಾಸದ ಬಳಿ ಡಿ.ಕೆ. ಶಿವಕುಮಾರ್ ಮಾಧ್ಯಮಗಳೊಂದಿಗೆ ಮಾತನಾಡಿದರು. ಪಕ್ಷದ ಕಾರ್ಯಕರ್ತನಾಗಿಯೇ ಇರಲು ಬಯಸುತ್ತೇನೆ ಎಂದು ದೆಹಲಿಯಲ್ಲಿ ಹೇಳಿಕೆ ನೀಡಿದ್ದರ ಬಗ್ಗೆ ಕೇಳಿದಾಗ, ನಾನು ಲೈಫ್ ಟೈಮ್ ಕಾರ್ಯಕರ್ತ. ನಾನು ಒಬ್ಬ ವರ್ಕರ್.

**ಕಾಂಗ್ರೆಸ್‌ನಲ್ಲಿ ನಾಯಕತ್ವ ಬಿಕ್ಕಟ್ಟು ವಿಚಾರ ಕಾಂಗ್ರೆಸ್ ತಲೆ ನೋವಾಗಿ ಪರಿಣಮಿಸಿದೆ ಎನ್ನಲಾಗಿದೆ, ಈ ಬಗ್ಗೆ ಮಾತನಾಡಲು ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ್ ಖರ್ಗೆ ಮತ್ತೆ ಹಿಂದೇಟು ಹಾಕಿದ್ದಾರೆ. ಪವರ್ ಶೇರಿಂಗ್ ವಿಚಾರವಾಗಿ ಮೌನ ತಾಳಿರುವ ಮಲ್ಲಿಕಾರ್ಜುನ್ ಖರ್ಗೆ, ಇಂದು ಸಹ ಕೈ ಮುಗಿಯುತ್ತಾ ಮೌನವಾಗಿ ತೆರಳಿದರು. ಇನ್ನು, ಇದೇ ವೇಳೆ ಕಾಂಗ್ರೆಸ್ ಸಿಡಬ್ಲೂಸಿ ಮೀಟಿಂಗ್ ಬಗ್ಗೆ ಮಾತನಾಡಿರುವ ಡಿಸಿಎಂ ಡಿ.ಕೆ ಶಿವಕುಮಾರ್, ನಾನು ಕರೆದ್ರೆ ಹೋಗ್ತೇನೆ, ಸಿಎಂ ಅವರಿಗೆ ಕರೆದಿದ್ದಾರೆ. ಹೈಕಮಾಂಡ್ ನಾಯಕರು ಆಹ್ವಾನ ಕೊಟ್ರೆ ಹೋಗುತ್ತೇನೆ, ಏನಾದರೂ ಕೆಲಸ ಇದ್ದರೆ ಹೋಗುತ್ತೇನೆ, ಸದ್ಯ ದೆಹಲಿಗೆ ಹೋಗುವ ಯಾವುದೇ ಪ್ಲಾನ್ ಇಲ್ಲಾ ಎಂದು ಡಿಸಿಎಂ ಡಿ.ಕೆ ಶಿವಕುಮಾರ್ ಉತ್ತರಿಸಿದರು.**

**ಖರ್ಗೆ ಮತ್ತೆ ಮೌನ**



ಅಧ್ಯಕ್ಷನಾದಾಗಲೂ ಪಕ್ಷದ ಬಾವುಟ ಕಟ್ಟಿದ್ದೇನೆ. ಕಾರ್ಯಕರ್ತನಾದಾಗಲೂ ಬಾವುಟ ಕಟ್ಟಿದ್ದೇನೆ, ಪೋಸ್ಟರ್ ಅಂಟಿಸಿದ್ದೇನೆ, ಕಸ ಗುಡಿಸಿದ್ದೇನೆ. ಕಾಂಗ್ರೆಸ್ ಪಕ್ಷಕ್ಕೆ ಏನೇನು ಬೇಕೋ ಎಲ್ಲವನ್ನೂ ಮಾಡಿದ್ದೇನೆ ಎಂದರು. ದೆಹಲಿಯಲ್ಲಿ ನಡೆಯುವ ಸಿಡಬ್ಲ್ಯೂಸಿ ಸಭೆಗೆ ತಾವು ತೆರಳುವಿರಾ ಎಂದು ಕೇಳಿದಾಗ, ನನ್ನನ್ನು ಕರೆದರೆ ಖಂಡಿತಾ ಹೋಗುತ್ತೇನೆ. ಆದರೆ ಇದುವರೆಗೂ ಕರೆದಿಲ್ಲ ಎಂದು ಉತ್ತರಿಸಿದರು. ಮುಖ್ಯಮಂತ್ರಿಯವರನ್ನು ಸಭೆಗೆ ಆಹ್ವಾನಿಸಲಾಗಿದೆಯಲ್ಲ ಎಂದು ಹೇಳಿದಾಗ, ಇರಬಹುದು, ಸಿಎಂಗೆ ಆಹ್ವಾನ ನೀಡಿದ್ದಾರೆ ಎಂದು ನನಗೂ ಗೊತ್ತಿದೆ. ಡೆಪ್ಯುಟಿ ಸಿಎಂಗೆ ಕರೆದಿಲ್ಲ ಎಂದು ತಿಳಿಸಿದರು. ಕೆಪಿಸಿಸಿ ಅಧ್ಯಕ್ಷರಿಗೆ ಆಹ್ವಾನವಿಲ್ಲವೇ ಎಂದು ಕೇಳಿದಾಗ, ಸಮಿತಿಯ ವಿಸ್ತರಿತವಾದ ಸಭೆಗೆ ಕರೆಯುತ್ತಾರೆ ಎಂದರು.

**ಸುಮ್ನೆ ಭಾಷಣ ಮಾಡ್ಕೊಂಡು ಹೋಗಿಲ್ಲ...**

ಖರ್ಗೆ ಅವರ ಜೊತೆ ನಾಯಕತ್ವ ವಿಚಾರವಾಗಿ ಚರ್ಚೆ ನಡೆಸಿದರಾ ಎಂಬ ಪ್ರಶ್ನೆಗೆ, ಯಾವ ವಿಚಾರವಾಗಿಯೂ ಚರ್ಚೆ ನಡೆಸಿಲ್ಲ. ನಾನು ಚರ್ಚೆ ಮಾಡುವುದೂ ಇಲ್ಲ. ಮಾಡುವ ಅವಶ್ಯಕತೆಯೂ ಇಲ್ಲ. ನಾನು ಮತ್ತು ಸಿದ್ದರಾಮಯ್ಯ ಅವರು ಈಗಾಗಲೇ ಇದರ ಬಗ್ಗೆ ಹೇಳಿದ್ದೇವೆ. ಹೈಕಮಾಂಡ್ ಏನು ಹೇಳುತ್ತದೆಯೋ ಅದರಂತೆ ಕೆಲಸ ಮಾಡಿಕೊಂಡು ಹೋಗುತ್ತೇವೆ. ಅವರು ಏನು ಹೇಳುತ್ತಾರೋ ಆ ರೀತಿ ಕೇಳಿಕೊಂಡು ಹೋಗುತ್ತೇವೆ ಎಂದು ಸ್ಪಷ್ಟಪಡಿಸಿದರು.

ಸ್ಥಳೀಯ ಮಟ್ಟದಲ್ಲಿ ಗೊಂದಲ ಬಗೆಹರಿಸಿಕೊಳ್ಳಿ ಎಂದು ಮಲ್ಲಿಕಾರ್ಜುನ ಖರ್ಗೆ ಅವರು ಹೇಳಿರುವ ಬಗ್ಗೆ ಕೇಳಿದಾಗ, ಹಿರಿಯರು ಮಾರ್ಗದರ್ಶನ ನೀಡುತ್ತಾರೆ ಎಂದರು. ಈ ಸಭೆಯಲ್ಲಿ ಮನರೇಗಾ ಯೋಜನೆಯ ಹೆಸರು ಬದಲಾವಣೆ, ಅನುದಾನದಲ್ಲಿ ರಾಜ್ಯದ ಪಾಲನ್ನು ಶೇ.40ಕ್ಕೆ ಹೆಚ್ಚಿಸಿರುವುದು ಸೇರಿದಂತೆ ರೈತರಿಗೆ ಮಾರಕವಾದಂತಹ ಬದಲಾವಣೆಗಳನ್ನು ಕೇಂದ್ರ ಸರ್ಕಾರ ಜಾರಿಗೆ ತಂದಿದೆ. ಈ ವಿಚಾರವಾಗಿ ಒಂದು ರಾಜ್ಯದ ಅಧ್ಯಕ್ಷನಾಗಿ ನನ್ನ ಅಭಿಪ್ರಾಯಗಳನ್ನು ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರಿಗೆ ತಿಳಿಸಿದ್ದೇನೆ. ಅವರ ಜತೆ ಯಾವ ರಾಜಕೀಯ ಮಾತುಕತೆಯನ್ನೂ ಮಾಡಿಲ್ಲ ಎಂದು ಸ್ಪಷ್ಟನೆ ನೀಡಿದರು. ಮನರೇಗಾ ಯೋಜನೆಯಿಂದ ಪಂಚಾಯತ್‌ಗಳಿಗೆ ಅನುಕೂಲವಾಗುತ್ತಿತ್ತು. ಪಂಚಾಯತ್ ಸದಸ್ಯರುಗಳಿಗೆ ಶಕ್ತಿಯಿತ್ತು. ಪ್ರತಿ ಕೂಲಿ ಕಾರ್ಮಿಕರ ಖಾತೆಗೆ ಹಣ ಸಂದಾಯವಾಗುತ್ತಿತ್ತು. ಪ್ರತಿಯೊಬ್ಬರು ಚರ್ಚೆ ನಡೆಸಿ ತಮ್ಮ ಊರಿಗೆ ಯಾವ ಕೆಲಸಗಳನ್ನು ತೆಗೆದುಕೊಳ್ಳಬೇಕು ಎನ್ನುವ ಅವಕಾಶವಿತ್ತು. ಆದರೆ ಈಗ ಕೇಂದ್ರ ಸರ್ಕಾರವೇ ಯಾವ ಜಿಲ್ಲೆಯಲ್ಲಿ ಯಾವ ಕೆಲಸ ತೆಗೆದುಕೊಳ್ಳಬೇಕು ಎಂದು ತೀರ್ಮಾನ ಮಾಡುತ್ತದಂತೆ ಎಂದು ಹೇಳಿದರು.

**ಕಾರ್ಯಕರ್ತನಾಗಿ ಕಸ ಗುಡಿಸಿದ್ದೇನೆ ಪಕ್ಷದ ಬಾವುಟ ಕಟ್ಟಿದ್ದೇನೆ**

**ಬೂದಿ ಮುಚ್ಚಿದ ಕೆಂಡದಂತೆ**

**ಸಿದ್ದರಾಮಯ್ಯ ಮತ್ತು ಡಿ.ಕೆ. ಶಿವಕುಮಾರ್ ಮಧ್ಯೆ ಅಧಿಕಾರ ಹಂಚಿಕೆಯ ವಿಚಾರ ಬೂದಿ ಮುಚ್ಚಿದ ಕೆಂಡದಂತೆ ಇದೆ. ಕಾಂಗ್ರೆಸ್ ಹೈಕಮಾಂಡ್ ಸೂಚನೆಯ ಮೇರೆಗೆ ಇವರಿಬ್ಬರೂ ಮೌನವಾಗಿದ್ದಾರೆ. ದಿನೇದಿನೆ ಮೀಟಿಂಗ್‌ಗಳು, ಮಾತುಕತೆಗಳು ನಡೆಯುತ್ತಲೇ ಇವೆ. ಕಾಂಗ್ರೆಸ್‌ನಲ್ಲಿ ಸಿಎಂ ಹುದ್ದೆ ಸುತ್ತ ನಡೆಯುತ್ತಿರುವ ಬೆಳವಣಿಗೆಗಳು, ಮಾತುಕತೆಗಳ ಬಗ್ಗೆ ಲೋಕೋಪಯೋಗಿ ಇಲಾಖೆ ಸಚಿವ ಸತೀಶ್ ಜಾರಕಿಹೊಳಿ ಪ್ರತಿಕ್ರಿಯೆ ನೀಡಿದ್ದಾರೆ. ಹೀಗಾಗಿ ಅವರಿಬ್ಬರೇ ಸಮಸ್ಯೆ ಪರಿಹಾರ ಮಾಡಿಕೊಳ್ಳಬೇಕು. ಕ್ಯಾಪ್ಟನ್ ಮತ್ತು ವೈಸ್ ಕ್ಯಾಪ್ಟನ್‌ಗೆ ಅಧ್ಯಕ್ಷರು ಹೇಳಿದ್ದಾರೆ. ಅವರೇ ಬಗೆಹರಿಸಿಕೊಳ್ಳಬೇಕು ಎಂದಿದ್ದಾರೆ. ಇಷ್ಟು ದಿನ ಇವರಿಬ್ಬರ ಮಧ್ಯೆ ರಾಜಿ ಸಂಧಾನ ಮಾಡಿಸಲು ಹೈಕಮಾಂಡ್ ಭಾರಿ ಪ್ರಯತ್ನ ಮಾಡಿತ್ತು. ಹೈಕಮಾಂಡ್ ಹೇಳುವವರೆಗೂ ನಾನೇ ಸಿಎಂ ಆಗಿರುತ್ತೇನೆ ಎಂದು ಸಿಎಂ ಸಿದ್ದರಾಮಯ್ಯ ಹೇಳಿದ್ದರು. ಆದರೆ ದಿಢೀರ್ ಆಗಿ ಹೀಗೊಂದು ಬೆಳವಣಿಗೆಯಾಗಿದೆ.**

**ರಾಜಣ್ಣ ಪ್ರತಿಕ್ರಿಯೆ..**

**ಇನ್ನು ಅಧಿಕಾರ ಹಂಚಿಕೆ ವಿಚಾರದಲ್ಲಿ ಕಾಂಗ್ರೆಸ್ ಹೈಕಮಾಂಡ್ ಮಧ್ಯಪ್ರವೇಶ ಮಾಡೋದಿಲ್ಲ ಎಂದು ಮಾಜಿ ಸಚಿವ ಕೆ.ಎನ್. ರಾಜಣ್ಣ ಕೂಡ ಹೇಳಿದ್ದಾರೆ. ಸದ್ಯ ಕಾಂಗ್ರೆಸ್‌ನಲ್ಲಿ ತಲೆದೋರಿರುವ ಅಧಿಕಾರ ಹಂಚಿಕೆ ಇಕ್ಕಟ್ಟಿನ ಪರಿಸ್ಥಿತಿಯ ಬಗ್ಗೆ ಹೈಕಮಾಂಡ್ ಪ್ರತಿಕ್ರಿಯೆ ನೀಡೋದಿಲ್ಲ ಎಂದು ಹೇಳಿದ್ದಾರೆ. ತುಮಕೂರಿನಲ್ಲಿ ಮಾತನಾಡಿದ ಅವರು, ಸಿಎಂ ಬದಲಾವಣೆ ಗೊಂದಲ ನಾವು ಸೃಷ್ಟಿ ಮಾಡಿದ್ದಲ್ಲ, ನೀವೇ ಸೃಷ್ಟಿ ಮಾಡಿರೋದು ಅದನ್ನು ನೀವೇ ಬಗೆಹರಿಸಿಕೊಳ್ಳಿ ಎಂದು ಹೈಕಮಾಂಡ್ ಸಂದೇಶ ಸಾರಿದೆ. ಇದರ ಅರ್ಥ ಸಿಎಂ ಬದಲಾವಣೆ ವಿಚಾರದಲ್ಲಿ ಹೈಕಮಾಂಡ್ ಮಧ್ಯಪ್ರವೇಶ ಮಾಡೋದಿಲ್ಲ ಅನ್ನೋದು ನನ್ನ ಭಾವನೆ ಎಂದಿದ್ದಾರೆ. ರಾಜಣ್ಣ ಮತ್ತು ಸತೀಶ್ ಜಾರಕಿಹೊಳಿ ಮಾತುಗಳನ್ನ ಕೇಳಿದ್ರೆ, ಸದ್ಯ ರಾಜ್ಯದಲ್ಲಿ ಸಿಎಂ ಹುದ್ದೆ ಬಿಡಬೇಕಾ, ಆ ಸ್ಥಾನದಲ್ಲಿ ಮುಂದುವರಿಯಬೇಕಾ ಎಂಬ ಸಂಪೂರ್ಣ ನಿರ್ಧಾರ ಸಿದ್ದರಾಮಯ್ಯನವರ ಕೈಯಲ್ಲೇ ಇದ್ದಂತಿದೆ. ಆದರೆ ಸಿದ್ದರಾಮಯ್ಯ ಅವರಂತೂ ಐದೂ ವರ್ಷಗಳ ಕಾಲ ನಾನೇ ಮುಖ್ಯಮಂತ್ರಿ ಎಂದು ಖಡಾಖಂಡಿತವಾಗಿ ಹೇಳುತ್ತಿದ್ದಾರೆ.**

## ಅರಣ್ಯ ಇಲಾಖೆ ಸಿಬ್ಬಂದಿಗೆ 1 ಕೋಟಿ ಅಪಘಾತ ವಿಮೆ


### ಹೊರಗುತ್ತಿಗೆ ಮುಂಚೂಣಿ ಸಿಬ್ಬಂದಿಗೆ 20 ಲಕ್ಷ: ಅರಣ್ಯ ಸಚಿವ ಈಶ್ವರ ಖಂಡ್ರೆ

• **ಉದಯವಾಹಿನಿ, ಬೆಂಗಳೂರು**

ಅರಣ್ಯ ಇಲಾಖೆಯ ಖಾಯಂ ಅಧಿಕಾರಿ, ಸಿಬ್ಬಂದಿಗೆ 1 ಕೋಟಿ ರೂ. ಅಪಘಾತ (ಮರಣ) ವಿಮೆ ಹಾಗೂ ಹೊರಗುತ್ತಿಗೆ ಸಿಬ್ಬಂದಿಗೆ 20 ಲಕ್ಷ ವಿಮಾ ಸೌಲಭ್ಯ ಕಲ್ಪಿಸಲು ಬ್ಯಾಂಕ್ ಆಫ್ ಬರೋಡಾದೊಂದಿಗೆ ತಿಳಿವಳಿಕೆ ಒಪ್ಪಂದ ಮಾಡಿಕೊಳ್ಳಲಾಗಿದೆ ಎಂದು ಅರಣ್ಯ, ಜೀವಿಶಾಸ್ತ್ರ ಮತ್ತು ಪರಿಸರ ಸಚಿವ ಈಶ್ವರ ಬಿ ಖಂಡ್ರೆ ಮಾಧ್ಯಮ ಹೇಳಿಕೆಯಲ್ಲಿ ತಿಳಿಸಿದ್ದಾರೆ.

ವನ ಮತ್ತು ವನ್ಯಜೀವಿಗಳ ರಕ್ಷಣೆಗಾಗಿ ಮುಂಚೂಣಿ ಸಿಬ್ಬಂದಿಗಳು/ ಹಸಿರು ಸೈನಿಕರು ಅಪಾಯ ಎದಿಸುತ್ತಾ ಹಗಲಿರುಳು ಶ್ರಮಿಸುತ್ತಿದ್ದು, ಇಲಾಖೆ ಕೆಲವು ಶೌರ್ಯಶಾಲಿ ಹಸಿರು ಯೋಧರನ್ನು ಕಳೆದುಕೊಂಡಿದೆ. ಇವರೆಲ್ಲರಿಗೂ ಸಾಮಾಜಿಕ ಮತ್ತು ಆರ್ಥಿಕ ಭದ್ರತೆ ಒದಗಿಸಲು ಈ ತಿಳಿವಳಿಕೆ ಒಬ್ಬಂದ ಮಾಡಿಕೊಳ್ಳಲಾಗಿದೆ ಎಂದು ವಿವರಿಸಿದ್ದಾರೆ. ಬ್ಯಾಂಕ್ ಆಫ್ ಬರೋಡಾದಲ್ಲಿ ಇಲಾಖೆಯ ನೌಕರರು ಪಿಂಚಣಿ ಖಾತೆಯನ್ನು ಮುಂದುವರಿಸಿದರೆ, ಈ ವೈಯಕ್ತಿಕ ಅಪಘಾತ ವಿಮಾ ರಕ್ಷಣೆಯ ಸೌಲಭ್ಯ 70 ವರ್ಷ ವಯಸ್ಸಿನವರೆಗೆ ಮುಂದುವರಿಯುತ್ತದೆ. ಇದಲ್ಲದೆ, ಖಾಯಂ ಉದ್ಯೋಗಿಗಳಿಗೆ ರೂ.10.00 ಲಕ್ಷಗಳ ಜೀವ ವಿಮಾ ರಕ್ಷಣೆಯನ್ನು ಸಹ ಬ್ಯಾಂಕ್ ಒದಗಿಸುತ್ತದೆ ಎಂದು ತಿಳಿಸಿದ್ದಾರೆ.

ಕರ್ನಾಟಕ ಅರಣ್ಯ ಇಲಾಖೆಯ ನೌಕರರು ಮತ್ತು ಅವರ ಕುಟುಂಬಗಳ ಹಿತದೃಷ್ಟಿಯಿಂದ ಕರ್ನಾಟಕ ಅರಣ್ಯ ಇಲಾಖೆಯು ಬ್ಯಾಂಕ್ ಆಫ್ ಬರೋಡಾದೊಂದಿಗೆ ತಿಳಿವಳಿಕೆ ಒಪ್ಪಂದ ಮಾಡಿಕೊಂಡಿದ್ದು, ಹಲವು ವಿಶೇಷ ಸವಲತ್ತುಗಳೂ ಲಭಿಸಲಿವೆ. ಈ ಬಗ್ಗೆ ಎಲ್ಲರಿಗೂ ಅರಿವು ಮೂಡಿಸುವಂತೆ ಮತ್ತು ಬಿಒಬಿಯಲ್ಲಿ ಸಂಬಳ ಖಾತೆ ತೆರೆಯಲು ಸೂಚಿಸಲಾಗಿದೆ ಎಂದು ಈಶ್ವರ ಖಂಡ್ರೆ ತಿಳಿಸಿದ್ದಾರೆ.



5 ಹುಲಿಗಳ ರಕ್ಷಣೆ ಕಾರ್ಯಾಚರಣೆಗೆ ಅಗತ್ಯವಿರುವ ಎಲ್ಲಾ ಸಲಕರಣೆ, ಹೆಚ್ಚುವರಿ ಪಶುವೈದ್ಯರು, ಶಾರ್ಪ್ ಶೂಟರ್‌ಗಳನ್ನು ಸಹ ನಿಯೋಜನೆ ಮಾಡುವಂತೆ ಹಾಗೂ ಹೆಚ್ಚುವರಿಯಾಗಿ ಆನೆಗಳನ್ನು ತಕ್ಷಣವೇ ತರಿಸಿಕೊಳ್ಳುವಂತೆಯೂ ಅರಣ್ಯ ಸಚಿವ ಈಶ್ವರ ಖಂಡ್ರೆ ಸ್ಪಷ್ಟವಾಗಿ ತಿಳಿಸಿದರು.

**ಜನರ ಜೀವ ಪರಮೋಚ್ಚ:** ಜನರ ಜೀವದ ಸುರಕ್ಷತೆ ಅತ್ಯಂತ ಪರಮೋಚ್ಚವಾದ್ದು, ಅದೇ ವೇಳೆ ವನ್ಯಜೀವಿಗಳ ರಕ್ಷಣೆಯೂ ಅಷ್ಟೇ ಮುಖ್ಯ ಎಂಬುದನ್ನು ಗಮನದಲ್ಲಿಟ್ಟುಕೊಂಡು ಕಾರ್ಯಾಚರಣೆ ನಡೆಸಬೇಕು, ಸಿಬ್ಬಂದಿಯ ಸುರಕ್ಷತೆಗೆ ಎಲ್ಲ ಅಗತ್ಯ ಮುನ್ನೆಚ್ಚರಿಕಾ ಕ್ರಮ ಕೈಗೊಳ್ಳಬೇಕು ಜೊತೆಗೆ ಜನರು ಯಾರೂ ಕಾರ್ಯಾಚರಣೆ ಸ್ಥಳಕ್ಕೆ ಬಾರದಂತೆ ಸೆಕ್ಷನ್ 144 ನ್ನು ಕಟ್ಟುನಿಟ್ಟಾಗಿ ಜಾರಿ ಮಾಡಬೇಕು ಎಂದು ಸೂಚಿಸಿದರು.

ಇ-ಗಸ್ತು ಹೆಚ್ಚಿಸಬೇಕು. ಎಲ್ಲಾ ಅರಣ್ಯ ಗಸ್ತು ಸಿಬ್ಬಂದಿ ಹಾಗೂ ಅಧಿಕಾರಿಗಳ ಮೊಬೈಲ್‌ನಲ್ಲಿ ಈ ಆಪ್ ಅಳವಡಿಸಿ, ಗಸ್ತಿನ ಮೇಲೆ ಕೇಂದ್ರ ಕಚೇರಿಯಿಂದ ನಿಗಾ ಇಡಬೇಕು. ಗಸ್ತಿನಲ್ಲಿ ಯಾವುದೇ ಲೋಪ ಆಗದಂತೆ ಪೂರ್ಣ ಪ್ರಮಾಣದಲ್ಲಿ ಎಚ್ಚರಿಕೆ ವಹಿಸಬೇಕು ಹಾಗೂ ಕಮಾಂಡ್ ಕೇಂದ್ರಗಳನ್ನು ವಿಳಂಬವಿಲ್ಲದೆ ಎಲ್ಲೆಡೆ ಕಾರ್ಯಾರಂಭ ಮಾಡಬೇಕು ಎಂದು ಹಿರಿಯ ಅಧಿಕಾರಿಗಳಿಗೆ ಸೂಚನೆ ನೀಡಿದ್ದಾರೆ.

**ವೈಯಕ್ತಿಕ ಅಪಘಾತ ವಿಮಾ ರಕ್ಷಣೆ**

## ಮೇಕೆದಾಟು ಯೋಜನೆ ಆರಂಭಿಸಲು ಕೇಂದ್ರಕ್ಕೆ ಶೀಘ್ರವೇ ದಾಖಲೆ ಸಲ್ಲಿಕೆ

### ● ಎರಡು ತಿಂಗಳೊಳಗೆ ಮೇಕೆದಾಟು ಯೋಜನೆಯ ವರದಿಯನ್ನು ಕೇಂದ್ರ ಸರ್ಕಾರಕ್ಕೆ ಸಲ್ಲಿಸಲು ಸಿದ್ಧತೆ

• **ಉದಯವಾಹಿನಿ, ಬೆಂಗಳೂರು**

ಕಾವೇರಿ ನದಿಗೆ ಅಡ್ಡಲಾಗಿ ಮೇಕೆದಾಟು ಯೋಜನೆ ವಿರುದ್ಧ ತಮಿಳುನಾಡು ಸಲ್ಲಿಸಿದ್ದ ಅರ್ಜಿಯನ್ನು ಸುಪ್ರೀಂ ಕೋರ್ಟ್ ವಜಾಗೊಳಿಸಿದ ಹಿನ್ನೆಲೆಯಲ್ಲಿ, ಯೋಜನೆಗೆ ಸಂಬಂಧಿಸಿದ ಎಲ್ಲಾ ದಾಖಲೆಗಳನ್ನು ಎರಡು ತಿಂಗಳಲ್ಲಿ ಕೇಂದ್ರ ಸರ್ಕಾರಕ್ಕೆ ಸಲ್ಲಿಸಲು ಕರ್ನಾಟಕ ಸರ್ಕಾರ ಸಿದ್ಧತೆ ನಡೆಸಿದೆ. ಕೇಂದ್ರ ಜಲಶಕ್ತಿ ಸಚಿವಾಲಯದ ನದಿ ಜೋಡಣೆ ಸಭೆಯಲ್ಲಿ ಪಾಲ್ಗೊಂಡಿದ್ದ ಡಿಸಿಎಂ ಡಿ.ಕೆ. ಶಿವಕುಮಾರ್ ಅವರು ಈ ವಿಷಯವನ್ನು ತಿಳಿಸಿದ್ದು, ಪರಿಷ್ಕೃತ ಡಿಪಿಆರ್ ಅನ್ನು ಕೇಂದ್ರಕ್ಕೆ ಸಲ್ಲಿಸುವುದಾಗಿ ಹೇಳಿದ್ದಾರೆ. ರಾಮನಗರದಲ್ಲಿ ಯೋಜನೆ ಅನುಷ್ಠಾನಕ್ಕೆ ಕಚೇರಿ ಆರಂಭವಾಗಲಿದ್ದು, ಅರಣ್ಯ ಭೂಮಿ ಮತ್ತು ಅದಕ್ಕೆ ಪರ್ಯಾಯ ಭೂಮಿ ಗುರುತಿಸುವ ಕಾರ್ಯ ನಡೆಯುತ್ತಿದೆ. ಯೋಜನೆಗೆ ಸಂಬಂಧಿಸಿದ ತಾಂತ್ರಿಕ ನಿರ್ಧಾರಗಳು ಕೇಂದ್ರ ಜಲ ಆಯೋಗ ವ್ಯಾಪ್ತಿಗೆ ಒಳಪಡಲಿದ್ದು, ಕರ್ನಾಟಕದ ಪ್ರಸ್ತಾವ ಸಲ್ಲಿಕೆಯ ನಂತರ ಕೇಂದ್ರ ಜಲ ಆಯೋಗ ಮುಂದಿನ ಪ್ರಕ್ರಿಯೆ ನಡೆಸಲಿದೆ.

ಸುಪ್ರೀಂ ಕೋರ್ಟ್ ತಮಿಳುನಾಡಿನ ಅರ್ಜಿಯನ್ನು ವಜಾ ಮಾಡುವಾಗ, ಯೋಜನೆಯ ವಿಸ್ತೃತವಾದ ಯೋಜನಾ ವರದಿ ಸಿದ್ಧಪಡಿಸಲು ಮಾತ್ರ ಕೇಂದ್ರ ಜಲ ಆಯೋಗ ಅನುಮತಿ ನೀಡಿದೆ. ತಮಿಳುನಾಡಿನ ಆಕ್ಷೇಪಣೆಗಳನ್ನು ತಜ್ಞರು ಪರಿಶೀಲಿಸಿದ ನಂತರವೇ ಈ ಪ್ರಕ್ರಿಯೆ ನಡೆದಿದೆ. ಈ ಹಂತದಲ್ಲಿ ಅರ್ಜಿಯನ್ನು ಪ್ರಶ್ನಿಸಿದ್ದು ಅವಧಿ ಪೂರ್ವ ಎಂದು ನ್ಯಾಯಾಲಯ ಅಭಿಪ್ರಾಯಪಟ್ಟಿತ್ತು. ತಮಿಳುನಾಡಿನ ಆಕ್ಷೇಪಣೆಗಳು, ತಜ್ಞರ ಅಭಿಪ್ರಾಯಗಳನ್ನು ಪರಿಗಣಿಸಿದ ನಂತರವೇ ಕೇಂದ್ರ ಜಲ ಆಯೋಗ ಯೋಜನೆಗೆ ಅನುಮೋದನೆ ನೀಡಲಿದೆ ಎಂದು ನ್ಯಾಯಾಲಯ ಹೇಳಿತ್ತು. ಇದೇ ವೇಳೆ, ಕೃಷ್ಣಾ ಮೇಲ್ದಂಡೆ ಯೋಜನೆಗೆ ಕೇಂದ್ರ ಸರ್ಕಾರ ಅಧಿಸೂಚನೆ ಹೊರಡಿಸಬೇಕು ಎಂದು ಒತ್ತಾಯಿಸಲಾಯಿತು.


ಈ ಸಂಬಂಧ ಈಗಾಗಲೇ ಎರಡು ಬಾರಿ ಸಭೆ ಮುಂದೂಡಲ್ಪಟ್ಟಿದೆ. ಮಹದಾಯಿ ಯೋಜನೆ ವಿಚಾರವಾಗಿ ಅಧಿಕಾರಿಗಳು ಸಭೆ ನಡೆಸಿದ್ದಾರೆ.

**ರಾಮನಗರದಲ್ಲಿ ಕಚೇರಿ ಸ್ಥಾಪನೆಗೆ ಚಾಲನೆ**



**ಜಿಲ್ಲಾಧಿಕಾರಿಗೆ ಯೋಜನೆಯ ಜವಾಬ್ದಾರಿ**

**ಮಂಡ್ಯ ಅಥವಾ ಬೆಂಗಳೂರು ದಕ್ಷಿಣ ಜಿಲ್ಲೆಯ ಜಿಲ್ಲಾಧಿಕಾರಿಗೆ ಯೋಜನೆಯ ಜವಾಬ್ದಾರಿ ನೀಡಬೇಕು ಎಂದು ಡಿಸಿಎಂ ಡಿ.ಕೆ. ಶಿವಕುಮಾರ್ ತಿಳಿಸಿದರು. ರಾಮನಗರದಲ್ಲಿ ಯೋಜನೆ ಅನುಷ್ಠಾನಕ್ಕೆ ಕಚೇರಿ ಆರಂಭಿಸಲಾಗುತ್ತಿದೆ. ಯೋಜನೆಗೆ ಅಗತ್ಯವಿರುವ ಅರಣ್ಯ ಭೂಮಿ ಮತ್ತು ಅದಕ್ಕೆ ಪರ್ಯಾಯವಾಗಿ ನೀಡಬೇಕಾದ ಭೂಮಿ ಕುರಿತು ತೀರ್ಮಾನವಾಗಬೇಕಿದೆ. ಈಗಾಗಲೇ ಪರ್ಯಾಯ ಭೂಮಿ ಗುರುತಿಸಲಾಗಿದ್ದು, ಎಲ್ಲವನ್ನೂ ಪೂರ್ಣಗೊಳಿಸಿ ಹಂತ ಹಂತವಾಗಿ ಮುಂದುವರಿಯಲಾಗುವುದು ಎಂದು ಅವರು ವಿವರಿಸಿದರು.**



ಈ ಯೋಜನೆ ವಿಚಾರದಲ್ಲಿ ಅರಣ್ಯ ಇಲಾಖೆಯ ಮೇಲೆ ಒತ್ತಡ ಹೇರುವಂತೆಯೂ ಕೋರಲಾಗಿದೆ ಎಂದು ಡಿಸಿಎಂ ಡಿ.ಕೆ. ಶಿವಕುಮಾರ್ ಹೇಳಿದರು.

**ಏನಿದು ಮೇಕೆದಾಟು ಯೋಜನೆ:** ಮೇಕೆದಾಟು ಯೋಜನೆ ಎಂದರೆ ಬೆಂಗಳೂರು ಮತ್ತು ಸುತ್ತಮುತ್ತಲಿನ ಪ್ರದೇಶಗಳಿಗೆ ಕುಡಿಯುವ ನೀರು ಪೂರೈಸಲು ಕಾವೇರಿ ಮತ್ತು ಅರ್ಕಾವತಿ ನದಿಗಳ ಸಂಗಮದ ಬಳಿ ಸಮತೋಲನ ಜಲಾಶಯ ನಿರ್ಮಾಣದ ಮಹತ್ವಾಕಾಂಕ್ಷಿ ಯೋಜನೆ; ಇದರ ಮುಖ್ಯ ಉದ್ದೇಶ 4.75 ಟಿಎಂಸಿ ನೀರು ಸಂಗ್ರಹಿಸಿ, 400 ಮೆಗಾವ್ಯಾಟ್ ವಿದ್ಯುತ್ ಉತ್ಪಾದಿಸುವುದಾಗಿದೆ, ಆದರೆ ತಮಿಳುನಾಡಿನ ವಿರೋಧ ಮತ್ತು ಕೇಂದ್ರದ ಅನುಮತಿ ಅಡೆತಡೆಗಳಿಂದಾಗಿ ಇದು ವಿಳಂಬವಾಗಿದ್ದು, ಕರ್ನಾಟಕ ಸರ್ಕಾರ ಹೊಸ ಡಿಪಿಆರ್ ಸಿದ್ಧಪಡಿಸಿ ಅನುಷ್ಠಾನಕ್ಕೆ ಮುಂದಾಗಿದೆ.

**ಈ ದಿನದ ದರ** | **ಪೆಟ್ರೋಲ್:** 102.92 ₹/L | **ಡೀಸೆಲ್ :** 90.99 ₹/L | **ಬಂಗಾರ:** ₹13,925/Gram24ct ₹12,765/Gram22ct | **ಬೆಳ್ಳಿ:** ₹234.00/Gram

# ಜಮೀರ್ ಆಪ್ತ ಕಾರ್ಯದರ್ಶಿಗೆ ಲೋಕಾಯುಕ್ತ ಶಾಕ್: 13 ಸ್ಥಳಗಳಲ್ಲಿ ಶೋಧ, ಸಿಕ್ಕಿದ್ದೆಷ್ಟು ಕೋಟಿ ಗೊತ್ತಾ?

• **ಉದಯವಾಹಿನಿ, ಬೆಂಗಳೂರು**

ಸಚಿವ ಜಮೀರ್ ಅಹ್ಮದ್ ಖಾನ್ ಆಪ್ತ ಕಾರ್ಯದರ್ಶಿಗೆ ಲೋಕಾಯುಕ್ತ ಬುಧವಾರ ಶಾಕ್ ಕೊಟ್ಟಿದೆ. ಸರ್ದಾರ್ ಸರ್ಫ್‌ರಾಜ್ ಖಾನ್ ಅವರಿಗೆ ಸೇರಿದ ಸ್ಥಳಗಳಲ್ಲಿ ದಾಳಿ ನಡೆಸಿದ ಲೋಕಾಯುಕ್ತ ಪೊಲೀಸರು, 14.38 ಕೋಟಿ ಮೌಲ್ಯದ ಅಕ್ರಮ ಆಸ್ತಿಯನ್ನು ಪತ್ತೆ ಮಾಡಿದ್ದಾರೆ.

ಸಹಕಾರ ಸಂಘಗಳ ಲೆಕ್ಕಪರಿಶೋಧನಾ ವಿಭಾಗದ ನಿರ್ದೇಶಕರಾಗಿರುವ ಸರ್ಫ್‌ರಾಜ್, ಬಹಳಷ್ಟು ವರ್ಷ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ (ಈಗಿನ ಜಿಬಿಎ) ಕಾರ್ಯ ನಿರ್ವಹಿಸುತ್ತಿದ್ದರು. ನಿಯೋಜನೆ ಮೇರೆಗೆ ಸಚಿವಾಲಯದಲ್ಲಿದ್ದಾರೆ. ಅವರ ನಿವೃತ್ತಿಗೆ ಕೆಲವೇ ದಿನಗಳು ಉಳಿದಿವೆ. ಈ ಮಧ್ಯೆ ಸರ್ಫರಾಜ್ ಖಾನ್ ವಿರುದ್ಧ ಬಾಗಲಕೋಟೆಯ ಲೋಕಾಯುಕ್ತ ಪೊಲೀಸ್ ಠಾಣೆಯಲ್ಲಿ ದೂರು


ಉದಯವಾಹಿನಿ ಚಿತ್ರ

ದಾಖಲಾಗಿತ್ತು. ಆ ದೂರಿನ ಅನ್ವಯ ಬೆಂಗಳೂರು ಲೋಕಾಯುಕ್ತ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಿಸಲಾಗಿತ್ತು.

ಇದರಂತೆ ಬೆಂಗಳೂರು, ಕೊಡಗು ಸೇರಿ ಸರ್ಫ್‌ರಾಜ್ ಖಾನ್ ಅವರಿಗೆ ಸೇರಿದ ಒಟ್ಟು 13 ಸ್ಥಳಗಳಲ್ಲಿ ಲೋಕಾಯುಕ್ತ ಪೊಲೀಸರು ಬುಧವಾರ ಬೆಳಿಗ್ಗೆ ದಾಳಿ ನಡೆಸಿದ್ದು, ನಗರದ ಹಲಸೂರಿನಲ್ಲಿರುವ ಅಧಿಕಾರಿ ಅವರ ಮನೆ, ಅವರ ಆಪ್ತರ ಮನೆ ಮತ್ತು ಕಚೇರಿಗಳು, ಅವರಿಗೆ ಸೇರಿದ ಕೊಡಗಿನ ತೋಟದ ಮನೆಗಳಲ್ಲಿ ಶೋಧ ನಡೆಸಿದ್ದಾರೆ.

ದಾಳಿ ವೇಳೆ ಒಟ್ಟು ರೂ.2.99 ಕೋಟಿ ಮೌಲ್ಯದಷ್ಟು ಚಿನ್ನಾಭರಣಗಳು, ರೂ.66,500 ನಗದು ಮತ್ತು ರೂ.1.64 ಕೋಟಿ ಮೌಲ್ಯದ ವಾಹನಗಳು ಪತ್ತೆಯಾಗಿವೆ. ಅಧಿಕಾರಿ ಮತ್ತು ಅವರ ಕುಟುಂಬದವರ ಹೆಸರಿನಲ್ಲಿರುವ ಬ್ಯಾಂಕ್ ಖಾತೆಗಳಲ್ಲಿ ಒಟ್ಟು ರೂ.1.29 ಕೋಟಿ ಠೇವಣಿ ಇವೆ. ಇವೆಲ್ಲವುಗಳ ಮೌಲ್ಯವು ಅಧಿಕಾರಿ ಅವರ ಅಧಿಕೃತ ಮೂಲದ ಆದಾಯಕ್ಕಿಂತ ಹಲವು ಪಟ್ಟು ಹೆಚ್ಚು. ಈ ಬಗ್ಗೆ ವಿವರಣೆ ನೀಡುವಂತೆ ಸೂಚಿಸಲಾಗಿದೆ ಎಂದು ತಿಳಿಸಿವೆ. ಈ ನಡುವೆ ಅಂದಾಜು ರೂ.8.44 ಕೋಟಿ ಮೌಲ್ಯದ 37 ಎಕರೆ ಜಮೀನು, 4 ಮನೆಗಳಿಗೆ ಸಂಬಂಧಿಸಿದ ದಾಖಲೆ ಪತ್ರಗಳು ಪತ್ತೆಯಾಗಿದ್ದು, ಇವು ಸರ್ಫ್‌ರಾಜ್ ಮತ್ತು ಕುಟುಂಬದವರ ಹೆಸರಿನಲ್ಲಿವೆ ಎಂದು ತಿಳಿದುಬಂದಿದೆ.

ಆರೋಪಿ ಅಧಿಕಾರಿಯು ಬೇನಾಮಿ ಹೆಸರಿನಲ್ಲಿ ಆಸ್ತಿ ಹೊಂದಿದ್ದಾರೆಯೇ ಎಂಬುದರ ಬಗ್ಗೆ ಶೋಧ ನಡೆಯುತ್ತಿದೆ ಎಂದು ಮೂಲಗಳು ಮಾಹಿತಿ ನೀಡಿವೆ. ಏತನ್ಮಧ್ಯೆ, ಲೋಕಾಯುಕ್ತ ದಾಳಿ ಕುರಿತು ಪ್ರತಿಕ್ರಿಯೆ ನೀಡಿರುವ ಜಮೀರ್, ಈ ಬಗ್ಗೆ ನನಗೆ ಮಾಹಿತಿ ಇಲ್ಲ. ಸರ್ಫ್‌ರಾಜ್ ಶ್ರೀಮಂತ ಕುಟುಂಬದಿಂದ ಬಂದವರು, ಅವರ ಮೇಲೆ ದಾಳಿ ನಡೆಸಿರುವುದೇಕೆ ಎಂಬುದು ನನಗೆ ತಿಳಿದಿಲ್ಲ ಎಂದು ಹೇಳಿದ್ದಾರೆ.

## ಸಿದ್ಧಸೂಕ್ತಿ



**ಡಾ ಆರೂಢಭಾರತೀ ಸ್ವಾಮೀಜಿ**
**ಶ್ರೀ ಸಿದ್ಧಾರೂಢ ಮಿಷನ್ ಆಶ್ರಮ ರಾಮೋಹಳ್ಳಿ**

### ಯತೋ ವಾಚೋ ನಿವರ್ತಂತೇ

ಅಪ್ರಾಪ್ಯ ಮನಸಾ ಸಹ.
ಆನಂದಂ ಬ್ರಹ್ಮಣೋ ವಿದ್ವಾನ್
ನಬಿಭೇತಿ ಕುತಶ್ಚನ.

ತೈತ್ತಿರೀಯ ಉಪನಿಷತ್ತಿನ ಬ್ರಹ್ಮಾನಂದವಲ್ಲಿಯ ಮಂತ್ರವಿದು. ಬ್ರಹ್ಮ ಪರಮಾತ್ಮನನ್ನು ತಿಳಿದವನು ಯಾವುದರಿಂದಲೂ ಭಯಪಡುವುದಿಲ್ಲ. ಆ ಪರಮಾತ್ಮ ಹೇಗಿದ್ದಾನೆ? ಪರಮಾತ್ಮ ಈ ಜಗದ ರಹಸ್ಯ. ಆತ ಮನ ವಾಣಿಗೆ ಅಗೋಚರ. ಮಾತು ವರ್ಣಿಸಲಾಗದು. ಸೋತು ನಿಲ್ಲುವುದು. ಮನಸ್ಸು ಊಹಿಸದು. ಆತ ಊಹೆಗೆ ಮೀರಿದವ. ಆಧುನಿಕ ವಿಜ್ಞಾನಿಗಳೂ ಜಗದ ರಹಸ್ಯ ಅಂತಿಮ ಸತ್ಯದ ಬಗ್ಗೆ ಮೌನ ತಾಳಿದ್ದಾರೆ. ಜಗದ ವೈವಿಧ್ಯ ಜೀವಿಗಳ ಹುಟ್ಟು ಬೆಳವಣಿಗೆ ಇರುವಿಕೆ ಅತ್ಯಂತ ಸೋಜಿಗ. ಸಾವು ಪರಮಾಶ್ಚರ್ಯ. ಸಾವಿನ ನಂತರ ಏನು? ಏಕೆ ಹೀಗೆ ಎಂಬುದಕ್ಕೆ ಯಾರು ತಾನೇ ಉತ್ತರಿಸಿಯಾರು? ಈ ರಹಸ್ಯವನ್ನೇ ಪರಮಾತ್ಮ ಪರಬ್ರಹ್ಮ ಎನ್ನುತ್ತೇವೆ. ಆದ್ದರಿಂದಲೇ ಮನ ವಾಣಿಗೆ ಅಗೋಚರ. ಪ್ರತಿ ವಸ್ತು ಜೀವಿ ಈ ಪರಮಾತ್ಮನ ಆವಿಷ್ಕಾರ. ಇದನ್ನು ತಿಳಿದವನು ಹೆದರಲಾರ. ದ್ವಿತೀಯಾದ್ವೈ ಭಯಂ ಭವತಿ = ಎರಡನೆಯದರಿಂದ ಭಯ ಎನ್ನುತ್ತದೆ ಬೃಹದಾರಣ್ಯಕ ಉಪನಿಷತ್. ಅವನು ಬೇರೆ ನಾನು ಬೇರೆ ಎಂದಾಗ ಅವನೆಲ್ಲಿ ನನಗೆ ತೊಂದರೆ ಕೊಟ್ಟಾನು ಇತ್ಯಾದಿ ಭಯ. ಒಂದೇ ಎಂದಾದಾಗ ಭಯವಿಲ್ಲ.


# ಚರ್ಚ್‌ಗಳು, ಮಾಲ್, ರಸ್ತೆಗಳಲ್ಲಿ ವಾಹನ ಸಂಚಾರ, ಪಾರ್ಕಿಂಗ್ ಇಲ್ಲ

## ಬೆಂಗಳೂರಿನಲ್ಲಿ ಕ್ರಿಸ್ ಮಸ್, ಹೊಸ ವರ್ಷದ ಸಂಭ್ರಮದ ಹಿನ್ನೆಲೆಯಲ್ಲಿ ಹೊಸ ಟ್ರಾಫಿಕ್ ನಿರ್ಬಂಧಗಳನ್ನು ಜಾರಿ

• **ಉದಯವಾಹಿನಿ, ಬೆಂಗಳೂರು**

ಕ್ರಿಸ್‌ಮಸ್ ಮತ್ತು ಹೊಸ ವರ್ಷದ ಸಂಭ್ರಮಾಚರಣೆಗಳ ಹಿನ್ನೆಲೆಯಲ್ಲಿ ಹಲವು ಪ್ರಾಂತ್ಯಗಳಲ್ಲಿ ಹೆಚ್ಚಿನ ಜನಸಂದಣಿ ಹಾಗೂ ಹಲವು ರಸ್ತೆಗಳಲ್ಲಿ ವಾಹನ ಸಂಚಾರ ಹೆಚ್ಚಾಗುವ ಸಾಧ್ಯತೆಯಿದೆ. ಹಾಗಾಗಿ, ಬೆಂಗಳೂರು ಸಂಚಾರ ಪೊಲೀಸ್ ಇಲಾಖೆ, ಪುಲಕೇಶಿನಗರ, ಮಹದೇವಪುರ ಸೇರಿ ಹಲವಾರು ಕಡೆ ಸಂಚಾರ ನಿರ್ಬಂಧಗಳನ್ನು ಜಾರಿಗೊಳಿಸಲಾಗಿದೆ.

ಪುಲಕೇಶಿ ನಗರದಲ್ಲಿ, ಹೋಲಿ ಘೋಸ್ಟ್ ಚರ್ಚ್‌ನಲ್ಲಿ ಡಿ. 24ರಿಂದಲೇ ಭಾರಿ ಜನಸಂದಣಿ ಸೇರಲಾರಂಭಿಸಿದೆ. ಡಿ. 25ರಿಂದ ಜ. 1ರವರೆಗೆ ಇಲ್ಲಿ ಜನಸಂದಣಿ ಹಾಗೂ ಈ ಚರ್ಚ್‌ನ ಸುತ್ತಲಿನ ರಸ್ತೆಗಳಲ್ಲಿ ವಾಹನ ದಟ್ಟಣೆ ಹೆಚ್ಚಾಗಲಿದೆ. ಆದ್ದರಿಂದ, ಹೋಲಿ ಘೋಸ್ಟ್ ಚರ್ಚ್ ಕಡೆಗೆ ಹೋಗುವ ರಸ್ತೆಗಳಲ್ಲಿ ಸಂಚಾರ ನಿರ್ಬಂಧಗಳನ್ನು ಜಾರಿಗೊಳಿಸಲಾಗಿದೆ. ಚರ್ಚ್‌ಗೆ ಸಂಪರ್ಕ ಕಲ್ಪಿಸುವ ಜಾನ್ ಆರ್ಮ್‌ಸ್ಟ್ರಾಂಗ್ ರಸ್ತೆ ಮತ್ತು ಕುಕ್ಸನ್ ರಸ್ತೆ ಡಿವೈಡರ್ ನಡುವಿನ ಡೇವಿಸ್ ರಸ್ತೆಯನ್ನು ತಾತ್ಕಾಲಿಕವಾಗಿ ಮುಚ್ಚಲಾಗಿದೆ. ಡೇವಿಸ್ ರಸ್ತೆಯಿಂದ ಎಚ್‌ಎಂ ರಸ್ತೆಯ ಕಡೆಗೆ ಪ್ರಯಾಣಿಸುವವರು ಜಾನ್ ಆರ್ಮ್‌ಸ್ಟ್ರಾಂಗ್ ರಸ್ತೆ ಛೇದಕದಲ್ಲಿ ಬಲಕ್ಕೆ ತಿರುಗಿ, ನೇರವಾಗಿ ವಿವಿಯಾನಿ ರಸ್ತೆಗೆ ಎಡಕ್ಕೆ ತಿರುಗಿ, ನಂತರ ಕುಕ್ಸನ್ ರಸ್ತೆಗೆ ಮತ್ತೊಮ್ಮೆ ಎಡಕ್ಕೆ ತಿರುಗಿ ಡೇವಿಸ್ ರಸ್ತೆಯನ್ನು ಸೇರಿಕೊಳ್ಳಬೇಕು ಎಂದು ಸೂಚಿಸಲಾಗಿದೆ.


ಉದಯವಾಹಿನಿ ಚಿತ್ರ

ಫೀನಿಕ್ಸ್ ಮಾಲ್‌ಗೆ ಬರುವವರು ವಾಹನ ಇಳಿಸಲು ಬೆಸ್ಕಾಂ ಕಚೇರಿಯನ್ನು ಮತ್ತು ವಾಹನ ಏರಿಸಲು ಲೋರಿ ಜಂಕ್ಷನ್ ಬಳಸಬೇಕು. ನೆಕ್ಸಸ್ ಶಾಂತಿನಿಕೇತನಕ್ಕೆ, ರಾಜಪಾಳ್ಯ, ಆಸ್ಟರ್ ಆಸ್ಪತ್ರೆಗಳಲ್ಲಿ ಕ್ರಮವಾಗಿ ವಾಹನ ಇಳಿಸಲು ಮತ್ತು ಏರಿಸಲು ನಿರ್ದಿಷ್ಟ ಸ್ಥಳಗಳನ್ನು ಗುರುತಿಸಲಾಗಿದೆ. ಹುಡಿ ಅಥವಾ ಕೆಆರ್ ಪುರಂನಿಂದ ಬರುವ ವಾಹನಗಳು ಶೆಲ್ ಪೆಟ್ರೋಲ್ ಬಂಕ್‌ನಲ್ಲಿ ತಿರುಗಿ ರೈಲ್ವೆ ಪ್ಯಾರಲಲ್ ರಸ್ತೆಯನ್ನು ಬಳಸಿ ಮಾಲ್‌ನ ಹಿಂಭಾಗದ ಗೇಟ್ ಮೂಲಕ ಪ್ರವೇಶಿಸಬೇಕು. ಸಂಚಾರ ಪೊಲೀಸರು ಪ್ರಯಾಣಿಕರಿಗೆ ತಮ್ಮ ಪ್ರಯಾಣವನ್ನು ಮುಂಚಿತವಾಗಿ ಯೋಜಿಸಿಕೊಳ್ಳಲು, ಸೂಚನಾ ಫಲಕಗಳನ್ನು ಮತ್ತು ಸ್ಥಳದಲ್ಲಿರುವ ಸೂಚನೆಗಳನ್ನು ಪಾಲಿಸಲು, ಜನಸಂದಣಿ ಹೆಚ್ಚಿರುವ ಪ್ರದೇಶಗಳಿಗೆ ಗರಿಷ್ಠ ಸಮಯದಲ್ಲಿ ಅನಗತ್ಯ ಪ್ರಯಾಣವನ್ನು ತಪ್ಪಿಸಲು ಮತ್ತು ಕರ್ತವ್ಯದಲ್ಲಿ ನಿಯೋಜಿಸಲಾದ ಸಿಬ್ಬಂದಿಗೆ ಸಹಕರಿಸುವಂತೆ ಮನವಿ ಮಾಡಿದ್ದಾರೆ. ಇದರಿಂದಾಗಿ ಎಲ್ಲರಿಗೂ ಸುಗಮ ಹಬ್ಬದ ಋತುವನ್ನು ಖಚಿತ ಪಡಿಸಿಕೊಳ್ಳಬಹುದು.

**ಕ್ರಿಸ್ ಮಸ್, ಹೊಸ ವರ್ಷ ಸಂಭ್ರಮ**

ನಿರ್ಬಂಧಿತ ಸಮಯದಲ್ಲಿ ಡೇವಿಸ್ ರಸ್ತೆ, ಬಾಣಸವಾಡಿ ಮುಖ್ಯ ರಸ್ತೆ, ವೀಲರ್ಸ್ ರಸ್ತೆ, ಸೇಂಟ್ ಜಾನ್ಸ್ ಚರ್ಚ್ ರಸ್ತೆ, ಹೈನ್ಸ್ ರಸ್ತೆ ಮತ್ತು ಪ್ರೊಮೆನೇಡ್ ರಸ್ತೆಯಲ್ಲಿ ವಾಹನ ನಿಲುಗಡೆಗೆ ಸಂಪೂರ್ಣ ನಿಷೇಧ ಹೇರಲಾಗಿದೆ. ಮಹದೇವಪುರ ವಲಯದಲ್ಲಿ, ಫೀನಿಕ್ಸ್ ಮಾಲ್ ಬೆಂಗಳೂರು, ವಿಆರ್ ಮಾಲ್ ವೈಟ್‌ಫೀಲ್ಡ್ ಮತ್ತು ನೆಕ್ಸಸ್ ಶಾಂತಿನಿಕೇತನದಂತಹ ಪ್ರಮುಖ ಶಾಪಿಂಗ್ ಮತ್ತು ಮನರಂಜನಾ ಕೇಂದ್ರಗಳ ಬಳಿ ಹೆಚ್ಚಿನ ಜನಸಂದಣಿ ನಿರೀಕ್ಷಿಸಲಾಗಿದೆ. ಈ ಪ್ರದೇಶದಲ್ಲಿ ಮಧ್ಯಾಹ್ನದಿಂದ ಡಿ. 28ರ ರಾತ್ರಿ 11 ಗಂಟೆಯವರೆಗೆ ಸಂಚಾರ ನಿರ್ಬಂಧಗಳು ಜಾರಿಯಲ್ಲಿರುತ್ತವೆ.

ಐಟಿಪಿಎಲ್ ಮುಖ್ಯ ರಸ್ತೆಯನ್ನು ಶೆಲ್ ಪೆಟ್ರೋಲ್ ಬಂಕ್‌ನಿಂದ ಗರುಡಾಚಾರಪಾಳ್ಯ ಡೆಕಾಥ್ಲಾನ್ ವರೆಗೆ ಮತ್ತು ಮೆಡಿಕೇರ್ ಆಸ್ಪತ್ರೆಯಿಂದ ಬಿಗ್ ಬಜಾರ್ ಛೇದಕದವರೆಗೆ ಎರಡೂ ಬದಿಗಳಲ್ಲಿ ನೋ ಪಾರ್ಕಿಂಗ್ ವಲಯವೆಂದು ಘೋಷಿಸಲಾಗಿದೆ.

### ಹೋಟೆಲ್, ರೆಸಾರ್ಟ್‌ಗಳು ಭರ್ತಿ

**ಕೊಡಗು ಜಿಲ್ಲೆಯಲ್ಲಿ ಹೊಸ ವರ್ಷದ ಸಂಭ್ರಮಾಚರಣೆಗೆ ಭರ್ಜರಿ ಸಿದ್ಧತೆಗಳು ನಡೆಯುತ್ತಿದ್ದು, ಕ್ರಿಸ್‌ಮಸ್ ಹಾಗೂ ಹೊಸ ವರ್ಷದ ಹಿನ್ನೆಲೆಯಲ್ಲಿ ಪ್ರವಾಸಿಗರ ಹರಿವು ಗಣನೀಯವಾಗಿ ಏರಿಕೆಯಾಗಿದೆ. ಜಿಲ್ಲೆಯ ಬಹುತೇಕ ಹೋಟೆಲ್ ಮತ್ತು ರೆಸಾರ್ಟ್‌ಗಳು ಈಗಾಗಲೇ ಪ್ರವಾಸಿಗರಿಂದ ಭರ್ತಿಯಾಗಿದ್ದು, ವಸತಿ ದರಗಳಲ್ಲಿ ಭಾರೀ ಏರಿಕೆ ಕಂಡುಬಂದಿದೆ. ಸಂಭ್ರಮಾಚರಣೆಯ ವೇಳೆ ಯಾವುದೇ ಅಹಿತಕರ ಘಟನೆಗಳು ಸಂಭವಿಸದಂತೆ ಪೊಲೀಸ್ ಇಲಾಖೆಯು ಜಿಲ್ಲೆಯಾದ್ಯಂತ ಬಿಗಿ ಭದ್ರತೆ ಕೈಗೊಂಡಿದೆ. ರಾತ್ರಿ 10 ಗಂಟೆಯ ನಂತರ ಡಿಜೆ ಬಳಕೆಯನ್ನು ಕಟ್ಟುನಿಟ್ಟಾಗಿ ನಿಷೇಧಿಸಲಾಗಿದ್ದು, ನಿಯಮಗಳನ್ನು ಉಲ್ಲಂಘಿಸುವವರ ವಿರುದ್ಧ ಕಠಿಣ ಕ್ರಮದ ಎಚ್ಚರಿಕೆ ನೀಡಲಾಗಿದೆ.**

## ಬೆಂಗಳೂರಿಂದ ವಿಜಯಪುರಕ್ಕೆ ಹುಬ್ಬಳ್ಳಿ, ಗದಗ ಬೈಪಾಸ್ ಮೂಲಕ ಪ್ರಪ್ರಥಮ

• **ಉದಯವಾಹಿನಿ, ಬೆಂಗಳೂರು**

ಕ್ರಿಸ್ಮಸ್ ಮತ್ತು ವರ್ಷಾಂತ್ಯದ ರಜೆ ಹಿನ್ನೆಲೆಯಲ್ಲಿ ಪ್ರಯಾಣಿಕರ ದಟ್ಟಣೆ ತಗ್ಗಿಸಲು ನೈರುತ್ಯ ರೈಲ್ವೆಯು ಇದೇ ಮೊದಲ ಬಾರಿಗೆ ಬೆಂಗಳೂರಿನಿಂದ ಹುಬ್ಬಳ್ಳಿ ಮತ್ತು ಗದಗ ಬೈಪಾಸ್ ಮೂಲಕ ವಿಜಯಪುರಕ್ಕೆ ವಿಶೇಷ ರೈಲನ್ನು ಓಡಿಸಿರುವುದು ಸ್ವಾಗತಾರ್ಹವಾಗಿದೆ. ಮುಂದಿನ ದಿನಗಳಲ್ಲಿ ಇದನ್ನು ಖಾಯಂ ರೈಲು ಸೇವೆಯಾಗಿ ಪರಿವರ್ತಿಸಬೇಕು ಎಂದು ಸಚಿವ ಎಂ.ಬಿ.ಪಾಟೀಲ್ ಆಗ್ರಹಿಸಿದ್ದಾರೆ. ಈ ಬಗ್ಗೆ ಮಾತನಾಡಿರುವ ಅವರು, ಬೆಂಗಳೂರಿನಿಂದ ವಿಜಯಪುರಕ್ಕೆ ಈ 2 ಬೈಪಾಸ್ ಮೂಲಕವೇ ರೈಲು ಸಾಗುವಂತೆ ಮಾಡಬೇಕು ಎಂದು ನಿರಂತರವಾಗಿ ಪ್ರಯತ್ನಿಸಲಾಗುತ್ತಿದೆ. ಈ ನಿಟ್ಟಿನಲ್ಲಿ ನೈರುತ್ಯ ರೈಲ್ವೆ ಅಧಿಕಾರಿಗಳ ಜತೆ ಹಲವು ಸಭೆಗಳನ್ನು ನಡೆಸಲಾಗಿದೆ. ನಮ್ಮ ಪ್ರಯತ್ನಕ್ಕೆ ವಿಶೇಷ ರೈಲಿನ ರೂಪದಲ್ಲಿ ಮೊದಲ ಯಶಸ್ಸು ಸಿಕ್ಕಿರುವುದು ಸಂತಸ ತಂದಿದೆ ಎಂದಿದ್ದಾರೆ. ಬೈಪಾಸ್ ಮೂಲಕ ಚಲಿಸಿದ್ದ ಕಾರಣಕ್ಕೆ ಎರಡೂ ಕಡೆ ಎಂಜಿನ್ ಬದಲಿಸುವ ಪ್ರಮೇಯ ಬಂದಿಲ್ಲ. ಬಾಗಲಕೋಟೆ, ವಿಜಯಪುರ ಕಡೆಗೆ ಹೋಗುವ ಎಲ್ಲಾ ರೈಲುಗಳನ್ನು ಇದೇ ರೀತಿ ಬೈಪಾಸ್ ಮೂಲಕ ಸಂಚರಿಸುವಂತೆ ಮಾಡಿದರೆ ಪ್ರಯಾಣದ ಅವಧಿ ಕಡಿಮೆ ಮಾಡಬಹುದು ಎಂಬುದು ನನ್ನ ನಿಲುವು. ಈ ನಿಟ್ಟಿನಲ್ಲಿ ರೈಲ್ವೆ ಅಧಿಕಾರಿಗಳ ಜತೆ ಸಭೆಗಳು ನಡೆದಿವೆ ಎಂದು ಹೇಳಿದ್ದಾರೆ.

## ರಾಜ್ಯದ ಆಂತರಿಕ ಕಚ್ಚಾಟ ಕಾಂಗ್ರೆಸ್ ಹೈಕಮಾಂಡ್ ಸರಿಪಡಿಸಲಿ: ಸತೀಶ್ ಜಾರಕಿಹೊಳಿ

• **ಉದಯವಾಹಿನಿ, ಬೆಂಗಳೂರು**

ರಾಜ್ಯದ ಆಂತರಿಕ ಕಚ್ಚಾಟ ಸರಿಪಡಿಸುವ ಕೆಲಸವನ್ನು ಕಾಂಗ್ರೆಸ್ ಹೈಕಮಾಂಡ್ ಮಾಡಬೇಕು ಇಲ್ಲದಿದ್ದರೆ ಇದು ಪರಿಣಾಮ ಬೀರಲಿದೆ ಎಂದು ಲೋಕೋಪಯೋಗಿ



ಸಚಿವ ಸತೀಶ್ ಜಾರಕಿಹೊಳಿ ಹೇಳಿದ್ದಾರೆ. ಬೆಂಗಳೂರಿನಲ್ಲಿ ಮಾತನಾಡಿದ ಅವರು, ಬರುವ ಚುನಾವಣೆಗಳಲ್ಲಿ ಸರ್ಕಾರದ ಆಂತರಿಕ ಗೊಂದಲ ಪಕ್ಷದ ಮೇಲೆ ಪರಿಣಾಮ ಬೀರುತ್ತದೆ. ಹೈಕಮಾಂಡ್‌ನವರು ಇದನ್ನು ಸರಿಪಡಿಸುವ ಕೆಲಸ ಮಾಡಬೇಕು, ಇಲ್ಲದಿದ್ದರೆ ಕಷ್ಟವಾಗಲಿದೆ. ರಾಜಣ್ಣ ರಾಹುಲ್ ಗಾಂಧಿಗೆ ಪತ್ರ ಬರೆದಿದ್ದಾರೆ. ಆಗಿರೋದು ಆಗಿ ಹೋಗಿದೆ, ಮುಂದೇನು ಅನ್ನೋದು ನೋಡಬೇಕು ಎಂದು ತಿಳಿಸಿದರು. ಈಗ 2028 ಕ್ಕೆ ಚುನಾವಣೆ ಬರೋದು. ಬಿಎಲ್‌ಎಗಳು ಏನೇನು ಹೊಸ ಪ್ರಯೋಗ ಮಾಡ್ತಾರೆ. ಅದರ ಬಗ್ಗೆ ನಾವು ಮುನ್ನೆಚ್ಚರಿಕೆ ಇರಬೇಕು. ನಮ್ಮ ಅಧ್ಯಕ್ಷರು ಬಹಳ ಸ್ಪಷ್ಟವಾಗಿ ಹೇಳಿದ್ದಾರಲ್ಲ. ನೀವು ನೀವೇ ಬಗೆಹರಿಸಿಕೊಳ್ಳಿ ಅಂತ. ಹಾಗಾಗಿ, ಅವರಿಬ್ಬರೇ ಬಗೆಹರಿಸಿಕೊಳ್ಳಬೇಕು ಎಂದರು. ಯಾರಿದ್ದಾರೆ ಅವರೇ ಬಗೆಹರಿಸಿಕೊಳ್ಳಬೇಕು. ಕ್ಯಾಪ್ಟನ್ ವೈಸ್ ಕ್ಯಾಪ್ಟನ್ ಇದಾರಲ್ಲ ಅವರೇ ಬಗೆಹರಿಸಿಕೊಳ್ಳಬೇಕು. ಇಬ್ಬರೇ ಮಾತನಾಡಬೇಕು. ಮೂರನೆಯವರಿಗೆ ಅವಕಾಶ ಇರಲ್ಲ. ದಿಲ್ಲಿ ಒಳಗೆ ಏನು ಆಗಿಲ್ಲ ಅಂದಿದ್ದಾರೆ. ಬೆಳಗಾವಿಯಲ್ಲಿ ಡಿನ್ನರ್ ಮೀಟಿಂಗ್ ಎಲ್ಲರೂ ಮಾಡಿದ್ರಲ್ಲ ಎಂದು ಹೇಳಿದರು.

## ನಿರೀಕ್ಷಣಾ ಜಾಮೀನಿಗಾಗಿ ಮತ್ತೆ ಹೈಕೋರ್ಟ್ ಕದ ತಟ್ಟಿದ ಬೈರತಿ ಬಸವರಾಜ್

• **ಉದಯವಾಹಿನಿ, ಬೆಂಗಳೂರು**

ರೌಡಿಶೀಟರ್ ಶಿವಪ್ರಕಾಶ್ ಅಲಿಯಾಸ್ ಬಿಕ್ಲು ಶಿವ ಕೊಲೆ ಪ್ರಕರಣದಲ್ಲಿ ಬಂಧನ ಭೀತಿ ಎದುರಿಸುತ್ತಿರುವ ಬಿಜೆಪಿ ಶಾಸಕ ಬೈರತಿ ಬಸವರಾಜ್ ನಿರೀಕ್ಷಣಾ ಜಾಮೀನು ಕೋರಿ ಮತ್ತೊಮ್ಮೆ ಹೈಕೋರ್ಟ್ ಮೆಟ್ಟಿಲೇರಿದ್ದಾರೆ.



ಪ್ರಕರಣದ 5ನೇ ಆರೋಪಿ ಬಿ.ಎ. ಬಸವರಾಜ ಅಲಿಯಾಸ್ ಬೈರತಿ ಬಸವರಾಜ್ ಸಲ್ಲಿಸಿದ್ದ ನಿರೀಕ್ಷಣಾ ಜಾಮೀನು ಅರ್ಜಿಯನ್ನು ಬೆಂಗಳೂರಿನ ಜನಪ್ರತಿನಿಧಿಗಳ ವಿಶೇಷ ನ್ಯಾಯಾಲಯ ಮಂಗಳವಾರವಷ್ಟೇ ವಜಾಗೊಳಿಸಿತ್ತು. ಹೀಗಾಗಿ ಬೈರತಿ ಬಸವರಾಜ್ ಅವರು ನಿರೀಕ್ಷಣಾ ಜಾಮೀನು ಕೋರಿ ಹೈಕೋರ್ಟ್‌ಗೆ ಕ್ರಿಮಿನಲ್ ಅರ್ಜಿ ಸಲ್ಲಿಸಿದ್ದಾರೆ.

ಅರ್ಜಿಯಲ್ಲಿ ಭಾರತಿನಗರ ಠಾಣೆ ಪೊಲೀಸರನ್ನು ಪ್ರತಿವಾದಿಯನ್ನಾಗಿಸಲಾಗಿದ್ದು, ಅರ್ಜಿಯು ನ್ಯಾಯಮೂರ್ತಿ ಜಿ. ಬಸವರಾಜ ಅವರ ರಜಾಕಾಲದ ನ್ಯಾಯಪೀಠದ ಮುಂದೆ ವಿಚಾರಣೆಗೆ ನಿಗದಿಯಾಗಿದೆ. ಈ ಹಿಂದೆ ವಿಚಾರಣೆ ನಡೆಸಿದ್ದ ಹೈಕೋರ್ಟ್, ಆರೋಪಿಗಳ ವಿರುದ್ಧ ಕೋಕಾ ಅನ್ವಯಿಸಿದ್ದ ಆದೇಶವನ್ನು ಡಿಸೆಂಬರ್ 19ರಂದು ರದ್ದುಪಡಿಸಿತ್ತಲ್ಲದೆ, ಬೈರತಿ ಬಸವರಾಜ್ ಸಲ್ಲಿಸಿದ್ದ ನಿರೀಕ್ಷಣಾ ಜಾಮೀನು ಅರ್ಜಿಯನ್ನು ವಜಾಗೊಳಿಸಿತ್ತು. ಇನ್ನು ಭಾರತಿನಗರ ಪೊಲೀಸ್ ಠಾಣೆಯಲ್ಲಿ ದಾಖಲಾಗಿರುವ ಎಫ್‌ಐಆರ್ ರದ್ದು ಕೋರಿ ಸಲ್ಲಿಸಿದ್ದ ಅರ್ಜಿಯನ್ನು ಬೈರತಿ ಬಸವರಾಜ್ ಹಿಂಪಡೆದ ಕಾರಣ ಆ ಅರ್ಜಿಯೂ ವಜಾಗೊಂಡಿತ್ತು. ಜನಪ್ರತಿನಿಧಿಗಳ ವಿಶೇಷ ನ್ಯಾಯಾಲಯ ಸಹ ನಿರೀಕ್ಷಣಾ ಜಾಮೀನು ಮಂಜೂರು ಮಾಡಲು ನಿರಾಕರಿಸಿದ್ದರಿಂದ, ಬಂಧನ ಭೀತಿಯಿಂದ ಮತ್ತೊಮ್ಮೆ ಬೈರತಿ ಬಸವರಾಜ್ ಹೈಕೋರ್ಟ್ ಕದ ತಟ್ಟಿದ್ದಾರೆ.

## ವಿಬಿ-ಜಿ ರಾಮ್ ಜಿ ಕಾಯ್ದೆ ಅಸಂವಿಧಾನಿಕ, ಒಪ್ಪಲಾಗದು: ಪ್ರಿಯಾಂಕ್ ಖರ್ಗೆ

• **ಉದಯವಾಹಿನಿ, ಬೆಂಗಳೂರು**

ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರಾದ ಪ್ರಿಯಾಂಕ್ ಖರ್ಗೆ ಅವರು ನವದೆಹಲಿಯ ಕರ್ನಾಟಕ ಭವನದಲ್ಲಿ ಕಳೆದ 20 ವರ್ಷಗಳಿಂದ ಮನರೇಗಾ ರಚನೆ, ಅನುಷ್ಠಾನ ಮತ್ತು ಪರಿಣಾಮಕಾರಿ ಅನುಷ್ಠಾನಕ್ಕಾಗಿ ಕೆಲಸ ಮಾಡಿದ ಎಲ್ಲಾ ಸಂಬಂಧಿತ ಪಾಲುದಾರರು ಮತ್ತು ತಜ್ಞರೊಂದಿಗೆ ನಡೆಸಿದ ದುಂಡು ಮೇಜಿನ ಸಭೆ ನಡೆಸಿದರು.

2025 ರ ವಿಬಿ-ಜಿ ರಾಮ್ ಜಿ ಕಾಯ್ದೆ ಬಡವರ ವಿರೋಧಿ, ರೈತ ವಿರೋಧಿ ಮತ್ತು ಸಂವಿಧಾನಬಾಹಿರ ಎಂದು ಹೇಳಿದ್ದಾರೆ. ವಿಕಸಿತ ಭಾರತ್ ಎಂದರೆ ಏನು ಎಂಬುದರ ಬಗ್ಗೆ ಯಾವುದೇ ವ್ಯಾಖ್ಯಾನವಿಲ್ಲ, ಆದರೆ ಕಾರ್ಮಿಕರು, ಪಂಚಾಯತ್‌ಗಳು ಮತ್ತು ರಾಜ್ಯಗಳ ವೆಚ್ಚದಲ್ಲಿ ವ್ಯಾಪಕ ಅಧಿಕಾರಗಳನ್ನು ಕೇಂದ್ರಕ್ಕೆ ಹಸ್ತಾಂತರಿಸಲಾಗುತ್ತದೆ. ರಾಜಕೀಯವಾಗಿ, ಸಾಮಾಜಿಕವಾಗಿ, ಕಾನೂನುಬದ್ಧವಾಗಿ ಮತ್ತು ನೈತಿಕವಾಗಿ, ಇದನ್ನು ನಾವು ಒಪ್ಪಿಕೊಳ್ಳಲು ಸಾಧ್ಯವಿಲ್ಲ ಎಂದು ಸಚಿವರು ಹೇಳಿದರು.


ಉದಯವಾಹಿನಿ ಚಿತ್ರ

ಖರ್ಗೆ ಅಧ್ಯಕ್ಷತೆ ವಹಿಸಿದ್ದ ರಾಷ್ಟ್ರೀಯ ದುಂಡುಮೇಜಿನ ಸಭೆಯು ನವದೆಹಲಿಯಲ್ಲಿ ನಾಗರಿಕ ಹಕ್ಕುಗಳ ಗುಂಪುಗಳು, ಅರ್ಥಶಾಸ್ತ್ರಜ್ಞರು, ಹಿರಿಯ ವಕೀಲರು, ಶಿಕ್ಷಣ ತಜ್ಞರು, ಕಾರ್ಯಕರ್ತರು, ಎನ್‌ಜಿಒಗಳು ಮತ್ತು ಎನ್‌ಆರ್‌ಇಜಿಎ ಕಾರ್ಮಿಕರು ಸೇರಿದಂತೆ 80 ಕ್ಕೂ ಹೆಚ್ಚು ಜನರನ್ನು ಒಳಗೊಂಡಿತ್ತು.

ಕಾನೂನನ್ನು ನೆಲದ ಮೇಲೆ ಸ್ಪಷ್ಟವಾಗಿ ವಿವರಿಸಲು, ತಪ್ಪು ಮಾಹಿತಿಯನ್ನು ಎದುರಿಸಲು ಮತ್ತು ಹೊಸ ಕಾಯ್ದೆಯು ಜೀವನೋಪಾಯವನ್ನು ಹೇಗೆ ದುರ್ಬಲಗೊಳಿಸುತ್ತದೆ ಎಂಬುದರ ಕುರಿತು ಸಾರ್ವಜನಿಕ ಜಾಗೃತಿ ಮೂಡಿಸಲು ಮತ್ತು ಹೊಸ ಶಾಸನದಿಂದ ಸಾಂವಿಧಾನಿಕ ಉಲ್ಲಂಘನೆಗಳನ್ನು ಪರಿಶೀಲಿಸಲು ದುಂಡುಮೇಜಿನ ಸಭೆಯು ನಿರ್ಧರಿಸಿದೆ ಎಂದು ತಿಳಿಸಿದ್ದಾರೆ.

> **ನಿಧಿಯ ಯೋಜನೆಯನ್ನು ಹಸಿವಿನಿಂದ ತುಂಬುವುದರಿಂದ ಹಿಡಿದು ಪಾವತಿಗಳನ್ನು ವಿಳಂಬಗೊಳಿಸುವವರೆಗೆ, ಈಗ ಕಾನೂನನ್ನು ಪುನಃ ಬರೆಯುವವರೆಗೆ, ಬಿಜೆಪಿ ಒಂದು ದಶಕಕ್ಕೂ ಹೆಚ್ಚು ಕಾಲ ಮನರೇಗಾ ನಿಧಾನವಾಗಿ, ಸ್ಥಿರವಾಗಿ ಕೊಲ್ಲಲು ಪ್ರಯತ್ನಿಸಿದೆ. ಪಂಚಾಯತ್ ಯೋಜನೆಗಳನ್ನು ತಿರಸ್ಕರಿಸಲು ಮತ್ತು ಹಂಚಿಕೆಗಳನ್ನು ನಿಯಂತ್ರಿಸಲು ಕೇಂದ್ರಕ್ಕೆ ಅಧಿಕಾರ ನೀಡುವುದು ಯೋಜನೆಯನ್ನು ವಿನ್ಯಾಸದ ಮೂಲಕ ಪೂರ್ಣಗೊಳಿಸುವ ನೇರ ಪ್ರಯತ್ನವಾಗಿದೆ ಎಂದು ಸಚಿವರು ಹೇಳಿದರು.**

ಮನರೇಗಾ ಕೇವಲ ಕಲ್ಯಾಣ ಕಾರ್ಯಕ್ರಮವಲ್ಲ, ಬದಲಾಗಿ ಗ್ರಾಮೀಣ ಕುಟುಂಬಗಳಿಗೆ ಘನತೆ, ಭದ್ರತೆ ಮತ್ತು ಅವರ ಹಳ್ಳಿಗಳಲ್ಲಿ ಉಳಿಯಲು ಆತ್ಮವಿಶ್ವಾಸವನ್ನು ನೀಡುವ ಖಾತರಿಯಾಗಿದೆ ಎಂದು ಸಚಿವರು ಹೇಳಿದರು.

## ಸಿಎಂ ಅಧಿಕಾರ ಕೊಡಲ್ಲ, ಡಿಕೆಶಿ ದೇವಸ್ಥಾನ ಬಿಡಲ್ಲ

• **ಉದಯವಾಹಿನಿ, ಬೆಂಗಳೂರು**

ಬೆಂಗಳೂರು ಸಿದ್ದರಾಮಯ್ಯ ಅಧಿಕಾರ ಕೊಡಲ್ಲ, ಡಿ.ಕೆ. ಶಿವಕುಮಾರ್ ದೇವಸ್ಥಾನ ಬಿಡಲ್ಲ. ಕರ್ನಾಟಕದಲ್ಲಿ ಇಷ್ಟೇ ನಡೆಯುತ್ತಿರೋದು ಎಂದು ವಿರೋಧ ಪಕ್ಷದ ನಾಯಕ ಆರ್.ಅಶೋಕ್ ವ್ಯಂಗ್ಯವಾಡಿದ್ದಾರೆ.

ವಿಧಾನಸೌಧದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಸಿದ್ದರಾಮಯ್ಯ ಗ್ಯಾಂಗ್ ಡಿನ್ನರ್ ಪಾಲಿಟಿಕ್ಸ್ ಮಾಡುತ್ತಿದೆ. ಡಿ.ಕೆ.ಶಿವಕುಮಾರ್ ಟೆಂಪಲ್ ರನ್ ಮಾಡುತ್ತಿದ್ದಾರೆ. ಅಧಿವೇಶನಕ್ಕೆ ಡಿ.ಕೆ. ಶಿವಕುಮಾರ್ ಬರುತ್ತಿರಲಿಲ್ಲ. ಅಧಿವೇಶನ ನಡೆಯುತ್ತಿರುವಾಗ ಜನಪ್ರತಿನಿಧಿಯಾಗಿ ಕೆಲಸ ಮಾಡಬೇಕಿತ್ತು. ಅದು ಬಿಟ್ಟು ಜನರ ತೆರಿಗೆ ಹಣದಲ್ಲಿ ದೇವಸ್ಥಾನ ರೌಂಡ್ ಹಾಕುತ್ತಿದ್ದರು ಎಂದು ವಾಗ್ದಾಳಿ ನಡೆಸಿದರು. ಈಗ ಸಾಮಾನ್ಯ ಕಾರ್ಯಕರ್ತನಾಗಿ ಇರುತ್ತೇನೆ ಅಂತಿದ್ದಾರೆ ಅದ್ಯಾಕೆ? ಹಾಗಾದ್ರೆ ರಾಜೀನಾಮೆ ಕೊಟ್ಟು ಇರಲಿ ಎಂದು ಡಿಕೆಶಿಗೆ ಟಕ್ಕರ್ ಕೊಟ್ಟರು. ಕರ್ನಾಟಕದ ಕೆಲವು ಕಡೆಗಳಲ್ಲಿ ಸ್ಥಳೀಯ ಸಂಸ್ಥೆಗಳಲ್ಲಿ ಚುನಾವಣೆ ನಡೆದಿದೆ. ಎಲ್ಲಾ ಕಡೆ ಬಿಜೆಪಿ ಹೆಚ್ಚು ಸ್ಥಾನ ಗೆದ್ದಿದ್ದೆ. ಕಾಂಗ್ರೆಸ್ ಸರ್ಕಾರ ತೊಲಗುವ ಮುನ್ಸೂಚನೆ ಇದು. ಇವರು ಇದೇ ರೀತಿ ಕಾಂಗ್ರೆಸ್‌ನಲ್ಲಿ ಕಿತ್ತಾಡುತ್ತಿದ್ದರೆ ಮನೆಗೆ ಹೋಗೋದು ಗ್ಯಾರಂಟಿ ಎಂದು ಭವಿಷ್ಯ ನುಡಿದರು. ಕೆಎನ್ ರಾಜಣ್ಣರೇ ಕಾಂಗ್ರೆಸ್‌ಗೆ ಕೊಳ್ಳಿ ಇಡುತ್ತಿದ್ದಾರೆ. ಲೋಕಸಭಾ ಚುನಾವಣೆಯಲ್ಲಿ ಡಿಕೆಶಿ ಫೇಲ್ಯೂರ್ ಅಂತಾ ಪತ್ರ ಬರೆದಿದ್ದಾರೆ. ಕೇಂದ್ರದವರು ಕೂಡ ನಿಮ್ಮ ಸಹವಾಸ ಬೇಡ ಎಂದಿದ್ದಾರೆ.



ತೀರ್ಮಾನ ತೆಗೆದುಕೊಳ್ಳದ ವೀಕ್ ನಾಯಕತ್ವ ಅಂದರೆ ಕಾಂಗ್ರೆಸ್ ನಾಯಕತ್ವ ಎಂದು ಟೀಕಿಸಿದರು.

## ಪರಪ್ಪನ ಅಗ್ರಹಾರ ಕೇಂದ್ರ ಕಾರಾಗೃಹದಲ್ಲಿ: ಮೊಬೈಲ್ ಪತ್ತೆ

• **ಉದಯವಾಹಿನಿ, ಬೆಂಗಳೂರು**

ಪರಪ್ಪನ ಅಗ್ರಹಾರ ಕೇಂದ್ರ ಕಾರಾಗೃಹದ ವಿವಿಧ ಬ್ಯಾರಕ್‌ಗಳಲ್ಲಿ ನಡೆದ ತಪಾಸಣೆ ವೇಳೆ ನಾಲ್ಕು ಮೊಬೈಲ್ ಫೋನ್‌ಗಳು, ಸಿಮ್ ಕಾರ್ಡ್, ಚಾರ್ಜರ್, ಇಯರ್ ಬಡ್ಸ್ ಮತ್ತು ಇಯರ್ ಫೋನ್ ಪತ್ತೆಯಾಗಿವೆ ಎಂದು ಕೇಂದ್ರ ಕಾರಾಗೃಹದ ಮುಖ್ಯ ಅಧೀಕ್ಷಕರು ತಿಳಿಸಿದ್ದಾರೆ. ಕಾರಾಗೃಹ ಸುಧಾರಣಾ ಸಂಕಲ್ಪ ಅಭಿಯಾನ ಅಡಿ ಸಹಾಯಕ ಜೈಲರ್ ಎಸ್.ಜೆ.ಜಕಾತಿ, ಅಧೀಕ್ಷಕ ಎಚ್.ಎ.ಪರಮೇಶ್ ಹಾಗೂ ಸಹಾಯಕ ಅಧೀಕ್ಷಕ ಕರ್ಣ ಬಿ. ಕ್ಷತ್ರಿ ನೇತೃತ್ವದ ತಂಡಗಳು ತಪಾಸಣೆ ಕೈಗೊಂಡಾಗ ಕೀ ಪ್ಯಾಡ್ ಮೊಬೈಲ್. ಆ್ಯಂಡ್ರಾಯ್ಡ್ ಮೊಬೈಲ್ ಸೇರಿ ಕೆಲ ನಿಷೇಧಿತ ವಸ್ತುಗಳು ಪತ್ತೆಯಾಗಿವೆ.



ನಿಷೇಧಿತ ವಸ್ತುಗಳನ್ನು ಸಾಗಿಸಿದವರು, ಇದಕ್ಕೆ ಸಹಕರಿಸಿದವರು ಮತ್ತು ವಸ್ತುಗಳನ್ನು ಬಳಕೆ ಮಾಡಿದವರ ವಿರುದ್ಧ ಕಾರಾಗೃಹ (ತಿದ್ದುಪಡಿ) ಕಾಯ್ದೆ 2022ರ ಕಲಂ 42ರ ಅನ್ವಯ ಪ್ರಕರಣ ದಾಖಲಿಸುವಂತೆ ದೂರು ನೀಡಿದ್ದು, ಪರಪ್ಪನ ಅಗ್ರಹಾರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಕಾರಾಗೃಹ ಮತ್ತು ಸುಧಾರಣಾ ಸೇವೆ ಇಲಾಖೆ ಪೊಲೀಸ್ ಮಹಾ ನಿರ್ದೇಶಕ ಅಲೋಕ್ ಕುಮಾರ್ ಅವರು ಉತ್ತಮ ತಪಾಸಣೆ ಕೈಗೊಂಡ ಸಿಬ್ಬಂದಿಗೆ ರೂ. 5 ಸಾವಿರ ನಗದು ಬಹುಮಾನ, ಎಚ್.ಎ.ಪರಮೇಶ್ ಮತ್ತು ಕರ್ಣ ಬಿ. ಕ್ಷತ್ರಿ ಅವರಿಗೆ ಪ್ರಶಂಸನಾ ಪತ್ರ ನೀಡಿ ಗೌರವಿಸಿದ್ದಾರೆ. ನವೆಂಬರ್ 11ರಿಂದ ಈವರೆಗೆ ಒಟ್ಟು 16 ಪ್ರಕರಣಗಳು ದಾಖಲಾಗಿವೆ. ನವೆಂಬರ್ 11ರಿಂದ ಡಿಸೆಂಬರ್ 23ರ ಅವಧಿಯಲ್ಲಿ ಒಟ್ಟು 109 ಮೊಬೈಲ್, 24 ಚಾರ್ಜರ್, 88 ಸಿಮ್, 18 ಇಯರ್ ಫೋನ್, ರೂ.64,880 ನಗದು ಪತ್ತೆಯಾಗಿದೆ.

# ದಟ್ಟ ಮಂಜು, ಕಡಿಮೆ ಗೋಚರತೆಯಿಂದ ವಿಮಾನಗಳ ಕಾರ್ಯಾಚರಣೆಗೆ ಅಡಚಣೆ

## ಇಂಡಿಗೋ ತನ್ನ ಪ್ರಯಾಣಿಕರಿಗೆ ವಿಮಾನಗಳ ಸ್ಥಿತಿಯನ್ನು ನಿಯಮಿತವಾಗಿ ಪರಿಶೀಲಿಸುವಂತೆ ಕೇಳಿದೆ

• **ಉದಯವಾಹಿನಿ, ಬೆಂಗಳೂರು**

ಬೆಂಗಳೂರಿನಲ್ಲಿ ದಟ್ಟ ಮಂಜು ಮತ್ತು ಕಡಿಮೆ ಗೋಚರತೆಯಿಂದಾಗಿ ವಿಮಾನಗಳ ಕಾರ್ಯಾಚರಣೆಯಲ್ಲಿ ಅಡಚಣೆ ಉಂಟಾಗುವ ಸಾಧ್ಯತೆಯಿದೆ ಎಂದು ಇಂಡಿಗೋ ವಿಮಾನಯಾನ ಸಂಸ್ಥೆ ಪ್ರಯಾಣಿಕರಿಗೆ ಎಚ್ಚರಿಕೆ ನೀಡಿದೆ. ಹವಾಮಾನ ವೈಪರೀತ್ಯದಿಂದಾಗಿ ದೇಶದ ಹಲವೆಡೆ, ವಿಶೇಷವಾಗಿ ಉತ್ತರ ಭಾರತದಲ್ಲಿ ವಿಮಾನಗಳ ವೇಳಾಪಟ್ಟಿಗಳು ಈಗಾಗಲೇ ತೊಂದರೆಗೆ ಒಳಗಾಗಿವೆ.

ಈ ಹಿನ್ನೆಲೆಯಲ್ಲಿ, ಇಂಡಿಗೋ ತನ್ನ ಪ್ರಯಾಣಿಕರಿಗೆ ವಿಮಾನಗಳ ಸ್ಥಿತಿಯನ್ನು ನಿಯಮಿತವಾಗಿ ಪರಿಶೀಲಿಸುವಂತೆ ಸೂಚಿಸಿದೆ.

**ಇಂಡಿಗೋ ಪ್ರಕಟಣೆ:** ಇಂಡಿಗೋ ವಿಮಾನಯಾನ ಸಂಸ್ಥೆಯು ಈ ಕುರಿತು ಪ್ರಕಟಣೆ ಹೊರಡಿಸಿದೆ. ಬೆಂಗಳೂರಿನಲ್ಲಿ ಕಡಿಮೆ ಗೋಚರತೆ ಮತ್ತು ಮಂಜು ವಿಮಾನಗಳ ವೇಳಾಪಟ್ಟಿಯ ಮೇಲೆ ಪರಿಣಾಮ ಬೀರಿದೆ ಎಂದು ಸಂಸ್ಥೆ ತಿಳಿಸಿದೆ. ನಾವು ಹವಾಮಾನವನ್ನು ಹತ್ತಿರದಿಂದ ಗಮನಿಸುತ್ತಿದ್ದೇವೆ ಮತ್ತು ನಿಮ್ಮನ್ನು ಸುರಕ್ಷಿತವಾಗಿ ಮತ್ತು ಸುಗಮವಾಗಿ ನಿಮ್ಮ ಗಮ್ಯಸ್ಥಾನಕ್ಕೆ ತಲುಪಿಸಲು ನಮ್ಮ ಕೈಲಾದಷ್ಟು ಪ್ರಯತ್ನಿಸುತ್ತಿದ್ದೇವೆ ಎಂದು ಇಂಡಿಗೋ ಹೇಳಿದೆ. ಹವಾಮಾನ ಪರಿಸ್ಥಿತಿಯನ್ನು ನಿರಂತರವಾಗಿ ಮೇಲ್ವಿಚಾರಣೆ ಮಾಡುತ್ತಿದ್ದು, ಪ್ರಯಾಣಿಕರ ಸುರಕ್ಷತೆಗಾಗಿ ಸಂಪೂರ್ಣ ಬೆಂಬಲ ನೀಡುತ್ತಿದ್ದೇವೆ ಎಂದು ಸಂಸ್ಥೆ ಸ್ಪಷ್ಟಪಡಿಸಿದೆ.


ಉದಯವಾಹಿನಿ ಚಿತ್ರ

> **ಭವಿಷ್ಯದ ಯೋಜನೆಗಳ ಕುರಿತು ಮಾತನಾಡಿದ ಇಂಡಿಗೋ, ತಮ್ಮ ಮೊದಲ ಏರ್‌ಬಸ್ A321XLR ವಿಮಾನವನ್ನು ಸೇರ್ಪಡೆಗೊಳಿಸಲು ಸಿದ್ಧತೆ ನಡೆಸುತ್ತಿದೆ. ಭಾರತ ಮತ್ತು ಉಪಖಂಡದ ಪ್ರಯಾಣಿಕರಿಗೆ ಮಧ್ಯಮ-ದಿಂದ-ದೀರ್ಘ-ಶ್ರೇಣಿಯ ವಿಮಾನಯಾನವನ್ನು ಮರು ವ್ಯಾಖ್ಯಾನಿಸುವ ನಮ್ಮ ಮತ್ತು ಭಾರತದ ಮೊದಲ ಏರ್‌ಬಸ್ A321XLR ಅನ್ನು ಸ್ವಾಗತಿಸಲು ನಾವು ಸಿದ್ಧರಿದ್ದೇವೆ, ಎಂದು ಇಂಡಿಗೋ ವಕ್ತಾರರು ತಿಳಿಸಿದ್ದಾರೆ. ಜನವರಿ 23, 2026 ರಿಂದ ದೆಹಲಿ ಮತ್ತು ಮುಂಬೈಯನ್ನು ಅಥೆನ್ಸ್‌ಗೆ ಸಂಪರ್ಕಿಸುವ ಮಾರ್ಗಗಳಲ್ಲಿ ಈ ವಿಮಾನವನ್ನು ನಿಯೋಜಿಸಲು ಸಂಸ್ಥೆ ಯೋಜಿಸಿದೆ. ನಮ್ಮ ಫ್ಲೀಟ್ ವಿಸ್ತರಣಾ ಯೋಜನೆಗಳಿಗೆ ಅನುಗುಣವಾಗಿ ನಾವು ಹೆಚ್ಚುವರಿ ದೇಶೀಯ ಮತ್ತು ಅಂತರರಾಷ್ಟ್ರೀಯ ತಾಣಗಳನ್ನು ಮೌಲ್ಯಮಾಪನ ಮಾಡುತ್ತಿದ್ದೇವೆ ಮತ್ತು ಮುಂದಿನ ದಿನಗಳಲ್ಲಿ ಹೆಚ್ಚಿನ ನವೀಕರಣಗಳನ್ನು ಹಂಚಿಕೊಳ್ಳುತ್ತೇವೆ ಎಂದು ವಕ್ತಾರರು ಹೇಳಿದರು.**

ಪ್ರಯಾಣಿಕರು ತಮ್ಮ ವಿಮಾನದ ಸ್ಥಿತಿಯನ್ನು ಅಧಿಕೃತ ವೆಬ್‌ಸೈಟ್ ಅಥವಾ ನೀಡಲಾದ ಲಿಂಕ್ ಮೂಲಕ ಪರಿಶೀಲಿಸಬಹುದು. ನಿಮ್ಮ ವಿಮಾನದ ಸ್ಥಿತಿಯ ಬಗ್ಗೆ ನವೀಕೃತವಾಗಿರಲು ನಾವು ನಿಮ್ಮನ್ನು ವಿನಂತಿಸುತ್ತೇವೆ bit.ly/3ZWAQXd. ನಮ್ಮ ತಂಡಗಳು ನಿಮಗೆ ಪ್ರತಿ ಹಂತದಲ್ಲೂ ಸಹಾಯ ಮಾಡಲು ಮತ್ತು ಸಂಪೂರ್ಣ ಬೆಂಬಲ ನೀಡಲು ಇಲ್ಲಿವೆ ಎಂದು ದಯವಿಟ್ಟು ಖಚಿತ ಪಡಿಸಿಕೊಳ್ಳಿ, ಎಂದು ಪ್ರಕಟಣೆಯಲ್ಲಿ ತಿಳಿಸಲಾಗಿದೆ.

ಶೀಘ್ರದಲ್ಲೇ ಸ್ಪಷ್ಟವಾದ ಆಕಾಶವು ನಿಮಗೆ ಉತ್ತಮ ಸೇವೆ ಸಲ್ಲಿಸಲು ನಮಗೆ ಸಹಾಯ ಮಾಡುತ್ತದೆ ಎಂದು ನಾವು ಭಾವಿಸುತ್ತೇವೆ, ಮತ್ತು ಈ ಸವಾಲಿನ ಸಮಯದಲ್ಲಿ ನಿಮ್ಮ ತಾಳ್ಮೆ ಮತ್ತು ತಿಳುವಳಿಕೆಗೆ ಧನ್ಯವಾದಗಳು, ಎಂದು ಇಂಡಿಗೋ ಹೇಳಿದೆ. ಹಬ್ಬ ಮತ್ತು ರಜಾ ದಿನಗಳಲ್ಲಿ ಪ್ರಯಾಣಿಕರ ಸಂಖ್ಯೆ ಹೆಚ್ಚಾಗುವ ನಿರೀಕ್ಷೆಯಿದೆ. ಈ ಸಂದರ್ಭದಲ್ಲಿ ಪ್ರಯಾಣಿಕರ ಬೇಡಿಕೆಯನ್ನು ಪೂರೈಸಲು ನಾವು ಸಂಪೂರ್ಣವಾಗಿ ಸಿದ್ಧರಿದ್ದೇವೆ ಎಂದು ಇಂಡಿಗೋ ಖಚಿತಪಡಿಸಿದೆ.

ಇದರೊಂದಿಗೆ, ಈ ರಜಾ ಋತುವಿನಲ್ಲಿ ಬೇಡಿಕೆಯ ಹೆಚ್ಚಳವನ್ನು ಪೂರೈಸಲು ನಾವು ಸಂಪೂರ್ಣವಾಗಿ ಸಿದ್ಧರಿದ್ದೇವೆ ಎಂದು ಖಚಿತಪಡಿಸಲು ನಾವು ಸಂತೋಷಪಡುತ್ತೇವೆ, ಎಂದು ಹೇಳಿಕೆಯಲ್ಲಿ ತಿಳಿಸಲಾಗಿದೆ.

**ಇಂಡಿಗೋ ವಿಮಾನಯಾನ ಸಂಸ್ಥೆಯು ಕುರಿತು ಪ್ರಕಟಣೆ**

### ವಿಮಾನಗಳ ಕಾರ್ಯಾಚರಣೆಯಲ್ಲಿ ಅಡಚಣೆ

**ಇತ್ತೀಚೆಗೆ ದೇಶದ ಹಲವೆಡೆ, ಮುಖ್ಯವಾಗಿ ಉತ್ತರ ಭಾರತದಲ್ಲಿ ಮಂಜಿನಿಂದಾಗಿ ವಿಮಾನಗಳ ಕಾರ್ಯಾಚರಣೆಯಲ್ಲಿ ಅಡಚಣೆ ಉಂಟಾಗಿದೆ. ಈ ಸಮಸ್ಯೆಗಳ ನಡುವೆಯೂ, ಇಂಡಿಗೋ ಹಬ್ಬದ ಪ್ರಯಾಣದ ಸಂದರ್ಭದಲ್ಲಿ ಕಾರ್ಯಾಚರಣೆಯನ್ನು ಸ್ಥಿರವಾಗಿ ನಿರ್ವಹಿಸುತ್ತಿದೆ. ವಿಮಾನಯಾನ ಸಂಸ್ಥೆಯು ಪ್ರತಿ ಮೂರು ದಿನಗಳಿಗೊಮ್ಮೆ ಒಂದು ಮಿಲಿಯನ್‌ಗಿಂತಲೂ ಹೆಚ್ಚು ಪ್ರಯಾಣಿಕರನ್ನು ಸಾಗಿಸುತ್ತಿರುವುದಾಗಿ ತಿಳಿಸಿತ್ತು. ನಮ್ಮ ನೆಟ್‌ವರ್ಕ್‌ನಲ್ಲಿರುವ 138 ಕಾರ್ಯಾಚರಣೆಯ ತಾಣಗಳಿಗೆ ನಾವು ನಿರಂತರವಾಗಿ 2,100-2,200 ವಿಮಾನಗಳನ್ನು ನಿರ್ವಹಿಸುತ್ತಿದ್ದೇವೆ ಮತ್ತು ಪ್ರತಿ 3 ದಿನಗಳಿಗೊಮ್ಮೆ 1 ದಶಲಕ್ಷಕ್ಕೂ ಹೆಚ್ಚು ಗ್ರಾಹಕರನ್ನು ಸಾಗಿಸುತ್ತಿದ್ದೇವೆ. ನಾವು ಇಂಡಿಗೋ ಸಮಯಕ್ಕೆ ಸರಿಯಾಗಿ ಕಾರ್ಯನಿರ್ವಹಿಸುವ ಮಾನದಂಡಗಳನ್ನು ಕಾಯ್ದುಕೊಳ್ಳುತ್ತಾ, ನಮ್ಮ ನೆಟ್‌ವರ್ಕ್‌ನಾದ್ಯಂತ ಎಲ್ಲಾ 138 ಕಾರ್ಯಾಚರಣೆಯ ತಾಣಗಳಿಗೆ ಮತ್ತು ಅಲ್ಲಿಂದ ಹಾರಾಟ ನಡೆಸುತ್ತಿದ್ದೇವೆ ಎಂದು ಸಂಸ್ಥೆ ಹೇಳಿಕೆಯಲ್ಲಿ ತಿಳಿಸಿದೆ.**

ಅಂತರಾಳದಿಂದ... EDITORIAL

# ಉನ್ನಾವ್ರೋ ಅತ್ಯಾಚಾರ ಪ್ರಕರಣ: ಸಂತ್ರಸ್ತಳೇ ಅಪರಾಧಿಯಾದರೆ?

ಭ್ರಷ್ಟಾಚಾರದ ವಿರುದ್ಧ ಆದಿವಾಸಿಗಳು-ದಲಿತರ ಮೇಲೆ ನಡೆದ ದೌರ್ಜನ್ಯಗಳ ವಿರುದ್ಧ ಧ್ವನಿಯೆತ್ತಿದ ಹಲವು ಸಾಮಾಜಿಕ ಹೋರಾಟಗಾರರು ವಿಚಾರಣೆಯ ಹೆಸರಿನಲ್ಲಿ ಜೈಲಿನಲ್ಲಿ ಕೊಳೆಯುತ್ತಿದ್ದಾರೆ. ಹಲವು ವರ್ಷಗಳಿಂದ ಜೈಲು-ನ್ಯಾಯಾಲಯ ಎಂದು ಅಲೆದಾಡುತ್ತಿರುವ ಉಮರ್ ಖಾಲಿದ್ ತಾನು ಯಾಕೆ ಜೈಲಿನಲ್ಲಿದ್ದೇನೆ ಎನ್ನುವುದರ ಕುರಿತಂತೆಯೇ ಅರಿವಿಲ್ಲ.ನ್ಯಾಯಾಲಯವೂ ಇವರನ್ನು ಯಾಕೆ ಜೈಲಿನಲ್ಲಿಟ್ಟುಕೊಂಡಿದ್ದೀರಿ ಎಂದು ಪೊಲೀಸರನ್ನು ಕೇಳುತ್ತಲೂ ಇಲ್ಲ. ಆದರೆ ಇಂದೇ ಸಂದರ್ಭದಲ್ಲಿ ದಲಿತ ಮಹಿಳೆಯ ಅತ್ಯಾಚಾರ ಮತ್ತು ಆಕೆಯ ಕುಟುಂಬ ಸದಸ್ಯರನ್ನು ಕೊಲೆಗೈದ ಆರೋಪ ಸಾಬೀತಾಗಿ ಜೈಲು ಪಾಲಾಗಿದ್ದ ಬಿಜೆಪಿಯ ಉಚ್ಚಾಟಿತ ನಾಯಕ ಕುಲದೀಪ್ ಸಿಂಗ್ ಸೆಂಗಲ್ ಶಿಕ್ಷೆಯನ್ನು ದಿಲ್ಲಿ ಹೈಕೋರ್ಟ್, ಅಮಾನತಿನಲ್ಲಿಟ್ಟಿದೆ. ಕೊಲೆ ಪ್ರಕರಣದಲ್ಲಿ ಆರೋಪಿಯಾಗಿರುವುದರಿಂದ ಬಿಡುಗಡೆ ತಡವಾಗಿದೆ.

ಆದರೆ ಯಾವ ಕ್ಷಣದಲ್ಲೂ ಆತ ಬಿಡುಗಡೆಯಾಗುವ ಸಾಧ್ಯತೆಗಳಿವೆ. ಸೆಂಗರ್‌ನನ್ನು ಯಾವ ಕಾರಣಕ್ಕೂ ಬಿಡುಗಡೆ ಮಾಡಬಾರದು, ಆತನಿಂದ ತನ್ನ ಕುಟುಂಬಕ್ಕೆ ಜೀವಭಯವಿದೆ ಎಂದು ಸಂತ್ರಸ್ತೆ ಮತ್ತು ಆಕೆಯ ಕುಟುಂಬ ಕೂಗಿ ಹೇಳುತ್ತಿದ್ದರೂ ನ್ಯಾಯಾಲಯದ ಕಿವಿ ಕಿವುಡಾಗಿದೆ. ಸಂತ್ರಸ್ತೆಯ ಮನೆಯ ಐದು ಕಿಲೋಮೀಟರ್ ಒಳಗೆ ಬರಬಾರದು ಹಾಗೂ ಸಂತ್ರಸ್ತೆ ಮತ್ತು ಆಕೆಯ ತಾಯಿಗೆ ಬೆದರಿಕೆ ಹಾಕಬಾರದು ಎಂಬ ಷರತ್ತಿನೊಂದಿಗೆ ನ್ಯಾಯಾಲಯ ಜಾಮೀನನ್ನು ನೀಡಿದೆ. ವಿಪರ್ಯಾಸವೆಂದರೆ, ಸಂತ್ರಸ್ತೆಯ ಕುಟುಂಬಕ್ಕೆ ಬೆದರಿಕೆ ಹಾಕಿರುವುದು ಮಾತ್ರವಲ್ಲ ಓರ್ವನನ್ನು ಕೊಂದು ಹಾಕಿದ ಆರೋಪ ಸಾಬೀತಾಗಿ ಸೆಂಗರ್ ಜೈಲು ಶಿಕ್ಷೆ ಅನುಭವಿಸುತ್ತಿದ್ದಾರೆ.

**ನ್ಯಾಯಾಲಯದಲ್ಲಿ ಆರೋಪಗಳು ಸಾಬೀತಾದವು. ಅನಿವಾರ್ಯವಾಗಿ ಬಿಜೆಪಿಯು ಕೂಡ ಸೆಂಗರ್‌ನನ್ನು ಪಕ್ಷದಿಂದ ಉಚ್ಚಾಟಿಸಿತು. ಸೆಂಗರ್ ಜೈಲಿನಲ್ಲಿದ್ದರೂ ಸಂತ್ರಸ್ತ ಮತ್ತು ಆಕೆಯ ಕುಟುಂಬ ಜೀವಭಯದಿಂದಲೇ ಬದುಕುತ್ತಾ ಬಂದಿದೆ. ಇದೀಗ ದಿಲ್ಲಿ ಹೈಕೋರ್ಟ್ ಸೆಂಗರ್ ಶಿಕ್ಷೆಯನ್ನು ಅಮಾನತಿನಲಿಟ್ಟು, ಜಾಮೀನು ನೀಡಿದೆ. ನ್ಯಾಯಾಲಯದ ತೀರ್ಮಾನಕ್ಕೆ ಪ್ರತಿಕ್ರಿಯಿಸಿರುವ ಸಂತ್ರಸ್ತೆ ಆತನನ್ನು ಜೈಲಿನಿಂದ ಬಿಡುಗಡೆ ಮಾಡುವುದಾದರೆ, ನನ್ನನ್ನು ಜೈಲಿಗೆ ಹಾಕಿ ಎಂದು ಮನವಿ ಮಾಡಿದ್ದಾರೆ.**

ಇಷ್ಟಕ್ಕೂ ಸಮಾಜದಲ್ಲಿ ಬಲಿಷ್ಠ ಜಾತಿ, ವರ್ಗಕ್ಕೆ ಸೇರಿದ ಮಾಜಿ ಶಾಸಕನೊಬ್ಬ ನೇರವಾಗಿ ಸಂತ್ರಸ್ತೆಯ ಮನೆಗೆ ನುಗ್ಗುವ ಅಗತ್ಯವಿದೆಯೆ ತಾನು ಮಾಡಬೇಕಾದ ಕೃತ್ಯವನ್ನು ಬೆಂಬಲಿಗರ ಜೊತೆಗೆ ಮಾಡಿಸುವ ಶಕ್ತಿ ಆರೋಪಿಗಿಲ್ಲ ಎಂದು ನ್ಯಾಯಾಲಯ ಭಾವಿಸುತ್ತಿದೆಯೆ? ಉನ್ನಾವೋ ಅತ್ಯಾಚಾರ ಪ್ರಕರಣ ಇಡೀ ದೇಶವನ್ನೇ ಬೆಚ್ಚಿ ಬೀಳಿಸಿತ್ತು. ಇಲ್ಲಿ ಆರೋಪಿ ಬಿಜೆಪಿಯ ನಾಯಕನಾಗಿದ್ದ ಸಂತ್ರಸ್ತೆ ಅಪ್ರಾಪ್ತ ವಯಸ್ಸಿನ ಬಾಲಕಿಯಾಗಿದ್ದಾಗ ಆಕೆಯನ್ನು ಅಪಹರಿಸಿ ಆರೋಪಿ ಅತ್ಯಾಚಾರಗೈದಿದ್ದ ಇದು ಕೇವಲ ಅತ್ಯಾಚಾರ ಪ್ರಕರಣ ಮಾತ್ರವಾಗಿರಲಿಲ್ಲ. ಈ ಅತ್ಯಾಚಾರದ ವಿರುದ್ಧ ದೂರು ನೀಡಿದ ಇಡೀ ಕುಟುಂಬವನ್ನೇ ಬಲಿ ತೆಗೆದುಕೊಳ್ಳಲು ಸಂಗರ್ ಯೋಜನೆ ರೂಪಿಸಿದ್ದ ಆರೋಪಿ ಅದೆಷ್ಟು ಬಲಿಷ್ಠನೆಂದರೆ, ದೂರನ್ನು ಹಿಂದೆಗೆಯಲು ಸಿದ್ಧವಿಲ್ಲದ ಸಂತ್ರಸ್ತೆಯ ತಂದೆಯನ್ನು ಸುಳ್ಳು ಪ್ರಕರಣದಲ್ಲಿ ಸಿಲುಕಿಸಿ ಜೈಲು ಸೇರುವಂತೆ ಮಾಡಿದ್ದ ನ್ಯಾಯಾಲಯದ ಆವರಣದಲ್ಲೇ ಪೊಲೀಸರ ಸಮ್ಮುಖದಲ್ಲಿ ಸಂತ್ರಸ್ತೆಯ ತಂದೆಗೆ ಕುಲದೀಪ್ ಸಿಂಗ್ ಸೆಂಗರ್‌ನ ಸೋದರನ ನೇತೃತ್ವದಲ್ಲೇ ಹಲ್ಲೆ ನಡೆದಿತ್ತು. ಅಷ್ಟೇ ಅಲ್ಲ ಅಕ್ರಮ ಶಸ್ತ್ರಾಸ್ತ್ರ ಹೊಂದಿದ ಆರೋಪ ಹೊರಿಸಿ ಹಲ್ಲೆಗೀಡಾದಾತನನ್ನೇ ಜೈಲಿಗೆ ತಳ್ಳಲಾಗಿತ್ತು. ಬಳಿಕ ಜೈಲಿನಲ್ಲಿ ಆತನನ್ನು ಕೊಂದು ಹಾಕಲಾಗಿತ್ತು. ಇದಾದ ಬಳಿಕ ಸಂತ್ರಸ್ತೆಯ ಮೇಲೂ ದಾಳಿ ನಡೆಯಿತು. ರಸ್ತೆ ಅವಘಡದ ಮೂಲಕ ಆಕೆಯನ್ನು ಸಾಯಿಸಲು ಪ್ರಯತ್ನ ನಡೆಯಿತು. ಈ ಕೃತ್ಯದಲ್ಲಿ ಆಕೆ ಕುಟುಂಬದ ಸದಸ್ಯರನ್ನು ಕಳೆದುಕೊಳ್ಳಬೇಕಾಯಿತು. ಅಂತಿಮವಾಗಿ ಸಂತ್ರಸ್ತೆ ಸಾರ್ವಜನಿಕವಾಗಿ ಆತ್ಮಹತ್ಯೆಯ ಬೆದರಿಕೆ ಒಡ್ಡಿದರು. ಹೀಗೆ ಪ್ರಕರಣ ರಾಷ್ಟ್ರಮಟ್ಟದಲ್ಲಿ ಸುದ್ದಿಯಾದ ಬಳಿಕ ಸರಕಾರ ಸೆಂಗರ್ ವಿರುದ್ಧ ದೂರು ದಾಖಲಿಸಲು ಮುಂದಾಯಿತು. ಸಂತ್ರಸ್ತೆ ಮತ್ತು ಆಕೆಯ ಕುಟುಂಬದ ಸುದೀರ್ಘ ಹೋರಾಟ, ಬಲಿದಾನಗಳ ಬಳಿಕವಷ್ಟೇ ಸಂಗರ್‌ನ ವಿರುದ್ಧ ಪೊಲೀಸ್ ವ್ಯವಸ್ಥೆ ಕ್ರಮ ತೆಗೆದುಕೊಂಡಿತು. ಆರೋಪಿಗಿರುವ ರಾಜಕೀಯ ಶಕ್ತಿಯ ಅರಿವಿದ್ದೂ ಆತನನ್ನು ನ್ಯಾಯಾಲಯ ಬಿಡುಗಡೆ ಮಾಡಲು ಮನಸ್ಸು ಮಾಡುತ್ತದೆ ಎಂದಾದರೆ ಬದಲಿಗೆ ಸಂತ್ರಸ್ತಳನ್ನು ಜೈಲಿಗೆ ವರ್ಗಾಯಿಸುವುದೇ ಹೈಕೋರ್ಟ್ ಸಂತ್ರಸ್ತೆಗೆ ನೀಡಬಹುದಾದ ಪರ್ಯಾಯ ನ್ಯಾಯವಾಗಿದೆ. ಆ ಮೂಲಕ ಆಕೆಯ ಜೀವಕ್ಕಾದರೂ ರಕ್ಷಣೆ ಸಿಕ್ಕಿದಂತಾಗಬಹುದು. ಆದರೆ, ಜೈಲಿನಲ್ಲೂ ಆಕೆಯನ್ನು ಸಾಯಿಸುವಷ್ಟು ಜನಬಲ, ಆರ್ಥಿಕ ಬಲ ಸೆಂಗಲ್‌ಗಿದೆ. ಇದು ನ್ಯಾಯಾಲಯಕ್ಕೆ ತಿಳಿಯದ ವಿಷಯವೇನೂ ಅಲ್ಲ. ವಿಪರ್ಯಾಸವೆಂದರೆ, ಸೆಂಗರ್ ಬಿಡುಗಡೆಯ ವಿರುದ್ಧ ದಿಲ್ಲಿಯಲ್ಲಿ ಪ್ರತಿಭಟನೆ ಮಾಡುತ್ತಿದ್ದ ಸಂತ್ರಸ್ತೆಯನ್ನು ಪೊಲೀಸರು ತಡೆದಿದ್ದಾರೆ. ಸಂತ್ರಸ್ತೆಯ ಆತಂಕವನ್ನು ಸರಕಾರ ಗಂಭೀರವಾಗಿ ಪರಿಗಣಿಸಿದಂತೆ ಇಲ್ಲ. ಇಂಡಿಯಾಗೇಟ್ ಬಳಿ ಪ್ರತಿಭಟನೆ ನಡೆಸುತ್ತಿದ್ದ ಸಂತ್ರಸ್ತೆಯನ್ನು ಉತ್ತರ ಪ್ರದೇಶದ ಸಚಿವ ಓಂ ಪ್ರಕಾಶ್ ರಾಜ್‌ಭರ್ ಅಣಕಿಸಿ ನಕ್ಕಿದ್ದಾರೆ. ಆಕೆಯ ಮನೆ ಉನ್ನಾವೋದಲ್ಲಿದೆ. ಮತ್ತೆ ದಿಲ್ಲಿಯಲ್ಲಿ ಏನು ಮಾಡುತ್ತಿದ್ದಾಳೆ ಅವರು ಕೇಳಿದ್ದಾರೆ. ನಿಜಕ್ಕೂ ಆತ ನಕ್ಕಿದ್ದು, ನ್ಯಾಯ ವ್ಯವಸ್ಥೆಯ ಅಸಹಾಯಕತೆಯನ್ನು ನೋಡಿ ಆತ ಮಾತ್ರವಲ್ಲ, ಈ ದೇಶದ ಜೈಲಿನಲ್ಲಿರುವ ಎಲ್ಲಾ ಅತ್ಯಾಚಾರ ಆರೋಪಿಗಳೂ ನ್ಯಾಯ ವ್ಯವಸ್ಥೆಯ ವೈಕಲ್ಯವನ್ನು ನೋಡಿ ನಗುತ್ತಿದ್ದಾರೆ. ಸೆಂಗರ್ ಪ್ರಕರಣವು ಈ ಹಿಂದೆ ಗುಜರಾತ್‌ನ ದಂಗೆಯ ಸಂದರ್ಭದಲ್ಲಿ ಸಾಮೂಹಿಕ ಹತ್ಯೆ ಮತ್ತು ಅತ್ಯಾಚಾರ ಆರೋಪದಲ್ಲಿ ಜೈಲು ಶಿಕ್ಷೆ ಅನುಭವಿಸುತ್ತಿದ್ದ 11 ಮಂದಿ ಅಪರಾಧಿಗಳನ್ನು ಗುಜರಾತ್ ಸರಕಾರ ಮಧ್ಯ ಪ್ರವೇಶಿಸಿ ಬಿಡುಗಡೆ ಮಾಡಿ ಛೀಮಾರಿಗೊಳಗಾದುದನ್ನು ನೆನಪಿಸುತ್ತದೆ. ಅಂದು ಆ ಅಪರಾಧಿಗಳ ಬಿಡುಗಡೆಯನ್ನು ಬಿಜೆಪಿ ನಾಯಕರು ಅದ್ದೂರಿಯಾಗಿ ಸ್ವಾಗತಿಸಿದ್ದರು. ಮಾತ್ರವಲ್ಲ ಗುಜರಾತ್ ವಿಧಾನಸಭಾ ಚುನಾವಣೆಯಲ್ಲಿ ಪ್ರಚಾರಕ್ಕಾಗಿ ಬಿಜೆಪಿ ನಾಯಕರು ಬಳಸಿಕೊಂಡಿದ್ದರು ಎಂದು ಮಾಧ್ಯಮಗಳು ವರದಿ ಮಾಡಿದ್ದವು.

# ನಿರಂತರಂ- ರಾಷ್ಟ್ರೀಯ ಸಂಗೀತ, ನೃತ್ಯೋತ್ಸವ – 2026



ಕಲಾ ಸಾಹಿತ್ಯ
ವೈ.ಕೆ. ಸಂಧ್ಯಾ ಶರ್ಮ
ಲೇಖಕರು
ರಂಗಕರ್ಮಿ ಹಾಗೂ ನೃತ್ಯ ನಾಟಕಗಳ ವಿಮರ್ಶಕರು

ಹೊಸವರ್ಷದ ಹೊಸ್ತಿಲಲ್ಲಿ, ಮುದ ನೀಡುವ ಮಾಗಿಕಾಲದ ದಿನಗಳಲ್ಲಿ ನಾದ-ನೃತ್ಯಗಳ ವೈವಿಧ್ಯಪೂರ್ಣ ಸುಮನೋಹರ ಕಾರ್ಯಕ್ರಮಗಳಿಂದ ಮನರಂಜಿಸಲಿರುವ ನಿರಂತರಂ ಸಂಗೀತ- ನೃತ್ಯ ಸಂಸ್ಥೆಯ ಸಂಗೀತ ಸಂಭ್ರಮದ ವರ್ಣರಂಜಿತ ಕಾರ್ಯಕ್ರಮಗಳು ಬೆಂಗಳೂರಿನ ಜನತೆಗೆ ಸುಪರಿಚಿತ. ಸದಾ, ಮನಕಾನಂದ ನೀಡುವ ನವನೂತನ ಕಾರ್ಯಕ್ರಮಗಳನ್ನು ಆಯೋಜಿಸುವ ಸಂಗೀತ ಸಂಭ್ರಮ ಸಂಸ್ಥೆಯ ನೇತೃತ್ವ ವಹಿಸಿರುವವರು ಪ್ರಖ್ಯಾತ ಸಂಗೀತ ವಿದುಷಿ ಡಾ. ಪುಸ್ತಕಂ ರಮಾ. ಸಮಾಜಮುಖಿ ಕಾರ್ಯಗಳಿಗೆ ಹೆಸರಾಗಿರುವ ಸ್ನೇಹಮಯಿ ವ್ಯಕ್ತಿತ್ವದ ಕರ್ನಾಟಕ ಕಲಾಶ್ರೀ ಡಾ. ರಮಾ ಸ್ಥಾಪಿಸಿ, ಮ್ಯಾನೇಜಿಂಗ್ ಟ್ರಸ್ಟಿಯಾಗಿರುವ, ಸಂಗೀತ ಸಂಭ್ರಮ ಸಂಸ್ಥೆಯು ಸಾರ್ಥಕ ಮೂರುದಶಕಗಳನ್ನು ಮೀರಿ ಕ್ರಮಿಸಿದ್ದು, ಕಳೆದ ಹದಿನೈದು ವರ್ಷಗಳಿಂದ, ಹಿರಿಯ, ಉದಯೋನ್ಮುಖ ಕಲಾವಿದರಿಗೆ ನಿರಂತರವಾಗಿ ವೇದಿಕೆಯನ್ನು ಒದಗಿಸುತ್ತ ಬಂದಿರುವುದು ಸಂಗೀತ ಕಲಾವಿದೆ ರಮಾ ಅವರ ಅಸ್ಮಿತೆ. ಪ್ರತಿವರ್ಷ ತಪ್ಪದೆ ಯಶಸ್ವಿಯಾಗಿ ನಡೆಸಿಕೊಂಡು ಬರುತ್ತಿರುವ ಈ ನಿರಂತರಂ ಸಂಗೀತ-ನೃತ್ಯೋತ್ಸವವು ದಿನೇ ದಿನೇ ಜನಪ್ರಿಯತೆಯನ್ನು ಪಡೆಯುತ್ತಿರುವುದು ಸಂತಸದ ಸಂಗತಿ. ಎಂದಿನಂತೆ ಈ ಬಾರಿಯೂ ಹೊಸವರ್ಷದ ಜನವರಿಯ ಮೊದಲ ದಿನದಿಂದಲೇ 1ನೇ ತಾ. ಗುರುವಾರ ದಿಂದ 4ನೇ ತಾ ಭಾನುವಾರದವರೆಗೂ ನಾಲ್ಕುದಿನಗಳ ವಿಶಿಷ್ಟ ಕಾರ್ಯಕ್ರಮಗಳನ್ನು ಆಯೋಜಿಸಲಾಗಿದೆ.

1 ರಂದು ಗುರುವಾರ ಸಂಜೆ 5 ಗಂಟೆಗೆ ಉದ್ಘಾಟನೆ- ಶ್ರೀ ಚಿರಂಜೀವಿ ಸಿಂಗ್ ಐ.ಎ.ಎಸ್. ಕರ್ನಾಟಕ ಸರ್ಕಾರದ ನಿವೃತ್ತ ಅಡಿಷನಲ್ ಚೀಫ್ ಸೆಕ್ರೆಟರಿ ಅನಂತರ- ಸಂಗೀತ ಸಂಭ್ರಮದ ಕಲಾವಿದರಿಂದ ಸಮೂಹ ಗೀತೆಗಳು. ವಿ. ರಾಜ್ಯಶ್ರೀ ಜೋಸ್ಯರ್ ಶ್ರೀಕಾಂತ್ ಕರ್ನಾಟಕ ಸಂಗೀತ, ಅಮೆರಿಕೆಯ ಕು. ಶ್ರೇಯಾ ಶ್ರೀರಾಮ್ ಅವರಿಂದ ಭರತನಾಟ್ಯ. ಅನಂತರ- ಕರೋಕೆ - ಸಿನಿಮಾ ಜನಪ್ರಿಯ ಹಾಡುಗಳು-ವಿ. ದೀಪ್ತಿ ಶ್ರೀನಾಥ್, ಕು. ಸಾಕ್ಷಿ ಜಗನ್ನಾಥ್ ಮತ್ತು ವಿ. ಭಾರ್ಗವ್ ಹೆಚ್.ಸಿ. ನಂತರ- ಮೈಸೂರಿನ ಡಾ. ಕೃಪಾ ಫಡ್ಕೆ ಮತ್ತು ತಂಡದವರಿಂದ ಗೀತಾಮೃತಧುಹೆ ನಮಃ ನೃತ್ಯ ನಾಟಕ. 2 ರಂದು ಶುಕ್ರವಾರ ಸಂಜೆ 5 ಗಂಟೆಗೆ ? ಸಂಗೀತ ಸಂಭ್ರಮದ ಕಲಾವಿದರಿಂದ ಸಮೂಹ ಗೀತೆಗಳು. ಕರ್ನಾಟಕ ಸಂಗೀತ ವಿ. ಹರಿಣಿ ಶ್ರೀಧರ್. ಶ್ರೀ. ಸುಜಯ್ ಶಾನುಭಾಗ್ ಕಲರ್ಸ್ ಆಫ್ ಭಕ್ತಿ- ಪಾಂಡುರಂಗ ಭಕ್ತರ ಕುರಿತು ಏಕವ್ಯಕ್ತಿ ಪ್ರದರ್ಶನ. ಅಮೆರಿಕೆಯ ಕು. ಶಿಲ್ಪ ಸೇತುರಾಮನ್, ಶ್ರೀಮತಿ ಪ್ರೀತಿ ಪ್ರಸಾದ್ -ಭರತನಾಟ್ಯ 3 ರಂದು ಶನಿವಾರ- ಬೆಳಗ್ಗೆ- 9.30 ಗಂಟೆಗೆ ಸಂಗೀತ ಸಂಭ್ರಮದ ಕಲಾವಿದರಿಂದ ಸಮೂಹ ಗೀತೆಗಳು. ಕರ್ನಾಟಕ ಶಾಸ್ತ್ರೀಯ ಸಂಗೀತ- ವಿ. ವಿಭಾ ರವೀಂದ್ರ ಮತ್ತು ವಿ.ಪಲ್ಲವಿ ರಂಗಿನೀದಿ ಭರತನಾಟ್ಯ- ಕು. ದಿಶಾ ಯೂ. ,ಶ್ರೀಮತಿ. ಸುಕನ್ಯ ರಾಘವ್, ಶ್ರೀಮತಿ ಸುಪ್ರಿಯಾ ಅಶ್ವಿನ್. ಭರತನಾಟ್ಯ- ಕು. ಪೂರ್ಣಾ ಪವಾರ್ ಮತ್ತು ಶ್ರೀ ಗೌರೀ ನೃತ್ಯಾಲಯ ಸಂಜೆ 5 ಗಂಟೆಗೆ- ಸಂಗೀತ ಸಂಭ್ರಮದ ಕಲಾವಿದರಿಂದ ಸಮೂಹ ಗೀತೆಗಳು. ಭರತನಾಟ್ಯ- ಅಭ್ಯುದಯ ಧ್ಯಾನ್ ಭೂಷಣ್, ಅಭಿಜ್ಞಾನ್ ವೇದಾಂತ್ ಭೂಷಣ್ , ಅಮೆರಿಕೆಯ ಶ್ರುತಿಲಯ ಸ್ಕೂಲ್ ಆಫ್ ಡ್ಯಾನ್ಸ್, ಅಮೆರಿಕೆಯ ಪವಿತ್ರ ದಂಟು ಮತ್ತು ಡಾ. ರಕ್ಷಾ ಕಾರ್ತೀಕ್ ತ್ಯಾಗರಾಜ ವೈಭವಂ ನೃತ್ಯರೂಪಕ

ಸ್ಥಳ: ಸೇವಾಸದನ, ಮಲ್ಲೇಶ್ವರ, ಬೆಂಗಳೂರು. 4 ರಂದು ಭಾನುವಾರ- ಸಂಜೆ 3.30 ವೇದಿಕ್ ಪ್ರಾರ್ಥನೆ . 5 ಗಂಟೆಗೆ ಸಂಭ್ರಮ ಪುರಸ್ಕಾರ - ಪ್ರಶಸ್ತಿ ಪುರಸ್ಕೃತರು- ಶ್ರೀಮತಿ. ವಸಂತ ಮಾಧವಿ, ಪ್ರಕಾಶ್ ಬೆಳವಾಡಿ, ವೇಲು ಲಹರಿ, ದಾ. ಎ.ವಿ. ಪ್ರಸನ್ನ, ಪದ್ಮಿನಿ ರವಿ, ಹೆಚ್.ಎನ್. ಸುರೇಶ, ಎ.ವಿ.ಸತ್ಯನಾರಾಯಣ, ಡಾ.ಎನ್. ಸತ್ಯಪ್ರಕಾಶ್, ಡಾ. ಸಿಂಧೂರಿ ಜಯಸಿಂಘೆ, ಮಧುಶ್ರೀ ಸೇತುರಾಮನ್, ನೀಲಾ ರಾಮಾನುಜ, ಎಸ್.ವಿ.ಗಿರಿಧರ್, ಪಿ. ಜನಾರ್ದನ್ ರಾವ್, ಜಯರಾಂ ಕಿಕ್ಕೇರಿ ಮತ್ತು ಎಂ.ಎ. ಶ್ರೀ ಕಿಶನ್. ಮುಖ್ಯ ಅತಿಥಿಗಳು- ಶ್ರೀ ಯದುಗಿರಿ ಯತಿರಾಜ ರಾಮಾನುಜ ಜೀಯರ್ ಸ್ವಾಮಿ, ಡಾ. ಸಿ.ಎನ್. ಅಶ್ವಥ್ ನಾರಾಯಣ್ ಶಾಸಕರು, ನಾಗಾಭರಣ, ಡಾ. ನಾಗಮಣಿ ಶ್ರೀನಾಥ್, ರೇವತಿ ಕಾಮತ್ ಮತ್ತು ಜಯಶ್ರೀ -ಕೂನ್ತುಲ್ಲಿ. ಫ್ಯೂಶನ್ ಮ್ಯುಸಿಕ್- ಸಂಗಮ ಸಂಭ್ರಮ- ಟಿಕೆಟ್ ಮೂಲಕ ಪ್ರವೇಶ. ಸ್ಥಳ: ಚೌಡಯ್ಯ ಮೆಮೋರಿಯಲ್ ಹಾಲ್, ವಯ್ಯಾಲಿಕಾವಲ್, ಬೆಂಗಳೂರು. ಎಲ್ಲಾ ಕಲಾರಸಿಕರಿಗೂ ಆದರದ ಸ್ವಾಗತ.



• ಉದಯವಾಹಿನಿ, ವಿಶೇಷ

# ವೈಕುಂಠ ಏಕಾದಶಿ: ಉಪವಾಸ
## ಆಧ್ಯಾತ್ಮ ವೈಜ್ಞಾನಿಕತೆಯ ಸಂಗಮ

ಡಾ. ಗುರುರಾಜ ಪೋಶೆಟ್ಟಿಹಳ್ಳಿ (ಪ್ರಣವ)



ಭಾರತೀಯ ಸಂಸ್ಕೃತಿಯಲ್ಲಿ ವ್ರತ ಪರ್ವಗಳೆಂದರೆ ಕೇವಲ ಧಾರ್ಮಿಕ ಆಚರಣೆಗಳಲ್ಲ; ಅವು ದೇಹ, ಮನಸ್ಸು ಮತ್ತು ಸಮಾಜವನ್ನು ಸಮತೋಲನದಲ್ಲಿ ಇಡುವ ಜ್ಞಾನಪರ ಪರಂಪರೆ. ಅಂತಹ ಪರ್ವಗಳಲ್ಲಿ ವೈಕುಂಠ ಏಕಾದಶಿಗೆ ವಿಶಿಷ್ಟ ಸ್ಥಾನವಿದೆ. ಇದು ಭಕ್ತಿ, ತತ್ವಚಿಂತನೆ, ಉಪವಾಸದ ವೈಜ್ಞಾನಿಕ ಸತ್ಯ ಮತ್ತು ಮೋಕ್ಷಸಂಕಲ್ಪ ಎಲ್ಲವನ್ನೂ ಒಟ್ಟುಗೂಡಿಸುವ ಪವಿತ್ರ ದಿನ. ವೈಕುಂಠ ಏಕಾದಶಿ ಎಂಬ ಪದವೇ ಆಳವಾದ ಅರ್ಥವನ್ನು ಒಳಗೊಂಡಿದೆ. ವೈಕುಂಠ ಎಂದರೆ ವಿಷ್ಣುಲೋಕ. ಮಹಾಭಾರತದ ಶಾಂತಿಪರ್ವದ ಪ್ರಕಾರ, ಒಂದು ಮನ್ವಂತರದಲ್ಲಿ ವಿಷ್ಣು ವಿಕುಂಠೆ ಎಂಬ ದೇವಿಯಲ್ಲಿ ಅವತರಿಸಿದ್ದರಿಂದ ನಾರಾಯಣನಿಗೆ ವೈಕುಂಠ ಎಂಬ ಹೆಸರು ಬಂದಿತು. ಏಕಾದಶಿ ಎಂದರೆ ಚಾಂದ್ರಮಾನದಲ್ಲಿನ ಹನ್ನೊಂದನೆಯ ತಿಥಿ. ಆದರೆ ಏಕಾದಶಿ ಕೇವಲ ಒಂದು ದಿನವಲ್ಲ; ಅದು ವ್ರತ, ಸಾಧನೆ ಮತ್ತು ಆತ್ಮನಿಯಂತ್ರಣದ ಸಂಕೇತ. ಏಕಾದಶಿ ವ್ರತದ ಆಚರಣೆಗೆ ಸ್ಪಷ್ಟ ನಿಯಮಗಳಿವೆ. ದಶಮಿಯಂದು ಒಂದು ಹೊತ್ತು ಮಾತ್ರ ಸಾತ್ವಿಕ ಆಹಾರ ಸೇವಿಸಿ, ಭೋಗವಿಲಾಸವನ್ನು ತ್ಯಜಿಸಿ, ಏಕಾದಶಿ ದಿನ ಉಪವಾಸ ಆಚರಿಸಿ, ದ್ವಾದಶಿಯಂದು ನಿತ್ಯಕರ್ಮಗಳ ನಂತರ ಪಾರಣೆ ಮಾಡಬೇಕು. ಇಲ್ಲಿ ಉಪವಾಸ ಎಂದರೆ ಕೇವಲ ಆಹಾರ ತ್ಯಾಗವಲ್ಲ; ಉಪ ಎಂದರೆ ಸಮೀಪ, ವಾಸ ಎಂದರೆ ವಾಸಿಸುವುದು ಅಂದರೆ ಭಗವಂತನ ಸಾನಿಧ್ಯದಲ್ಲಿ ಮನಸ್ಸನ್ನು ಸ್ಥಿರಗೊಳಿಸುವುದು.

ಆಹಾರ ತ್ಯಾಗದಿಂದ ದೇಹಕ್ಕೆ ವಿಶ್ರಾಂತಿ, ಭಗವನ್ನಾಮ ಸ್ಮರಣೆಯಿಂದ ಮನಸ್ಸಿಗೆ ಶಾಂತಿ ದೊರೆಯುತ್ತದೆ. ಮಹಾಕವಿ ಕಾಳಿದಾಸ ಹೇಳುವಂತೆ: ಶರೀರಮಾದ್ಯಂ ಖಲು ಧರ್ಮಸಾಧನಂ ಧರ್ಮ ಸಾಧನೆಗೆ ಆರೋಗ್ಯಕರ ಶರೀರ ಅಗತ್ಯ. ವೈಕುಂಠ ಏಕಾದಶಿಯ ಪೌರಾಣಿಕ ಹಿನ್ನೆಲೆ ಭಕ್ತಿಯಲ್ಲಿ ತೇಲುವಂತಿದೆ. ಭಾಗವ ತೋತ್ತಮನಾದ ನಂದಗೋಪನು ಏಕಾದಶಿ ದ್ವಾದಶಿ ವ್ರತಗಳನ್ನು ಕಟ್ಟುನಿಟ್ಟಾಗಿ ಪಾಲಿಸುತ್ತಿದ್ದನು. ಒಂದು ದ್ವಾದಶಿಯಂದು ಅಲ್ಪಕಾಲ ಮಾತ್ರ ತಿಥಿ ಇದ್ದುದರಿಂದ ಮುಂಜಾನೆ ಯಮುನೆಯಲ್ಲಿ ಸ್ನಾನಕ್ಕೆ ಇಳಿದಾಗ, ವರುಣನ ಸೇವಕನಾದ ರಾಕ್ಷಸನು ಅವನನ್ನು ವರುಣಲೋಕಕ್ಕೆ ಎಳೆದೊಯ್ದನು. ಈ ಸುದ್ದಿ ತಿಳಿದ ಶ್ರೀಕೃಷ್ಣ ವರುಣಲೋಕಕ್ಕೆ ತೆರಳಿ ತಂದೆಯನ್ನು ಸುರಕ್ಷಿತವಾಗಿ ಕರೆತಂದನು. ಈ ಸಂದರ್ಭದಲ್ಲಿ ಗೋಪಾಲರು ಕೃಷ್ಣನ ದಿವ್ಯತ್ವವನ್ನು ಅರಿಯಲಾರದೆ ವ್ಯಾಕುಲರಾದಾಗ, ಕೃಷ್ಣನು ಯಮುನಾ ನದಿಯ ಬ್ರಹ್ಮಕುಂಡದಲ್ಲಿ ಮುಳುಗುವಂತೆ ಹೇಳಿದನು. ಅವರು ಮುಳುಗಿ ಹೊರಬಂದಾಗ ವೈಕುಂಠದ ದರ್ಶನವಾಯಿತು. ಈ ಘಟನೆ ಏಕಾದಶಿಯನ್ನು ವೈಕುಂಠ ಏಕಾದಶಿ ಎಂದು ಕರೆಯಲು ಕಾರಣವಾಯಿತೆಂದು ಪುರಾಣಗಳು ಸೂಚಿಸುತ್ತವೆ. ಧನುರ್ಮಾಸದ ಶುಕ್ಲ ಏಕಾದಶಿಯೇ ವೈಕುಂಠ ಅಥವಾ ಮುಕ್ಕೋಟಿ ಏಕಾದಶಿ. ಸೂರ್ಯನು ಧನುಸ್ಸಿನಲ್ಲಿ ಸಂಚರಿಸುವ ಈ ಅವಧಿಯಲ್ಲಿ ಬರುವ ಈ ದಿನ, ವೈಷ್ಣವ ಪರಂಪರೆಯಲ್ಲಿ ಅತ್ಯಂತ ಪವಿತ್ರ. ಮುಕ್ಕೋಟಿ ಎಂದರೆ ಮೂರು ಕೋಟಿ ದೇವತೆಗಳು. ಈ ದಿನ ಮಹಾವಿಷ್ಣು ಗರುಡವಾಹನಾರೂಢನಾಗಿ ಮೂರು ಕೋಟಿ ದೇವತೆಗಳೊಂದಿಗೆ ಭೂಲೋಕಕ್ಕೆ ಇಳಿದು ಭಕ್ತರಿಗೆ ದರ್ಶನ ನೀಡುತ್ತಾನೆ ಎಂಬ ನಂಬಿಕೆ ಇದೆ. ಆದ್ದರಿಂದಲೇ ಈ ಏಕಾದಶಿಯನ್ನು



• ಉದಯವಾಹಿನಿ, ವಿಶೇಷ

ಮೂರು ಕೋಟಿ ಏಕಾದಶಿಗಳಿಗೆ ಸಮಾನವಾದ ಪುಣ್ಯ ನೀಡುವ ದಿನವೆಂದು ಹೇಳಲಾಗುತ್ತದೆ. ಈ ದಿನ ವಿಷ್ಣು ದೇವಾಲಯಗಳಲ್ಲಿ ಉತ್ತರ ದ್ವಾರ ವೈಕುಂಠದ್ವಾರ ತೆರೆಯಲಾಗುತ್ತದೆ. ಸಾಮಾನ್ಯ ದಿನಗಳಲ್ಲಿ ಮುಚ್ಚಿರುವ ಈ ದ್ವಾರ, ವೈಕುಂಠ ಏಕಾದಶಿ ದಿನ ಮಾತ್ರ ತೆರೆಯಲ್ಪಡುವುದು ಮೋಕ್ಷದ ಸಂಕೇತ. ವೈಕುಂಠ ದ್ವಾರದ ಮೂಲಕ ಭಗವಂತನ ದರ್ಶನ ಪಡೆದು ಹೊರಬಂದರೆ ಸಪ್ತಜನ್ಮದ ಪಾಪನಾಶವಾಗುತ್ತದೆ ಎಂಬ ಭಕ್ತರ ನಂಬಿಕೆ ಆಳವಾಗಿ ನೆಲೆಸಿದೆ.


ತಿರುಮಲ ತಿರುಪತಿಯಲ್ಲಿ ಈ ದರ್ಶನಕ್ಕೆ ಲಕ್ಷಾಂತರ ಭಕ್ತರು ಕಾದು ನಿಲ್ಲುವ ದೃಶ್ಯವೇ ಅದರ ಮಹತ್ವಕ್ಕೆ ಸಾಕ್ಷಿ. ವೈಕುಂಠ ಏಕಾದಶಿಯೊಂದಿಗೆ ಉಪವಾಸದ ವೈಜ್ಞಾನಿಕ ಅರ್ಥವೂ ಜೋಡಿಕೊಂಡಿದೆ. ಈ ದಿನ ಅಕ್ಕಿ ಸೇವಿಸಬಾರದು ಎಂಬ ನಂಬಿಕೆಗೆ ಪೌರಾಣಿಕ ಕಾರಣವಿದೆ ಮೊರಾ ಎಂಬ ರಾಕ್ಷಸನು ಅಕ್ಕಿಯಲ್ಲಿ ಅಡಗಿರುತ್ತಾನೆ ಎನ್ನುವುದು. ಆದರೆ ಆಧುನಿಕ ದೃಷ್ಟಿಯಲ್ಲಿ, ಮೊರಾ ರಾಜಸ, ತಾಮಸ ಗುಣಗಳ ಪ್ರತೀಕ. ಉಪವಾಸದ ಮೂಲಕ ಈ ಗುಣಗಳನ್ನು ಜಯಿಸಿ ಸಾತ್ವಿಕತೆಯತ್ತ ಸಾಗುವುದೇ ಇದರ ಅಂತರಾರ್ಥ. ಒಂದು ದಿನದ ನಿಯಂತ್ರಿತ ಉಪವಾಸ ದೇಹದ ಜೀರ್ಣಕ್ರಿಯೆಗೆ ವಿಶ್ರಾಂತಿ ನೀಡಿ, ಮನಸ್ಸನ್ನು ಸಂಯಮಕ್ಕೆ ತರುತ್ತದೆ ಎಂಬುದು ವಿಜ್ಞಾನವೂ ಒಪ್ಪುವ ಸತ್ಯ. ವಿಷ್ಣು ಪುರಾಣದ ಪ್ರಕಾರ, ಮುಕ್ಕೋಟಿ ಏಕಾದಶಿಯ ಒಂದು ಉಪವಾಸವೇ ಉಳಿದ 23 ಏಕಾದಶಿಗಳ ಫಲವನ್ನು ನೀಡುತ್ತದೆ. ಅಂದರೆ ಇದು ಸಂಕ್ಷಿಪ್ತದಲ್ಲಿ ಮಹಾಫಲ ನೀಡುವ ಸಾಧನೆ. ಈ ದಿನ ಹೋಮ, ಹವನ, ಜಪ, ಜಾಗರಣೆಗಳನ್ನು ಆಚರಿಸುವುದರಿಂದ ಆತ್ಮಶುದ್ಧಿ ಸಾಧ್ಯವೆಂದು ಶಾಸ್ತ್ರಗಳು ಹೇಳುತ್ತವೆ. ವೈಕುಂಠ ಏಕಾದಶಿ ನಮಗೆ ಹೇಳುವ ಸಂದೇಶ ಸ್ಪಷ್ಟ ಇಂದ್ರಿಯನಿಗ್ರಹ, ಮನೋನಿಯಂತ್ರಣ ಮತ್ತು ಭಕ್ತಿಯ ಸಮನ್ವಯವೇ ಮುಕ್ತಿಯ ಮಾರ್ಗ. ವೈಕುಂಠ ಎಂಬುದು ಕೇವಲ ಲೋಕವಲ್ಲ; ಅದು ಮನಸ್ಥಿತಿ. ಆ ಸ್ಥಿತಿಗೆ ತಲುಪಲು ಏಕಾದಶಿಯ ವ್ರತ ಒಂದು ಸಾಧನ. ಆಚರಣೆಗಿಂತ ಅರ್ಥವನ್ನು ಅಳವಡಿಸಿಕೊಂಡಾಗಲೇ ವೈಕುಂಠ ಏಕಾದಶಿ ನಮ್ಮ ಬದುಕಿನಲ್ಲಿ ಸಾರ್ಥಕವಾಗುತ್ತದೆ.

# ಮಹಾಭಾರತ

- ಮಹಾಭಾರತದ ಮತ್ತೊಂದು ಹೆಸರು ಯಾವುದು - ಜಯ
- ಹನೂಮಂತನ ಜನ್ಮ ನಾಮ ಏನು - ಸುಂದರ
- ಭಗವದ್ಗೀತೆಯ ನಂತರ ಕೃಷ್ಣ ಮತ್ತೊಮ್ಮೆ ಅರ್ಜುನನಿಗೆ ಉಪದೇಶಿಸಿದ ಗೀತೆ ಯಾವುದು - ಅನುಗೀತೆ
- ಭೀಷ್ಮನ ಧ್ವಜ ಚಿಹ್ನೆ ಯಾವುದು - ಕನಕತಾಳವೃಕ್ಷ
- ಕಠೋಪನಿಷತ್ ಯಾರಿಬ್ಬರ ಸಂವಾದದಿಂದ ರೂಪುಗೊಂಡಿತು - ಯಮ ಮತ್ತು ನಚೀಕೇತ
- ವರವೇ ಶಾಪದಂತಾದ ದುರಂತ ಬದುಕಿನ ಯಯಾತಿಯ ಮಗಳು ಯಾರು - ಮಾಧವಿ
- ಭೀಮನ ಗಧೆಯನ್ನು ಮೊದಲು ಉಪಯೋಗಿಸಿದ ರಕ್ಕಸ ಯಾರು - ವೃಷಪರ್ವ
- ಪುರೂರವನ ತಂದೆ ಯಾರು - ಬುಧ
- ಮೂಕಾಂಬಿಕೆ ಮೂಕಾಸುರನೊಡನೆ ಹೋರಾಡಿದಳೆಂದು ಪ್ರತೀತಿ ಇರುವ ತ್ರಿಶೂಲ ವರ್ತಮಾನ ಕಾಲದಲ್ಲಿ ಎಲ್ಲಿದೆ, ಮತ್ತು ಏನದರ ವಿಶೇಷತೆ - ಕೊಡಚಾದ್ರಿ, ಅಪರೂಪದ ಲೋಹ
- ಪುರಾಣಗಳ ಪ್ರಕಾರ ಭೂಮಿ ಎಷ್ಟು ದ್ವೀಪಗಳನ್ನೊಳಗೊಂಡಿದೆ - ಸಪ್ತ ದ್ವೀಪ
- ಜಯದ್ರಥನ ವಧೆ ಮಹಾಭಾರತದ ಎಷ್ಟನೇ ದಿನ ಆಯಿತು - 14
- ಜಯದ್ರಥನ ತಂದೆ ಯರು ವೃದ್ಧಕ್ಷತ್ರ
- ಪ್ರಹ್ಲಾದನ ಮಗ ಯಾರು - ವಿರೋಚನ
- ಇಂದ್ರನ ಬೆರಳನ್ನೆ ಸ್ತನ್ಯವಾಗಿ ಪಡೆದ ರಾಜ ಯಾರು - ಮಾಂದಾತ
- ಮಹಾಭಾರತವನ್ನು ಯಾರು ಬರೆದಿರುವರೆಂಬ (ಲಿಪಿ) ಪ್ರತೀತಿ ಇದೆ - ಗಣೇಶ
- ಯೋಜನಗಂಧಿಯ ಸಹೋದರ ಯಾರು - ವಿರಾಟ
- ಯೋಜನಗಂಧಿಯ ಹುಟ್ಟಿಗೆ ಕಾರಣನಾದ ತಂದೆ ಯಾರು - ವಸು
- ದೇವೇಂದ್ರನ ಸಾರಥಿ ಯಾರು - ಮಾತಲಿ
- ದಾರಿ ತಪ್ಪಿದ ಹನೂಮಂತನಿಗೆ ಲಂಕೆಯ ದಾರಿ ತೋರಿಸಿದ ಋಷಿ ಯಾರು - ತೃಣಬಿಂದು
- ಪ್ರಾಣಿಗಳ ಭಾಷೆ ತಿಳಿದಿದ್ದ ರಾಜ ಯಾರು - ಅಶ್ವಪತಿ
- ಯಾವ ರಾಕ್ಷಸನನ್ನು ಶತ್ರುಘ್ನ ಕೊಂದ - ಲವಣಾಸುರ
- ಶಂತನುವಿನ ಅಣ್ಣ ಯಾರು ದೇವಾಪಿ
- ವಾಲಿಗೆ ಕಾಂಚನ ಮಾಲೆ ಕೊಟ್ಟವರು ಯಾರು - ಇಂದ್ರ
- ಇರಾವಂತ ಯಾರ ಮಗ - ಅರ್ಜುನ



# ರಾಮಾಯಣ




## ಹನುಮಂತನು ಶ್ರೀ ರಾಮನ ಬಳಿಗೆ ಹೋದದ್ದು

• ಹಿಂದಿನ ಸಂಚಿಕೆಯಿಂದ 120 ನೆಯ ಅಧ್ಯಾಯ

ಈ ದೇಶಕ್ಕೆ ಹೇಗೆ ಬಂದಿರಿ ನೀವು ಮಹಾಧೈರ್ಯವಂತರು. ನಾರುಬಟ್ಟೆ ಕೃಷ್ಣಾಜಿನಗಳನ್ನು ಧರಿಸಿಕೊಂಡಿರುವ ನೀವಾರು ಮಹಾದುಃಖಾಕ್ರಾಂತರಾಗಿ ನಿಟ್ಟುಸಿರುಬಿಡುತ್ತ ಸಮಸ್ತ ಪ್ರಾಣಿಗಳಿಗೂ ದುಃಖವನ್ನುಂಟುಮಾಡುತ್ತಿದ್ದೀರಿ. ನೀವು ಸಿಂಹದಂತೆ ಗಂಭೀರದೃಷ್ಟಿಯುಳ್ಳವರು. ಸಿಂಹರಾಜನಿಗಿಂತಲೂ ವಿಶೇಷವಾದ ಪರಾಕ್ರಮವುಳ್ಳವರು. ನಿಮ್ಮ ಕೈಯಲ್ಲಿರುವ ಬಿಲ್ಲುಬಾಣಗಳು ಇಂದ್ರಚಾಪದಂತೆ ಮನೋಹರವಾಗಿವೆ. ನಿಮ್ಮ ಆಕಾರವನ್ನು ನೋಡಿದರೆ ಸಮಸ್ತ ಶತ್ರುಗಳನ್ನು ಜಯಿಸುವಿರೆಂದು ತೋರುತ್ತದೆ. ನೀವು ಮಹಾರೂಪ ಸಂಪನ್ನರಾಗಿ ಐಶ್ವರವಂತರಾಗಿದ್ದೀರಿ. ನಿಮ್ಮ ಭುಜಗಳು ಆನೆಯ ಸೊಂಡಿಲಂತೆ ಮನೋಹರವಾಗಿ ಒಪ್ಪುತ್ತಿವೆ. ನಿಮ್ಮನ್ನು ನೋಡಿದರೆ ಮದವೇರಿದ ವೃಷಭರಾಜನಂತೆ ಒಪ್ಪುತ್ತಿದ್ದೀರಿ. ನಿಮ್ಮ ದೇಹಕಾಂತಿಯಿಂದ ಈ ಪರ್ವತವೆಲ್ಲವೂ ಬೆಳಗುತ್ತಿದೆ. ನೀವು ರಾಜ್ಯಾಧಿಪತ್ಯಕ್ಕೆ ಯೋಗ್ಯವಾದ ದೇವತಾವಂಶದವರು ಮನುಷ್ಯರಲ್ಲ, ನೀವು ಈ ದೇಶಕ್ಕೆ ಬಂದ ಕಾರಣವೇನು ನೀವು ಕಮಲದ ಎಸಳಿನಂತೆ ವಿಶಾಲವಾದ ಕಣ್ಣುಗಳುಳ್ಳವರು. ಮಹಾಪರಾಕ್ರಮಿಗಳು. ಹಾಗಾದರೂ ಜಡೆಗಳನ್ನು ಧರಿಸಿಕೊಂಡಿದ್ದೀರಿ. ರೂಪದಲ್ಲಿ ಒಬ್ಬರಿಗೊಬ್ಬರು ಸಮಾನರಾಗಿದ್ದೀರಿ. ನೀವು ದೈವವಿಲಾಸದಿಂದ ಭೂಲೋಕಕ್ಕೆ ಬಂದ ಚಂದ್ರಸೂರರಂತೆ ಒಪ್ಪುತ್ತಿದ್ದೀರಿ. ತೆರಪಾದ ಎದೆಕಟ್ಟುಗಳುಳ್ಳವರಾಗಿಯೂ ಮಹಾಬಲವಂತರಾಗಿಯೂ ಮನುಷ್ಯಾವತಾರಮಾಡಿದ ದೇವತೆಗಳಂತೆಯೂ ಒಪ್ಪುತ್ತಿದ್ದೀರಿ. ಸಿಂಹ ರಾಜನಂತೆ ಹೆಕ್ಕತ್ತುಳ್ಳವರಾಗಿ ಅತ್ಮಂತ ಉತ್ಸಾಹಶಕ್ತಿಯುಳ್ಳವರಾಗಿದ್ದೀರಿ. ನಿಮ್ಮ ತೋಳುಗಳು ನಿಡಿದಾಗಿ ಕ್ರಮವರ್ತುಳವಾಗಿ ಲಾಳವಿಂಡಿಗೆಯಂತೆ ಒಪ್ಪುತ್ತಿವೆ. ನಿಮ್ಮ ಭುಜಗಳು ಭುಜಕೀರ್ತಿಯೇ ಮೊದಲಾದ ದಿವ್ಯಾಭರಣಗಳಿಗೆ ಯೋಗ್ಯವಾಗಿವೆ. ಇಂಥ ಭುಜಗಳನ್ನು ಏಕೆ ಅಲಂಕರಿಸಿಕೊಳ್ಳದಿದ್ದೀರಿ ನಿಮ್ಮನ್ನು ನೋಡಿದರೆ ಈ ಭೂಮಂಡಲವನ್ನು ರಕ್ಷಿಸುವುದಕ್ಕೆ ಸಮರ್ಥರಾದವರೆಂದು ತೋರುತ್ತದೆ. ನೀವು ಸಮುದ್ರಪರ್ಯಂತವಾಗಿ ಹಿಮದತುಮಧ್ಯದಲ್ಲಿರುವ ಸಮಸ್ತ ಭೂಮಂಡಲಕ್ಕೂ ರಕ್ಷಕರೆಂದು ತೋರುತ್ತಿದೆ. ಚಿನ್ನದ ಮುಲಾಮುಳ್ಳ ರತ್ನಖಚಿತವಾದ ನಿಮ್ಮ ಬಿಲ್ಲುಗಳು ಇಂದ್ರಚಾಪದಂತೆ ಒಪ್ಪುತ್ತಿವೆ. ಮೆರೆಯುತ್ತಿರುವ ಸರ್ಪಗಳಂತೆ ಶತ್ರುಗಳ ಪ್ರಾಣಾಪಹಾರ ಮಾಡುವ ಕೂರಲಗುಳ್ಳ ಭಯಂಕರವಾದ ಅಂಬುಗಳಿಂದ ಪರಿಪೂರ್ಣವಾದ ನಿಮ್ಮ ಬತ್ತಳಿಕೆಗಳು ರಮಣೀಯವಾಗಿ ಒಪ್ಪುತ್ತಿವೆ. ನಿಮ್ಮ ಖಡ್ಗಗಳು ಪೊರೆಬಿಟ್ಟ ಮಹಾಸರ್ಪಗಳಂತೆ ಒಪ್ಪುತ್ತಿವೆ. ಎಲೈ ವೀರರೆ, ನನ್ನೊಡನೆ ನೀವು ಏಕೆ ಮಾತನಾಡದಿದ್ದೀರಿ ಇನ್ನು ನನ್ನ ವೃತ್ತಾಂತವನ್ನು ಕೇಳಿ : ಧರ್ಮಾತ್ಮನಾಗಿ ಸತ್ಯವಾದಿಯಾದ ಸುಗ್ರೀವನು ನಿಮ್ಮೊಡನೆ ಸ್ನೇಹವನ್ನು ಬಯಸುತ್ತಿರುವನು. ನಾನು ಆತನ ಪ್ರಧಾನನು : ವಾಯುಪುತ್ರನು, ನನ್ನ ಹೆಸರು ಹನುಮಂತ. ನಾನು ಸುಗ್ರೀವನ ಕಾರ್ಯವನ್ನು ಸಾಧಿಸಿ ಆತನ ಚಿತ್ರಪ್ರಸಾದವನ್ನು ಪಡೆಯಬೇಕೆಂದು ವಾನರರೂಪವನ್ನು ಮರೆಸಿಕೊಂಡು ಸಂನ್ಯಾಸಿವೇಷದಿಂದ ಋಷ್ಯಮೂಕಪರ್ವತದಿಂದ ಇಲ್ಲಿಗೆ ಬಂದೆನು.

ಮುಂದುವರಿಯುವುದು...

# ಬಾಬಾ ಆಮಟೆರವರ 111ನೇ ವರ್ಷದ ಜನ್ಮಜಯಂತಿ



• ಉದಯವಾಹಿನಿ, ವಿಶೇಷ



ಕಲಾ ಸಾಹಿತ್ಯ
ಕೃಷ್ಣಪ್ಪ
ಲೇಖಕರು
ಪ್ರಗತಿ ಪರ ಚಿಂತಕ ಹಾಗೂ ವಿಮರ್ಶಕರು

ಡಾಟಟ ಬಾಬಾ ಅಮ್ಟೆರವರು 1914 ಡಿಸೆಂಬರ್ 26 ರಂದು ಮಹಾರಾಷ್ಟ್ರದಲ್ಲಿ ಜನಿಸಿದರು. ಜಗತ್ತಿನ ಹಾಗೂ ರಾಷ್ಟ್ರದಲ್ಲಿ ಕೆಲವರು ಸ್ವಾರ್ಥ ಮರೆತು ನಿಸ್ವಾರ್ಥ ಸೇವೆಯಿಂದ ಸಾಧನೆ ಮಾಡಿ ಸಾಧಿಸಿ ಇತಿಹಾಸ ಪುಟ ಸೇರುತ್ತಾರೆ. ಆ ರೀತಿ ಸೇರಿರುವ ಪೈಕಿ ಇವರೂ ಕೂಡ ಒಬ್ಬರಾಗಿರುತ್ತಾರೆ. ಬಾಬಾ ಆಮ್ಟೆಯವರಿಗೆ ಚಿಕ್ಕವಯಸ್ಸಿನಿಂದ ಉತ್ತಮ ಸಂಸ್ಕಾರ,ಶಿಕ್ಷಣ, ಶಿಸ್ತು,ಪ್ರೋತ್ಸಾಹ ಹಾಗೂ ಅವರ ಕಠಿಣ ಪರಿಶ್ರಮದಿಂದ ಕಾನೂನು ಪದವಿಯನ್ನುಗಳಿಸಿದರು.

ನಂತರ ಗಾಂಧೀಜಿ,ವಿನೋಬಾ ಭಾವೆ,ಟ್ಯಾಗೋರ್ ಇನ್ನೂ ಹಲವಾರು ಮಹನೀಯರ ಬದುಕು ಅವರಿಗೆ ಸ್ಫೂರ್ತಿದಾಯಕವಾಗಿ ದಾರಿದೀಪವಾಯಿತು. ಇದೆಂಥಾ ಮಾನವೀಯತೆ ತನ್ನ ಜೀವನದ ಬದುಕಿನುದ್ದಕ್ಕೂ ಪರರ ಚಿಂತನೆ ಮಾಡಿ ಪೂರ್ಣವಾಗಿ ಸಮರ್ಪಿಸಿಕೊಂಡು ಕುಷ್ಠರೋಗಿಗಳ ಹಾಗೂ ದೀನದಲಿತರ ಸೇವೆಗಾಗಿ ಮುಡುಪಾಗಿಟ್ಟು ಹಾಗೂ ಸಮಾಜದಲ್ಲಿ ಎದ್ದು ಕಾಣುತ್ತಿದ್ದ ಜಾತಿಪದ್ಧತಿ, ಮೇಲು-ಕೀಳು ಎಂಬ ತಾರತಮ್ಯ, ಶ್ರೀಮಂತರ ಶೋಷಣೆಗೆ ಗುರಿಯಾದ ಬಡಜನರ ಸೇವೆಗೆ ಮನ ತುಡಿಯುತಿತ್ತು. ಮುಂದೆ ಅವರು ಶಮಾಶ್ರಮ ಸ್ಥಾಪಿಸಿದರು,ಇದು ದುಡಿಮೆಯನ್ನು ಆದರಿಸಿದ ಸಾಮುದಾಯಕ ಬದುಕನ್ನು ನಡೆಸುವ ಪ್ರಯೋಗವಾಗಿತ್ತು. ಇನ್ನು ಮುಂದೆ ತಿಳಿಯುವುದಾದರೆ, ಆನಂದವನ ಎಂಬ ಸಂಸ್ಥೆ ಸ್ಥಾಪಿಸಿ ದೇಹದ ಕುಂದುಕೊರತೆ,ನೋವು, ನಿರಾಶೆ,ಅನಾಥ ಭಾವನೆ ಎಲ್ಲವನ್ನೂ ಮರೆಸಿ ರೋಗಿಗಳಿಗೆ ಆನಂದ ತರುವಂತಹ ತಾಣವಾಗಬೇಕು ಎಂದು ಅವರ ಉದ್ದೇಶವಾಗಿತ್ತು. ಮುಂದೆ ಅವರು ತಮ್ಮ ಕೆಲವು ಯೋಜನೆಗಳಿಗೆ ಮುಕ್ತಿಸದನ,ಸುಖಾಸನ ಹಾಗೂ ಸಂಧಿನಿಕೇತನ ಎಂಬ ಅನ್ವರ್ಥಕವಾದ ಹೆಸರುಗಳನ್ನು ಇಟ್ಟಿದ್ದರು. ಆನಂದವನದ ಆಸ್ಪತ್ರೆಯಲ್ಲಿ ಕುಷ್ಟ ರೋಗ ನಿವಾರಣೆಗಾಗಿ ಹೊಸ ಹೊಸ ಚಿಕಿತ್ಸಾ ವಿಧಾನಗಳನ್ನು ಅಳವಡಿಸಿ ಕೊಳ್ಳಲಾಯಿತು.ಕ್ರಮೇಣ ಪ್ರವಾಸಿ ತಾಣವಾಗಿ ಪ್ರಸಿದ್ಧವಾಯಿತು. ವಿದೇಶಿಯರು ಆನಂದವನವನ್ನು ಕಂಡು ಅಚ್ಚರಿಗೊಂಡು ಬಾಬಾರವರ ಕಾರ್ಯವನ್ನು ಮನಸಾರೆ ಹೊಗಳಿದರು. ಬಾಬಾರವರ ಆನಂದವನ ಎಂದರೆ ಮಾನವೀಯತೆಯ ಮಂಗಳಕರವಾದ ಒಂದು ತೀರ್ಥಕ್ಷೇತ್ರ ಎಂದು ಅಭಿಪ್ರಾಯಪಟ್ಟರು. ಬಾಬಾ ಅವರು ನಡೆಸಿದ ಮಾನವನ ಸೇವೆ, ಸಮಾಜಸೇವೆಗಾಗಿ ಅವರಿಗೆ ಹಲವಾರು ರಾಷ್ಟ್ರೀಯ ಹಾಗೂ ಅಂತರಾಷ್ಟ್ರೀಯ ಪ್ರಶಸ್ತಿಗಳು ಸಂದಿವೆ. ಅನೇಕ ವಿಶ್ವವಿದ್ಯಾಲಯಗಳು ಡಾಕ್ಟರೇಟ್ ಪದವಿ ನೀಡಿ ಗೌರವಿಸಿದೆ.ಬಹುಮಾನ ರೂಪವಾಗಿ ಬಂದ ದೊಡ್ಡ ಮೊತ್ತದ ಹಣವನ್ನು ಸಮಾಜ ಸೇವಾ ಕಾರ್ಯಗಳಿಗೆ ಬಳಸಿದರು.

ಅವರಿಗೆ ಪ್ರತಿಷ್ಠಿತ ಮ್ಯಾಗ್ಸೆಸೆ ಪ್ರಶಸ್ತಿ, ಪದ್ಮಶ್ರೀ,ಪದ್ಮವಿಭೂಷಣ ಹಾಗೂ ಗಾಂಧಿ ಶಾಂತಿ ಪುರಸ್ಕಾರ ಲಭಿಸಿದೆ. ಬಾಬಾ ಅವರು ಕುಷ್ಟರೋಗಿಗಳ ಹಾಗೂ ಸಮಾಜದಲ್ಲಿನ ದೀನ ದಲಿತರ ಏಳಿಗೆಗಾಗಿ ಹಲವಾರು ವಿಧಾಯಕ ಕಾರ್ಯಕ್ರಮಗಳನ್ನು ನಡೆಸುವುದರ ಮೂಲಕ ತಮ್ಮ ಬಾಳಿನ ಧನ್ಯತೆಯನ್ನು ಕಂಡುಕೊಂಡ ಮಹಾ ಪುರುಷರಾಗಿದ್ದಾರೆ.ಇವರ ಆದರ್ಶಗಳು ಸರ್ವಕಾಲಕ್ಕೂ ಸಮಾಜಕ್ಕೆ ದಾರಿದೀಪವಾಗಿವೆ.

ಬಾಬಾರವರು ತನ್ನ ವಯೋಸಹಜದಿಂದ ಫೆಬ್ರವರಿ 9, 2008 ರಂದು ತನ್ನ 94ನೇ ವಯಸ್ಸಿನಲ್ಲಿ ತೀರಿಕೊಂಡರು. ಇಂತಹ ಮಾನವೀಯತೆಯುಳ್ಳ ಸಾಕಾರಮೂರ್ತಿಯ 111 ನೇ ವರ್ಷದ ಜನ್ಮ ಜಯಂತಿಯ ದಿನವಾದ ಇಂದು ಅವರನ್ನ ಸ್ಮರಿಸಿ, ನೆನೆಯುತ್ತಾ ಅವರ ಸಾಧನೆ ಮತ್ತು ಸೇವಾ ಆದರ್ಶಗಳು, ಇಂದಿನ ಯುವ ಜನರಿಗೆ ಒಂದು ಸ್ಫೂರ್ತಿದಾಯಕ ದಾರಿದೀಪವಾಗಲಿವೆ.

### ಗ್ರಾಹಕರು ಯಾವುದೇ ವಸ್ತು ಖರೀದಿಸುವಾಗ ಹಾಗೂ ಸೇವೆ ಪಡೆಯುವಾಗ ಜಾಗೃತೆಯಿಂದ ವ್ಯವಹರಿಸಬೇಕು: ಮಾಲ್ದಾರ

# ಡಿಜಿಟಲ್ ನ್ಯಾಯದ ಮೂಲಕ ಪರಿಣಾಮಕಾರಿ ಮತ್ತು ತ್ವರಿತ ವಿಲೇವಾರಿಗೆ ಆದ್ಯತೆ

• **ಉದಯವಾಹಿನಿ ಗದಗ**

ಗ್ರಾಹಕರು ತಾವು ಖರೀದಿಸಿದ ಸಾಮಗ್ರಿ, ಗುಣಮಟ್ಟ ಅಥವಾ ಪ್ರಮಾಣದಲ್ಲಿ ವ್ಯತ್ಯಾಸ ಕಂಡುಬಂದಲ್ಲಿ ಆ ಸಂದರ್ಭದಲ್ಲಿ ಡಿಜಿಟಲ್ ನ್ಯಾಯದ ಆ್ಯಪ್‌ನ ಮೂಲಕ ಪ್ರಕರಣ ದಾಖಲಿಸಿ ತ್ವರಿತ ಹಾಗೂ ಪರಿಣಾಮಕಾರಿಯಾಗಿ ಪರಿಹಾರ ಕಂಡುಕೊಳ್ಳಬಹುದಾಗಿದೆ ಎಂದು ಜಿಲ್ಲಾ ಗ್ರಾಹಕರ ವ್ಯಾಜ್ಯಗಳ ಪರಿಹಾರ ಆಯೋಗದ ಅಧ್ಯಕ್ಷರು ಎ.ಜೆ. ಮಾಲ್ದಾರ ಉದ್ಘಾಟಿಸಿ ಮಾತನಾಡಿದರು.

**ರಾಷ್ಟ್ರೀಯ ಗ್ರಾಹಕರ ದಿನಾಚರಣೆ-2025**

ಗದಗ ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಆಹಾರ, ನಾಗರಿಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಇಲಾಖೆ, ಜಿಲ್ಲಾ ಗ್ರಾಹಕರ ವ್ಯಾಜ್ಯಗಳ ಪರಿಹಾರ ಆಯೋಗ, ಕಾನೂನು ಮಾಪನ ಶಾಸ್ತ್ರ ಇಲಾಖೆ, ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ, ಆಹಾರ ಸುರಕ್ಷತೆ ಮತ್ತು ಗುಣಮಟ್ಟ ಪ್ರಾಧಿಕಾರ, ವಾರ್ತಾ ಮತ್ತು ಸಾ.ಸಂ.ಇಲಾಖೆ ಹಾಗೂ ವಿ.ಆರ್.ಕುಷ್ಟಗಿ ಮೆಮೋರಿಯಲ್ ಕಾಲೇಜ್ ಆಫ್ ಕಾಮರ್ಸ, ಗದಗ-ಬೆಟಗೇರಿ ಇವರ ಸಂಯುಕ್ತಾಶ್ರಯದಲ್ಲಿ ಗದಗ-ಬೆಟಗೇರಿಯ ವಿ.ಆರ್.ಕುಷ್ಟಗಿ ಮೆಮೋರಿಯಲ್ ಕಾಲೇಜ್ ಆಫ್ ಕಾಮರ್ಸ ಆವರಣದ ಸುವರ್ಣ ಮಹೋತ್ಸವ ಭವನದಲ್ಲಿ ರಾಷ್ಟ್ರೀಯ ಗ್ರಾಹಕರ ದಿನಾಚರಣೆ- 2025 ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದರು.


ಉದಯವಾಹಿನಿ ಚಿತ್ರ

ಗ್ರಾಹಕರು ಯಾವುದೇ ವಸ್ತು ಖರೀದಿಸುವಾಗ ಹಾಗೂ ಸೇವೆ ಪಡೆಯುವಾಗ ಜಾಗೃತೆಯಿಂದ ವ್ಯವಹರಿಸಬೇಕು. ಅದರ ಗುಣಮಟ್ಟ, ಪ್ರಮಾಣ, ವ್ಯಾರಂಟಿ, ಅವಧಿ ಮುಕ್ತಾಯ ಪರಿಶೀಲನೆ ಅತ್ಯವಶ್ಯಕವಾಗಿದೆ. ಗ್ರಾಹಕರಿಗೆ ಅನ್ಯಾಯವಾದಲ್ಲಿ ಜಿಲ್ಲಾ ಗ್ರಾಹಕರ ವ್ಯಾಜ್ಯಗಳ ಪರಿಹಾರ ಆಯೋಗವನ್ನು ಸಂಪರ್ಕಿಸಿ ಪರಿಹಾರ ಕಂಡುಕೊಳ್ಳಬಹುದಾಗಿದೆ ಎಂದು ಹೇಳಿದರು.

ಜಿಲ್ಲಾ ಗ್ರಾಹಕರ ವ್ಯಾಜ್ಯಗಳ ಪರಿಹಾರ ಆಯೋಗದ ಮಹಿಳಾ ಸದಸ್ಯರಾದ ಶ್ರೀಮತಿ ಯಶೋಧಾ ಪಾಟೀಲ ಇವರು ಪ್ರಾಸ್ತಾವಿಕವಾಗಿ ಮಾತನಾಡಿ ಜಿಲ್ಲಾ ಗ್ರಾಹಕರ ವ್ಯಾಜ್ಯಗಳ ಪರಿಹಾರ ಆಯೋಗದಲ್ಲಿ ಗ್ರಾಹಕರುಗಳು ಅತಿವೇಗದಲ್ಲಿ ವ್ಯಾಜ್ಯಗಳನ್ನು ದಾಖಲಿಸಬಹುದು, ಹಾಗೂ ಸಂಬಂಧಿತ ವ್ಯಾಜ್ಯದ ಸಾಕ್ಷಿಗಳನ್ನು ಡಿಜಿಟಲ್ ನ್ಯಾಯದ ಆ್ಯಪ್‌ನಲ್ಲಿ ಸಲ್ಲಿಸಬಹುದಾಗಿದೆ, ತ್ವರಿತಗತಿಯಲ್ಲಿ ನ್ಯಾಯ ದೊರಕಿಸಿ ಕೊಡುವುದೇ ಇದರ ಮೂಲ ಉದ್ದೇಶವಾಗಿದೆ ಎಂದರು.

> **ಶೋಷಣೆ ತಡೆ, ಕಾಳಧನ, ಕಲಬೆರಕೆ, ಹೆಚ್ಚಿನ ಬೆಲೆ ವಸೂಲಿ ಅನ್ಯಾಯದ ವ್ಯಾಪಾರ ಪದ್ಧತಿಗಳಿಂದ ರಕ್ಷಿಸುವುದು. ನ್ಯಾಯ, ಗ್ರಾಹಕರ ಕುಂದುಕೊರತೆಗಳ ಪರಿಹಾರಕ್ಕಾಗಿ ಇರುವ ಆಯೋಗಗಳ ಜಿಲ್ಲಾ, ರಾಜ್ಯ, ಕೇಂದ್ರ ಮಟ್ಟದ ಬಗ್ಗೆ ಮಾಹಿತಿ ನೀಡುವುದು. ಕಾಯಿದೆಗಳ ಜಾರಿ,ಗ್ರಾಹಕ ಸಂರಕ್ಷಣಾ ಕಾಯಿದೆ, 2019 ರಂತಹ ಕಾನೂನುಗಳ ಅನ್ವಯದ ಕುರಿತು ತಿಳಿಸಿದರು.**
> -ಎಸ್.ಜಿ.ಪಲ್ಲೇದ

ಜಿಲ್ಲಾಧಿಕಾರಿಗಳ ಕಾನೂನು ಸಲಹೆಗಾರರಾದ ಎಸ್.ಜಿ.ಪಲ್ಲೇದ ಅವರು ಮಾತನಾಡಿ ಪ್ರತಿವರ್ಷ ಡಿ. 24 ರಂದು ರಾಷ್ಟ್ರೀಯ ಗ್ರಾಹಕರ ದಿನಾಚರಣೆ ಆಚರಣೆ ಮಾಡಲಾಗುತ್ತದೆ ಹಾಗೂ ಮಾರ್ಚ 15 ರಂದು ವಿಶ್ವ ಗ್ರಾಹಕರ ದಿನಾಚರಣೆಯನ್ನು ಆಚರಿಸಲಾಗುತ್ತದೆ.

> **ಗ್ರಾಹಕರಿಗೆ ಸಂಬಂಧಿತ ವ್ಯಾಜ್ಯಗಳನ್ನು ಪರಿಶೀಲಿಸಿ, ವಿಲೇವಾರಿ ಮಾಡುವ ಮೂಲಕ ನ್ಯಾಯ ಒದಗಿಸುವುದಾಗಿದೆ ಎಂದರು ಹಾಗೂ ಗ್ರಾಹಕರ ಬೇಡಿಕೆಗೆ ಅನುಗುಣವಾಗಿ ತಾವು ಖರೀದಿಸಿದ ವಸ್ತುಗಳ ಗುಣಮಟ್ಟವು ಕಳಪೆ ಎಂದು ಕಂಡುಬಂದರೆ ಬದಲಾದ ಆಯಾ ಕಾಲಘಟ್ಟದಲ್ಲಿ ಮೋಸವಾದ ಗ್ರಾಹಕರಿಗೆ ಇಂದು ಡಿಜಿಟಲ್ ನ್ಯಾಯದ ಮೂಲಕ ಪ್ರತಿಯೊಬ್ಬ ಗ್ರಾಹಕರು ಪರಿಣಾಮಕಾರಿಯಾಗಿ ಮತ್ತು ತ್ವರಿತ ಗತಿಯಲ್ಲಿ ಹಲವಾರು ತರಹದ ವ್ಯಾಜ್ಯಗಳನ್ನು ವಿಲೇವಾರಿ ಮಾಡುವ ಮೂಲಕ ಗ್ರಾಹಕರಿಗೆ ಸೇವೆ ಕೊಡುವುದಾಗಿದೆ ಎಂದರು. ಮಾರಾಟಗಾರರು ಒಂದು ವಸ್ತುವನ್ನು ಮಾರಾಟಮಾಡಬೇಕಾದರೆ ಗುಣಮಟ್ಟದ ವಸ್ತು ಹಾಗೂ ಸೇವೆಯನ್ನು ಒದಗಿಸುವ ಮೂಲಕ ಗ್ರಾಹಕರೊಂದಿಗೆ ನ್ಯಾಯಯುತವಾಗಿ ವ್ಯವಹರಿಸಬೇಕು ಎಂದು ಸೂಚನೆ ನೀಡಿದರು.** -ಶ್ರೀಮತಿ ಯಶೋಧಾ ಪಾಟೀಲ

ಭಾರತದಲ್ಲಿ ಗ್ರಾಹಕರ ದಿನಾಚರಣೆಯು 1986 ರಲ್ಲಿ ಜಾರಿಗೆ ಬಂದಿದೆ. ಸೆ.67 ರ ಪ್ರಕಾರ ಸುಪ್ರೀಮ್ ಕೋರ್ಟನ ಆದೇಶದಂತೆ ಗ್ರಾಹಕರ ಕುಂದುಕೊರತೆಗಳ ಪರಿಹಾರಕ್ಕಾಗಿ ಇರುವ ಗ್ರಾಹಕರ ವ್ಯಾಜ್ಯಗಳ ಪರಿಹಾರ ಆಯೋಗವು ಜಿಲ್ಲಾ, ರಾಜ್ಯ, ಕೇಂದ್ರ ಮಟ್ಟದಲ್ಲಿ ಕಾರ್ಯನಿರ್ವಹಿಸುತ್ತಿದೆ.

ಯಾವುದೇ ಒಂದು ವಸ್ತುವನ್ನು ಖರೀದಿಸಿದಾಗ ಆ ವ್ಯಕ್ತಿಯನ್ನು ಗ್ರಾಹಕರೆಂದು ಕರೆಯುತ್ತಾರೆ. ಗ್ರಾಹಕರಿಗೆ ತಾವು ಖರೀಸಿದ ಸಾಮಗ್ರಿ ಕುರಿತು ಮಾಹಿತಿ ಪಡೆಯುವ ಹಕ್ಕು, ಆಯ್ಕೆಯ ಹಕ್ಕು, ರಕ್ಷಣೆ ಪಡೆಯುವ ಹಕ್ಕು ಇತ್ಯಾದಿ ತಿಳಿಸುವದೇ ರಾಷ್ಟ್ರೀಯ ಗ್ರಾಹಕರ ದಿನಾಚರಣೆಯ ಉದ್ದೇಶವಾಗಿದೆ ಎಂದರು.

ಇದೇ ಸಂದರ್ಭದಲ್ಲಿ ಕಾನೂನು ಮಾಪನ ಶಾಸ್ತ್ರ ಇಲಾಖೆ ವತಿಯಿಂದ ತೂಕ ಮತ್ತು ಅಳತೆ ಹಾಗೂ **ಪೊಟ್ಟಣ ಸಾಮಗ್ರಿಗಳ ವಸ್ತು ಪ್ರದರ್ಶನ**; ಆಹಾರ ಸುರಕ್ಷತೆ ಮತ್ತು ಗುಣಮಟ್ಟ ಪ್ರಾಧಿಕಾರದವರ ವತಿಯಿಂದ ಆಹಾರ ಸುರಕ್ಷತೆ ಹಾಗೂ ಆಹಾರ ಕಲಬೆರಕೆ ಕುರಿತು ಭಿತ್ತಿ ಚಿತ್ರ ಪ್ರದರ್ಶನ; ಜಿಲ್ಲೆಯ ಗ್ಯಾಸ್ ಏಜೆನ್ಸಿಯವರ ವತಿಯಿಂದ ಎಲ್ ಪಿ ಜಿ ಸುರಕ್ಷತೆ ಕುರಿತು ಡೆಮೋನಸ್ಟ್ರೇಶನ್ ಪ್ರಾತ್ಯಕ್ಷತೆ ಮತ್ತು ಭಿತ್ತಿ ಚಿತ್ರಗಳ ಪ್ರದರ್ಶನ ಹಮ್ಮಿಕೊಳ್ಳಾಗಿತ್ತು.

ಆದರ್ಶ ಶಿಕ್ಷಣ ಸಮಿತಿ ಅಧ್ಯಕ್ಷ ಕೆ.ವಿ.ಕುಷ್ಟಗಿ, ಆದರ್ಶ ಶಿಕ್ಷಣ ಸಮಿತಿ ಚೇರ್ಮನ್ ಹಿರಿಯ ಲೆಕ್ಕ ಪರಿಶೋಧಕ ಎ.ಎಲ್.ಪೊತ್ನೀಸ್, ಆದರ್ಶ ಶಿಕ್ಷಣ ಸಮಿತಿಯ ಕಾರ್ಯದರ್ಶಿ ಎ.ಡಿ.ಗೋಡಖಿಂಡಿ, ವಿ.ಆರ್.ಕುಷ್ಟಗಿ ಮೆಮೋರಿಯಲ್ ಕಾಲೇಜ್ ಆಫ್ ಕಾಮರ್ಸ ದ ಪ್ರಾಂಶುಪಾಲರಾದ ಡಾ.ವಿ.ಟಿ.ನಾಯ್ಕರ್, ಉಪಸ್ಥಿತರಿದ್ದರು.

## ಮಿನಿ ನ್ಯೂಸ್

### ಅಪರಾಧ ತಡೆ ಮಾಸಾಚರಣೆ: ಸಾರ್ವಜನಿಕರಿಗೆ ತಿಳುವಳಿಕೆ


ಉದಯವಾಹಿನಿ ಚಿತ್ರ

• **ಉದಯವಾಹಿನಿ ಬಸವನಬಾಗೇವಾಡಿ**

ಜಿಲ್ಲಾ ಪೊಲೀಸ್,ಬಸವನಬಾಗೇವಾಡಿ ಉಪ ವಿಭಾಗ ಹಾಗೂ ಪಟ್ಟಣದ ಪೊಲೀಸ್ ಠಾಣೆ ವತಿಯಿಂದ ಪಟ್ಟಣದ ಆಟೋ ನಿಲ್ದಾಣದಲ್ಲಿ ಆಟೋ ಚಾಲಕರಿಗೆ ಹಾಗೂ ಕೆ.ಎಸ್.ಆರ್. ಟಿ. ಸಿ. ಬಸ್ ನಿಲ್ದಾಣದ ಅವರಣದಲ್ಲಿ ಬಸ್ ಚಾಲಕ ಹಾಗೂ ನಿರ್ವಾಹಕರಿಗೆ ಹಾಗೂ ಪಟ್ಟಣದ ಚನ್ನಮ್ಮ ವೃತ್ತ ದಲ್ಲಿ ಸಾರ್ವಜನಿಕರಿಗೆ ಅಪರಾಧ ತಡೆ ಮಾಸಾಚರಣೆ ಅಡಿಯಲ್ಲಿ ರಸ್ತೆ ಸುರಕ್ಷತೆಯ ಬಗ್ಗೆ, ಅಪರಾಧ ತಡೆ ಹಾಗೂ ಮುನ್ನೆಚ್ಚರಿಕೆ ಕ್ರಮದ ಬಗ್ಗೆ, ಹಾಗೂ ಕಾನೂನು ವ್ಯವಸ್ಥೆಯ ಬಗ್ಗೆ ತಿಳುವಳಿಕೆ ನೀಡುವುದರೊಂದಿಗೆ ಮಹಿಳಾ ಸಹಾಯವಾಣಿ 1091 ಮಕ್ಕಳ ಸಹಾಯವಾಣಿ - 1098 ತುರ್ತು ಸಹಾಯವಾಣಿ - 112 ಕರೆ ಮಾಡಿದರೆ ತುರ್ತು ಸೇವೆ ಒದಗಿಸಲು ಹಾಗೂ ಮುಂಜಾಗ್ರತ ಕ್ರಮ ವಹಿಸಲು ಸಹಾಯವಾಗುತ್ತದೆ ಎಂಬುದನ್ನು ತಿಳುವಳಿಕೆ ಈ ಕೆಳಗಿನ ಸಹಾಯವಾಣಿಗಳ ಮುಖಾಂತರ ನೀಡಲಾಯಿತು.

### ವಿಕಲಚೇತನ ಮಕ್ಕಳ ಮೇಲೆ ರಾಕ್ಷಸ ಪ್ರವೃತ್ತಿಯಿಂದ ದೌರ್ಜನ್ಯ

• **ಉದಯವಾಹಿನಿ ಬಸವನಬಾಗೇವಾಡಿ**

ಬಾಗಲಕೋಟೆ ನಗರದ ನವನಗರ ಶೆಟ್ಟರ್ ನಂಬರ್ 54 ದಲ್ಲಿರುವ ದಿವ್ಯ ಜ್ಯೋತಿ ಅಂದ ಮಕ್ಕಳ ಶಾಲೆಯಲ್ಲಿ ಬುದ್ಧಿಮಾಂದ್ಯ ವಿಕಲಚೇತನರ ಮಕ್ಕಳಿಗೆ ರಾಕ್ಷಸಿಯಂತೆ ವರ್ತಿಸಿ ಹೊಡೆದಿರುವುದರಿಂದ ಸಂಸ್ಥೆ ವಿರುದ್ಧ ಸಿಬ್ಬಂದಿಗಳ ಮೇಲೆ ಕಾನೂನು ಕ್ರಮ ಜರುಗಿಸಬೇಕೆಂದು ಬಸವನ ಬಾಗೇವಾಡಿ ತಾಲ್ಲೂಕು ವಿಕಲಚೇತನರ ಸಂಘದ ಹಾಗೂ ವಿಕಲಚೇತನ ರಾಜ್ಯ ಒಕ್ಕೂಟದ ವತಿಯಿಂದ ಖಂಡಿಸಿ ಬಾಗಲಕೋಟೆ ನಗರದ ನವನಗರ ಸೆಕ್ಟರ್ 54ರ ರಲ್ಲಿರುವ ದಿವ್ಯ ಜ್ಯೋತಿ ಬುದ್ಧಿಮಾಂದ್ಯ ವಿಕಲಚೇತನ ಮಕ್ಕಳಿಗೆ ಹಿಗ್ಗಾಮುಗ್ಗ ಹೊಡೆದ ಸಂಸ್ಥೆಯ ವಿರುದ್ಧ ಹಾಗೂ ಸಿಬ್ಬಂದಿ ವಿರುದ್ಧ ಕಾನೂನಿನ ಕ್ರಮ ಕೊಳ್ಳಬೇಕೆಂದು ಅಲ್ಲದೆ ಆ ಸಂಸ್ಥೆಯನ್ನು ರದ್ದುಪಡಿಸಬೇಕೆಂದು ಆಗ್ರಹಿಸಿ ಮನವಿ ಪತ್ರವನ್ನು ತಾಲ್ಲೂಕಿನ ದಂಡಾಧಿಕಾರಿಗಳ ಮುಖಾಂತರ ಸರಕಾರಕ್ಕೆ ಸಲ್ಲಿಸಲಾಯಿತು.

### ಬಸ್ ಸಂಚಾರ ಹೆಚ್ಚಿಸಲು ಸೂಚನೆ

• **ಉದಯವಾಹಿನಿ ಬಾಗಲಕೋಟೆ**

ಪ್ರಯಾಣಿಕರ ಬೇಡಿಕೆ ಆಧರಿಸಿ ಹೆಚ್ಚುವರಿ ಬಸ್ ಸಂಚಾರ ಆರಂಭಿಸಬೇಕು ಎಂದು ಜಿಲ್ಲಾ ಸಂಚಾರಿ ನಿಯಂತ್ರಕರಿಗೆ ಗ್ಯಾರಂಟಿ ಯೋಜನೆಗಳ ಅನುಷ್ಠಾಣ ಸಮಿತಿ ಜಿಲ್ಲಾ ಅಧ್ಯಕ್ಷ ಅನೀಲಕುಮಾರ ದಡ್ಡಿ ಹೇಳಿದರು.

ಜಿಲ್ಲಾ ಪಂಚಾಯಿತಿ ಸ್ಥಾಯಿ ಸಮಿತಿ ಸಭಾಂಗಣದಲ್ಲಿ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿಯಿಂದ ನಡೆದ ಗ್ಯಾರಂಟಿ ಯೋಜನೆಗಳ ಪ್ರಗತಿ ಪರಿಶೀಲನಾ ಸಭೆಯಲ್ಲಿ ಮಾತನಾಡಿದ ಅವರು, ಕಳೆದ ಸಭೆಯಲ್ಲಿ ಸೂಚಿಸಿದಂತೆ ಈಗಾಗಲೇ 19 ಟ್ರಿಪ್‌ಗಳನ್ನು ಹೆಚ್ಚಿಗೆ ಮಾಡಲಾಗಿದೆ ಎಂದು ಅಧಿಕಾರಿಗಳು ತಿಳಿಸಿದರು.

ಬಸ್ ನಿಲ್ದಾಣಗಳಲ್ಲಿ ಸ್ವಚ್ಛತೆಗೆ ಹೆಚ್ಚಿನ ಒತ್ತು ನೀಡಬೇಕು. ಶೌಚಾಲಯಗಳು ಸುಸ್ಥಿತಿಯಲ್ಲಿ ಇಡಬೇಕು. ಸಮಸ್ಯೆಗಳಿಗೆ ಪರಿಹಾರ ಕಂಡುಕೊಂಡಳ್ಳಲು ಬಸ್ ಚಾಲಕ, ನಿರ್ವಾಹಕರು ಹಾಗೂ ಸಾರ್ವಜನಿಕರ ನಡುವೆ ಕಾರ್ಯಾಗಾರ ನಡೆಸುವ ಅಗತ್ಯವಿದ್ದು, ಕಾರ್ಯಾಗಾರ ಆಯೋಸುವಂತೆ ಸೂಚಿಸಿದರು. ಜಿಲ್ಲೆಯಲ್ಲಿ 4,37,585 ಭಾಗ್ಯಜ್ಯೋತಿ, ಕುಟೀರ ಜ್ಯೋತಿ ಹಾಗೂ ಗೃಹಬಳಕೆದಾರರಿದ್ದು, 4.29,605 ಗೃಹ ಬಳಕೆದಾರರು ಗೃಹಜ್ಯೋತಿಯಡಿ ನೋಂದಣಿ ಮಾಡಿಕೊಂಡಿದ್ದಾರೆ. 7,980 ಗೃಹ ಬಳಕೆದಾರರ ನೋಂದಣಿ ಕಾರ್ಯ ಪ್ರಗತಿಯಲ್ಲಿದೆ. ಸರ್ಕಾರಿ ಶಾಲೆಗಳೂ ಗೃಹಜ್ಯೋತಿ ಅಡಿಗೆ ಬರುತ್ತಿದ್ದು, ಶಾಲೆಯ ಯುಡೈಸ್ ನಂಬರ್ ನೋಂದಾಯಿಸಿ, ಆ ಶಾಲೆಯ ಮುಖ್ಯ ಶಿಕ್ಷಕರ ಮೊಬೈಲ್‌ಗೆ ಒಟಿಪಿ ಪಡೆದು ಉಚಿತ ವಿದ್ಯುತ್ ಪಡೆಯಬಹುದಾಗಿದೆ ಎಂದು ಹೆಸ್ಕಾಂ ಅಧಿಕಾರಿ ಸಭೆಗೆ ತಿಳಿಸಿದರು. ಗೃಹಲಕ್ಷ್ಮೀ ಯೋಜನೆಯಡಿ 4,24,733 ಫಲಾನುಭವಿಗಳು ಲಾಭ ಪಡೆದುಕೊಳ್ಳುತ್ತಿದ್ದಾರೆ. ಅನ್ನಭಾಗ್ಯ ಯೋಜನೆಯಡಿ ಜಿಲ್ಲೆಯಲ್ಲಿ 15,25,803 ಫಲಾನುಭವಿಗಳು ಸದುಪಯೋಗ ಪಡೆದುಕೊಳ್ಳುತ್ತಿದ್ದಾರೆ. ಜೂನ್ ತಿಂಗಳಿನಿಂದ ಸೆಪ್ಟೆಂಬರ್‌ವರೆಗೆ ಅಕ್ಕಿಯ ಜೊತೆಗೆ ಜೋಳ ಸಹ ವಿತರಣೆ ಮಾಡಲಾಗಿದೆ ಎಂದು ಆಹಾರ ಇಲಾಖೆ ಜಂಟಿ ನಿರ್ದೇಶಕ ಶ್ರೀಶೈಲ ಕಂಕಣವಾಡಿ ಮಾಹಿತಿ ನೀಡಿದರು.

## 100 ವರ್ಷಗಳ ಇತಿಹಾಸವುಳ್ಳ: ಹಜರತ್ ಖಾಜಾ ಗರೀಬ್ ನವಾಜ್ 152ನೇ ಉರುಸ್ ಕುಪನೂರನಲ್ಲಿ ಇಂದು

• **ಉದಯವಾಹಿನಿ ಚಿಂಚೋಳಿ**

ತಾಲ್ಲೂಕಿನ ಕುಪನೂರ ಗ್ರಾಮದ ಹಜರತ್ ಖಾಜಾ ಗರೀಬ್ ನವಾಜ್ 152ನೇಯ ಉರುಸ್ ಇಂದು ಡಿ.26 ರಂದು ಅದ್ದೂರಿಯಾಗಿ ನಡೆಯಲಿದೆ ಎಂದು ದರ್ಗಾ ಕಮೀಟಿಯ ಅಧ್ಯಕ್ಷ ಅಹೇಮದ್ ಪಟೇಲ ಹಾಗೂ ಜಗದೇವಯ್ಯಸ್ವಾಮಿ ತಿಳಿಸಿದ್ದಾರೆ.

ಸುಮಾರು ನೂರಾರು ವರ್ಷಗಳ ಇತಿಹಾಸವುಳ್ಳ ಕುಪನೂರ ಗ್ರಾಮದ ಖಾಜಾ ಗರೀಬ್ ನವಾಜ್ ದರ್ಗಾದ ಉರುಸ್ ಸುಮಾರು 152 ವರ್ಷಗಳಿಂದ ಆಚರಣೆ ಮಾಡಿಕೊಂಡು ಬರುತ್ತಿದ್ದು ಸುಮಾರು ನಾಲ್ಕೈದು ತಲೆಮಾರಿಗಳಿಂದ ಈ ಉರುಸ್ ಹಮ್ಮಿಕೊಂಡು ಬರುತ್ತಿದ್ದಾರೆ.

ಮೊದಲಿಗೆ ಸುಮಾರು 152 ವರ್ಷಗಳ ಹಿಂದೆ ಕುಪನೂರ ಗ್ರಾಮದ ಇಮಾಮ್ ಸಾಬ್ ಸಾಹೇಬ್ ಖಾಜಾ ಗರೀಬ್ ನವಾಜ್ ದರ್ಗಾ ಪ್ರತಿಷ್ಠಾಪನೆ ಮಾಡಿ ಉರುಸ್ ಕಾರ್ಯಕ್ರಮ ಪ್ರಾರಂಭಿಸಿದರು. ನಂತರ ಫಕೀರ್ ಸಾಬ ಸಾಹೇಬ್,ಘುಡುಸಾಬ್ ಸಾಹೇಬ್,ನೀಜಾಮೋದ್ದಿನ್ ಸಾಹೇಬ್,ಅವರು ಪ್ರತಿವರ್ಷಉರುಸ್ ಆಚರಿಸಿಕೊಂಡು ಬರುತ್ತಿದ್ದರೂ 4 ತಲೆಮಾರು ಹೋದನಂತರ ಈಗ ಇಮಾಮ್ ಸಾಹೇಬ್ ಉರುಸ್ ಆಚರಣೆ ಮಾಡಿಕೊಂಡು ಹೋಗುತ್ತಿದ್ದಾರೆ. ಇಂದು ಡಿ.26 ರಂದು ಶುಕ್ರವಾರ ಸಂಜೆ ಇಮಾಮ್ ಸಾಬ್ ಹಳೆ ನಿವಾಸದಿಂದ


ಉದಯವಾಹಿನಿ ಚಿತ್ರ

ಗಂಧ ತರುವುದರೊಂದಿಗೆ ಉರುಸ್‌ಗೆ ಚಾಲನೆ ದೊರೆಯಲಿದೆ, ಗಂಧದ ಮೆರವಣಿಗೆಯು ಇಮಾಮ್ ಸಾಬ್ ಹಳೆ ಮನೆಯಿಂದ ಪ್ರಮುಖ ಬಿದಿಯಿಂದ ಖಾಜಾ ಗರೀಬ್ ನವಾಜ್ ದರ್ಗಾಕ್ಕೆ ತಲುಪುತ್ತದೆ ನಂತರ ವಿಧಿ ವಿಧಾನ ಪ್ರಕಾರ ದರ್ಗಾಕ್ಕೆ ಗಂಧದ ಲೇಪನ ಮಾಡಿ ವಿಶೇಷ ಪ್ರಾರ್ಥನೆ ಮಾಡಿ ಗಂಧದ ಕಾರ್ಯಕ್ರಮ ಮುಕ್ತಯಗೊಳ್ಳುತ್ತದೆ. ಉರುಸ್ ಕಾರ್ಯಕ್ರಮವು ಅಪಾರ ಸಂಖ್ಯೆಯ ಭಕ್ತರ ಮಧ್ಯೆ ವೈಭವದಿಂದ ನಡೆಯುತ್ತದೆ.

ವಾದ್ಯಮೇಳಗಳೊಂದಿಗೆ ಅನೇಕ ಭಕ್ತರು ತೆರಳಿ,ಪೂಜೆ ಹಾಗೂ ಹರಕೆ ಸಲ್ಲಿಸುತ್ತಾರೆ,ಅನೇಕರು ದೀಡ್ ನಮಸ್ಕಾರ ಹಾಕುತ್ತಾರೆ,ರಾತ್ರಿ ಖವಾಲಿ ಕಾರ್ಯಕ್ರಮ ಮತ್ತು ಮಿಲಾದ್ ಕಾರ್ಯಕ್ರಮ

> **ಚಿಂಚೋಳಿ ತಾಲ್ಲೂಕಿನ ಕುಪನೂರ ಎಂಬ ಚಿಕ್ಕ ಗ್ರಾಮದಲ್ಲಿ ಸುಮಾರು 152 ವರ್ಷಗಳಿಂದ ಖಾಜಾ ಗರೀಬ್ ನವಾಜ್ ಉರುಸ್ ಆಚರಣೆ ಮಾಡಿಕೊಂಡು ಬರುತ್ತಿದ್ದು ಈ ವರ್ಷವು ಕೂಡ ಅತ್ಯಂತ ಅದ್ದೂರಿಯಾಗಿ ಉರುಸ್ ಆಚರಣೆ ಮಾಡಲಾಗುತ್ತಿದೆ,ಪ್ರತಿ ತಿಂಗಳು ಇಸ್ಲಾಮಿಕ್ 6ನೇ ತಾರೀಖು ದರ್ಗಾದಲ್ಲಿ ವಿಶೇಷ ಪ್ರಾರ್ಥನೆ ಮಾಡಲಾಗುತ್ತದೆ.**
> 
> **- ಇಮಾಮ್ ಸಾಹೇಬ್ ಹಾಲವಾಲೆ ಕುಪನೂರ.**

ನಡೆಯಲಿದೆ, ಡಿ.27 ರಂದು ಮಹೀಫಿಲೆ ಚಿರಾಗ್ ಕಾರ್ಯಕ್ರಮ ನಡೆಯಲಿದೆ,ನಂತರ ಪ್ರಸಾದ ವ್ಯವಸ್ಥೆ ಮಾಡಲಾಗುತ್ತದೆ, ಸುತ್ತಮುತ್ತಲಿನ ಗ್ರಾಮಗಳ ಭಕ್ತರು ಉರುಸ್ ಕಾರ್ಯಕ್ರಮಕ್ಕೆ ಆಗಮಿಸಿ ದರ್ಶನ ಪಡೆದು ಪುನಿತರಾಗಬೇಕು ಎಂದು ಇಮಾಮ್ ಸಾಹೇಬ್ ತಿಳಿಸಿದ್ದಾರೆ.

## ಗ್ರಾಮೀಣ ಮಕ್ಕಳಿಗೆ ಗುಣಮಟ್ಟದ ಶಿಕ್ಷಣ ಒದಗಿಸಲು ಸಂಕಲ್ಪ

• **ಉದಯವಾಹಿನಿ ವಿಜಯಪುರ**

ಶಾಲೆಗಳಲ್ಲಿ ಅಭಿವೃದ್ಧಿ ಕೆಲಸಗಳನ್ನು ಮುಂದುವರೆಸುವುದರ ಮೂಲಕ ಗ್ರಾಮೀಣ ಮಕ್ಕಳಿಗೆ ಗುಣಮಟ್ಟದ ಶಿಕ್ಷಣ ಒದಗಿಸಲು ಅಚಲ ಸಂಕಲ್ಪ ಹೊಂದಿರುವುದಾಗಿ ಕೈಗಾರಿಕೆ, ಮೂಲಸೌಲಭ್ಯ ಅಭಿವೃದ್ಧಿ ಹಾಗೂ ಜಿಲ್ಲಾ ಉಸ್ತುವಾರಿ ಸಚಿವ ಎಂ. ಬಿ. ಪಾಟೀಲ ಹೇಳಿದ್ದಾರೆ. ತಿಕೋಟಾ ತಾಲ್ಲೂಕಿನ ಅರಕೇರಿ ಗ್ರಾಮದ ಮೋಹಿತೆ ವಸ್ತಿ ಮತ್ತು ಅರಕೇರಿ ಗ್ರಾಮದಲ್ಲಿ ನಡೆದ ಎರಡು ಪ್ರತ್ಯೇಕ ಕಾರ್ಯಕ್ರಮಗಳಲ್ಲಿ ನಾನಾ ಅಭಿವೃದ್ಧಿ ಕಾಮಗಾರಿಗಳನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಮೋಹಿತೆ ವಸ್ತಿಯಲ್ಲಿ ಕೆ.ಎಸ್.ಐ.ಐ.ಡಿ.ಸಿ ವತಿಯಿಂದ ಸಿ.ಎಸ್.ಆರ್ ಅನುದಾನದಲ್ಲಿ ಪ್ರಾಥಮಿಕ ಶಾಲೆಯಲ್ಲಿ ನೂತನವಾಗಿ ನಿರ್ಮಿಸಲಾಗಿರುವ ಕೊಠಡಿಗಳನ್ನು ಉದ್ಘಾಟಿಸಿ ಮಾತನಾಡಿದ ಅವರು, ಸಿ.ಎಸ್.ಆರ್ ಅನುದಾನದಲ್ಲಿ ಸರಕಾರಿ ಶಾಲೆಗಳಲ್ಲಿ ನೂತನ ಕೊಠಡಿಗಳ ನಿರ್ಮಾಣ ಹಾಗೂ ದುರಸ್ಥಿ ಕಾರ್ಯಗಳನ್ನು ಕೈಗೊಳ್ಳಲಾಗುತ್ತಿದೆ.

ಈ ಮೂಲಕ ಮಹಾನಗರಗಳ ಕಾನ್ವೆಂಟ್ ಶಾಲೆಗಳಲ್ಲಿರುವ ಮಾದರಿಯ ಸೌಲಭ್ಯಗಳನ್ನು ಒದಗಿಸಲಾಗುತ್ತಿದೆ ಎಂದು ಹೇಳಿದರು. ಅರಕೇರಿಯಲ್ಲಿ ಕೆ.ಆರ್.ಐ.ಡಿ.ಎಲ್ ವತಿಯಿಂದ ಟಿ.ಎಸ್.ಇ ಯೋಜನೆಯಡಿ ನಿರ್ಮಿಸಿರುವ ನೂತನ ಸಮುದಾಯ ಭವನ ಕಟ್ಟಡ ಉದ್ಘಾಟಿಸಿ


ಉದಯವಾಹಿನಿ ಚಿತ್ರ

ಮಾತನಾಡಿದ ಅವರು, ಸಮುದಾಯ ಭವನಗಳು ಗ್ರಾಮದ ಸಾಮಾಜಿಕ, ಸಾಂಸ್ಕೃತಿಕ ಹಾಗೂ ಸಾರ್ವಜನಿಕ ಚಟುವಟಿಕೆಗಳನ್ನು ನಡೆಸಲು ಅನುಕೂಲವಾಗುತ್ತವೆ. ಅಲ್ಲದೇ, ಸಮುದಾಯದ ಏಕತೆಯನ್ನು ಮತ್ತಷ್ಟು ಬಲಪಡಿಸುತ್ತವೆ ಎಂದು ಹೇಳಿದರು.

ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಸಿದ್ದು ಗೌಡನವರ, ಮುಖಂಡರಾದ ಸಿದ್ದಣ್ಣ ಸಕ್ರಿ, ಅರ್ಜುನ ರಾಠೋಡ, ಚನ್ನಪ್ಪ ದಳವಾಯಿ, ಪೀರಪಟೇಲ ಪಾಟೀಲ, ಡಿ.ಎಲ್. ಚವ್ಹಾಣ, ಅಶೋಕ ದಳವಾಯಿ, ಎಸ್.ಎಚ್.ನಾಡಗೌಡ, ಸುನಂದಾ ಬರಕಡೆ, ನಿಂಗು ಬೆಳ್ಳುಬ್ಬಿ, ಶಿವಾನಂದ ಇಂಚಗೇರಿ, ಸುರೇಶ ಬಂಡಾರಿ, ಉಪಸ್ಥಿತರಿದ್ದರು.

## ದ್ವೇಷ ಭಾಷಣ ತಡೆ ಮಸೂದೆಗೆ ವಿರೋಧ


ಉದಯವಾಹಿನಿ ಚಿತ್ರ

• **ಉದಯವಾಹಿನಿ ಬೆಳಗಾವಿ**

ಕರ್ನಾಟಕದಲ್ಲಿ ರಾಜ್ಯ ಸರ್ಕಾರ ಜಾರಿಗೆ ತರುತ್ತಿರುವ ದ್ವೇಷ ಭಾಷಣ ಮತ್ತು ದ್ವೇಷ ಅಪರಾಧ ತಡೆ ಮಸೂದೆ ವಿರೋಧಿಸಿ, ನಗರದಲ್ಲಿ ಬಿಜೆಪಿ ಕಾರ್ಯಕರ್ತರು ಪ್ರತಿಭಟನೆ ನಡೆಸಿದರು.

ಇಲ್ಲಿನ ರಾಣಿ ಚನ್ನಮ್ಮನ ವೃತ್ತದಿಂದ ಜಿಲ್ಲಾಧಿಕಾರಿ ಕಚೇರಿಯ ವರೆಗೆ ಮೆರವಣಿಗೆ ನಡೆಸಿದ ಪ್ರತಿಭಟನಕಾರರು, ಈ ಮಸೂದೆ ಹಿಂದಕ್ಕೆ ಪಡೆಯಬೇಕು ಎಂದು ಆಗ್ರಹಿಸಿ ಜಿಲ್ಲಾಡಳಿತ ಮೂಲಕ ಸರ್ಕಾರಕ್ಕೆ ಮನವಿ ರವಾನಿಸಿದರು.

ಈ ಮಸೂದೆ ವಾಕ್ ಮತ್ತು ಅಭಿವ್ಯಕ್ತಿ ಸ್ವಾತಂತ್ರ್ಯದ ಉಲ್ಲಂಘನೆಯಾಗಿದೆ. ಇದು ಸರ್ಕಾರದ ವಿರುದ್ಧ ಮಾತನಾಡುವವರ ಬಾಯಿ ಮುಚ್ಚಿಸುವ ತಂತ್ರವಾಗಿದ್ದು, ಸಂವಿಧಾನ ನೀಡಿದ ಸ್ವಾತಂತ್ರ್ಯವನ್ನು ಕಾಂಗ್ರೆಸ್ ಸರ್ಕಾರ ಕಿತ್ತುಕೊಳ್ಳುತ್ತಿದೆ. ಪ್ರಜಾಪ್ರಭುತ್ವದ ಕತ್ತು ಹಿಸುಕುವ ಯತ್ನವೂ ಇದಾಗಿದೆ ಎಂದು ಆರೋಪಿಸಿದರು. ದ್ವೇಷ ಭಾಷಣಕ್ಕೆ ಸರ್ಕಾರ ನೀಡಿದ ವ್ಯಾಖ್ಯಾನ ಅಸ್ಪಷ್ಟವಾಗಿದೆ. ಸರ್ಕಾರದ ಜನವಿರೋಧಿ ನೀತಿಗಳನ್ನು ಟೀಕಿಸುವುದು. ಸಾಮಾಜಿಕವಾಗಿ ಚರ್ಚಿಸುವುದನ್ನು ದ್ವೇಷ ಎಂದು ಪರಿಗಣಿಸುವ ಅಪಾಯವಿದೆ. ವಿರೋಧ ಪಕ್ಷದವರಷ್ಟೇ ಅಲ್ಲ; ಜನಸಾಮಾನ್ಯರನ್ನೂ ಅಪರಾಧಿಗಳಾಗಿ ನೋಡುವ ಈ ಕಾಯ್ದೆ ನಮಗೆ ಬೇಕೇ? ಎಂದು ಪ್ರಶ್ನಿಸಿದರು.

ಮಾಜಿ ಶಾಸಕ ಸಂಜಯ ಪಾಟೀಲ, ಭ್ರಷ್ಟಾಚಾರದಲ್ಲಿ ಮುಳುಗಿದ ರಾಜ್ಯ ಸರ್ಕಾರದ ಅಧಿಕಾರವಧಿಯಲ್ಲಿ ಅನೇಕ ಹಗರಣ ನಡೆದಿವೆ. ಮಹಿಳೆಯರ ಮೇಲೆ ದೌರ್ಜನ್ಯ ನಡೆಯುತ್ತಿವೆ. ಅಭಿವೃದ್ಧಿ ಬದಲಿಗೆ ಮುಖ್ಯಮಂತ್ರಿ ಸ್ಥಾನಕ್ಕಾಗಿ ಕಿತ್ತಾಟವನ್ನೇ ನೋಡುವಂತಾಗಿದೆ. ಸಂವಿಧಾನ ನೀಡಿರುವ ಅಭಿವ್ಯಕ್ತಿ ಸ್ವಾತಂತ್ರ್ಯಕ್ಕಾಗಿ ಕಡಿವಾಣ ಹಾಕಲು ತಂದಿರುವ ಈ ಮಸೂದೆ ವಿರೋಧಿಸಿ ಪ್ರತಿಭಟಿಸುತ್ತಿದ್ದೇವೆ' ಎಂದರು.

## ಕಾಂಪೋಸ್ಟ್ ಕಲ್ಚರ್ ಬಳಕೆಯಿಂದ ಅಡಿಕೆ ಸಿಪ್ಪೆ ಮೌಲ್ಯಯುತ ಸಾವಯವ ಗೊಬ್ಬರವಾಗಿ ಮಾರ್ಪಾಡು: ರಜನೀಕಾಂತ

• **ಉದಯವಾಹಿನಿ ಚಿತ್ರದುರ್ಗ**

ಸೂಕ್ಷ್ಮಜೀವಾಣುಗಳಿರುವ ಕಾಂಪೋಸ್ಟ್ ಕಲ್ಚರ್ ಬಳಸಿ ಮೌಲ್ಯಯುತ ಸಾವಯವ ಗೊಬ್ಬರವಾಗಿ ಪರಿವರ್ತಿಸಬಹುದಾಗಿದೆ ಎಂದು ಜಿಲ್ಲಾ ಕೃಷಿ ತರಬೇತಿ ಕೇಂದ್ರದ ಸಹಾಯಕ ಕೃಷಿ ನಿರ್ದೇಶಕ ರಜನೀಕಾಂತ.ಆರ್ ಹೇಳಿದರು. ಭರಮಸಾಗರದ ಕೃಷಿ ಉತ್ಪನ್ನ ಮಾರುಕಟ್ಟೆ ಆವರಣದಲ್ಲಿ ರಾಷ್ಟ್ರೀಯ ರೈತರ ದಿನಾಚರಣೆ ಅಂಗವಾಗಿ ಜಿಲ್ಲಾ ಕೃಷಿ ತರಬೇತಿ ಕೇಂದ್ರ ಬಬ್ಬೂರು ವತಿಯಿಂದ ಆಯೋಜಿಸಲಾದ ಕೃಷಿಯಲ್ಲಿ ಜೈವಿಕ ಗೊಬ್ಬರ, ಜೈವಿಕ ಪೀಡೆನಾಶಕಗಳ ಬಳಕೆ ಮತ್ತು ಅಡಿಕೆ ಸಿಪ್ಪೆ ಕಾಂಪೋಸ್ಟಿಂಗ್ ಕುರಿತ ಹೊರಾಂಗಣ ತರಬೇತಿ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು.

ಜಿಲ್ಲೆಯಲ್ಲಿ ಅಡಿಕೆ ಬೆಳೆಯು ಪ್ರಮುಖ ತೋಟಗಾರಿಕಾ ವಾಣಿಜ್ಯ ಬೆಳೆಯಾಗಿದ್ದು, ಕಳೆದ 10 ವರ್ಷಗಳಲ್ಲಿ ಇದರ ವಿಸ್ತೀರ್ಣ ದುಪ್ಪಟ್ಟಾಗಿದೆ. ಅಡಿಕೆ ಸಿಪ್ಪೆಯು ಕೊಳೆಯಲು 2-3 ವರ್ಷಗಳು ಬೇಕಾಗಿರುವುದರಿಂದ ರೈತರು ಇದರ ವಿಲೇವಾರಿಗೆ ಇದನ್ನು ಸುಡುವುದು, ರಸ್ತೆ ಬದಿ ಹಾಕುವುದು ಮತ್ತು ಕೆರೆಗಳಿಗೆ ಸುರಿಯುತ್ತಿರುವುದರಿಂದ ನೀರು ಮತ್ತು ಪರಿಸರ ಮಾಲಿನ್ಯವಾಗುತ್ತಿದೆ.

ಜೈವಿಕ ಗೊಬ್ಬರಗಳು ಎಂದರೆ ಸಜೀವ ಸೂಕ್ಷ್ಮಜೀವಿಗಳನ್ನು ಒಳಗೊಂಡ ಗೊಬ್ಬರಗಳು. ಇವು ಮಣ್ಣಿನಲ್ಲಿ ಪೋಷಕಾಂಶಗಳನ್ನು ಸಸ್ಯಗಳಿಗೆ ಲಭ್ಯವಾಗುವಂತೆ ಮಾಡುತ್ತವೆ. ಮಣ್ಣಿನ ಜೀವಶಕ್ತಿ ಹೆಚ್ಚಿಸುತ್ತವೆ, ರಾಸಾಯನಿಕ ಗೊಬ್ಬರ ಅವಲಂಬನೆ ಕಡಿಮೆಮಾಡಿ ಕೃಷಿಯ ವೆಚ್ಚವನ್ನು ತಗ್ಗಿಸುತ್ತವೆ. ಮುಂದಿನ ಪೀಳಿಗೆಗೆ ಆರೋಗ್ಯಕರ ಸಜೀವ ಮಣ್ಣು ಉಳಿಸಲು ಮತ್ತು ಸುಸ್ಥಿರ ಇಳುವರಿ ಪಡೆಯಲು ಸಾವಯವ ಮತ್ತು ನೈಸರ್ಗಿಕ ಕೃಷಿಗೆ ರೈತರು ಆದ್ಯತೆ ನೀಡುವಂತೆ ರಜನೀಕಾಂತ.ಆರ್ ಕೋರಿದರು.



ಉದಯವಾಹಿನಿ ಚಿತ್ರ

> **ಆರ್ಥಿಕವಾಗಿ ಮತ್ತು ಸಾಮಾಜಿಕವಾಗಿ ರೈತರು ಬಲಿಷ್ಠರಾಗದ ಹೊರತು ದೇಶದ ಅಭಿವೃದ್ಧಿ ಅಸಾಧ್ಯ ಎಂದು ನಂಬಿದ್ದ ಮಾಜಿ ಪ್ರಧಾನಿ ಚೌಧರಿ ಚರಣ್ ಸಿಂಗ್ ರೈತರ ಸಬಲೀಕರಣಕ್ಕಾಗಿ ಹಲವು ಕಾನೂನು, ಕೃಷಿ ಸುಧಾರಣೆಗಳು, ನೀತಿಗಳನ್ನು ರೂಪಿಸಿದ್ದರು. ಇವರ ಗೌರವಾರ್ಥವಾಗಿ 2001 ರಲ್ಲಿ ಭಾರತ ಸರ್ಕಾರವು ಡಿಸೆಂಬರ್ 23 ರಂದು ರಾಷ್ಟ್ರೀಯ ರೈತರ ದಿನವನ್ನು ಆಚರಿಸಲು ಘೋಷಿಸಿತು. ಅಂದಿನಿಂದ ಪ್ರತಿವರ್ಷ ರಾಷ್ಟ್ರೀಯ ರೈತರ ದಿನವನ್ನು ಆಚರಿಸುತ್ತಾ ಬರಲಾಗುತ್ತದೆ.** -ರಜನೀಕಾಂತ.ಆರ್

ತುಮಕೂರಿನ ಮಲ್ಟಿಪ್ಲೆಕ್ಸ್ ಬಯೋಟೆಕ್ ಪ್ರೈ.ಲಿ. ನ ತಾಂತ್ರಿಕ ಮುಖ್ಯಸ್ಥ ಎಸ್.ಕುಮಾರ್ ಮತ್ತು ಗಿರಿಧರ್. ಜಿ, ಕೆನರಾ ಬ್ಯಾಂಕಿನ ಹಣಕಾಸು ಸಾಕ್ಷರತಾ ಕೇಂದ್ರದ ಆರ್ಥಿಕ ಸಮಾಲೋಚಕ ವಿ.ತಿಪ್ಪೇಸ್ವಾಮಿ ರೈತರಿಗೆ ಅರಿವು ಮೂಡಿಸಿದರು. ಕೋಗುಂಡೆ ಗ್ರಾಮದ ರೈತರಾದ ಹೆಚ್ ಸಿ ಲೋಕೇಶ್ ಇವರು ತಮ್ಮ ಅನುಭವವನ್ನು ಹಂಚಿಕೊಂಡರು. ಅಡಿಕೆ ಸಿಪ್ಪೆಯಿಂದ ಗೊಬ್ಬರ ತಯಾರಿಸುವ ವಿಧಾನವನ್ನು ಪ್ರಾತ್ಯಕ್ಷಿಕೆಯ ಮೂಲಕ ತೋರಿಸಿಕೊಡಲಾಯಿತು.

ಕಾರ್ಯಕ್ರಮದಲ್ಲಿ ಅಖಂಡ ಕರ್ನಾಟಕದ ರೈತ ಸಂಘದ ಮಹಿಳಾ ಘಟಕದ ಅಧ್ಯಕ್ಷೆ ಶಾಂತ ಅಶೋಕ್, ಜಿಲ್ಲಾ ಕೃಷಿ ತರಬೇತಿ ಕೇಂದ್ರದ ಸಹಾಯಕ ಕೃಷಿ ನಿರ್ದೇಶಕಿ ಪೂರ್ಣಶ್ರೀ ಎಂ ಬಡಿಗೇರ, ಕೃಷಿ ಅಧಿಕಾರಿ ಪವಿತ್ರಾ. ಎಂ.ಜೆ, ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ ಅಧಿಕಾರಿ ವಿನಯ್, ಕೃಷಿ ಉತ್ಪನ್ನ ಮಾರುಕಟ್ಟೆ ನಿರ್ದೇಶಕರಾದ ಚಿಕ್ಕಬೆನ್ನೂರಿನ ಕೆ ಸಿ ಕುಮಾರ್, ಕೋಡಿ ರಂಗವ್ವನಹಳ್ಳಿಯ ಜಿ ಸಿ ಶಿವಕುಮಾರ್, ಚೌಲಿಹಳ್ಳಿಯ ಶೈಲೇಶ್ ಕುಮಾರ್, ಪ್ರಶಾಂತ್ ಮತ್ತು ವಿವಿಧ ಗ್ರಾಮಗಳಿಂದ ಆಗಮಿಸಿದ ಆಸಕ್ತ 85 ಕ್ಕೂ ಹೆಚ್ಚಿನ ರೈತ ಮಹಿಳೆಯರು ಮತ್ತು ರೈತರು ಭಾಗವಹಿಸಿದ್ದರು.

## ಬೆಂಬಲ ಬೆಲೆ ಘೋಷಿಸಲು ಮನವಿ


ಉದಯವಾಹಿನಿ ಚಿತ್ರ

• **ಉದಯವಾಹಿನಿ ಕುಕನೂರು**

ಹುಳಗಡ್ಡಿ ಬೆಳೆಗೆ ಬೆಂಬಲ ಬೆಲೆ ಘೋಷಣೆ ಮಾಡಬೇಕು ಎನ್ನುವುದೂ ಸೇರಿದಂತೆ ವಿವಿಧ ಬೇಡಿಕೆಗಳ ಈಡೇರಿಕೆಗೆ ಆಗ್ರಹಿಸಿ ಕರ್ನಾಟಕ ರಾಜ್ಯ ರೈತ ಸಂಘ ಹಾಗೂ ಹಸಿರು ಸೇನೆ ತಾಲ್ಲೂಕು ಘಟಕದ ವತಿಯಿಂದ ಪ್ರತಿಭಟನೆ ನಡೆಸಲಾಯಿತು. ಪಟ್ಟಣದ ವೀರಭದ್ರಪ್ಪ ವೃತ್ತದಲ್ಲಿ ಹಮ್ಮಿಕೊಂಡ ಪ್ರತಿಭಟನೆಯಲ್ಲಿ ಸಂಘಟನೆಯ ತಾಲ್ಲೂಕು ಘಟಕದ ಪ್ರಧಾನ ಕಾರ್ಯದರ್ಶಿ ಈಶಪ್ಪ ಸಬರದ ಮಾತನಾಡಿ, ಈ ಹಿಂದೆ ನಾವು ಹೆಸರು ಬೆಳೆಗೆ ಬೆಂಬಲ ಬೆಲೆ ಘೋಷಿಸಬೇಕು ಎಂದು ಮನವಿ ಮಾಡಿದ್ದೆವು. ಆದರೆ, ಸರ್ಕಾರ ಸರಿಯಾದ ಸಮಯಕ್ಕೆ ಖರೀದಿ ಕೇಂದ್ರ ತೆರೆಯದ ಕಾರಣ ರೈತರು ತುಂಬಾ ನಷ್ಟ ಅನುಭವಿಸಿದ್ದಾರೆ' ಎಂದರು. ಕಡಲೆ ಬೆಳೆಗೆ ಬೆಂಬಲ ಬೆಲೆ ನೀಡಿದರೆ ರೈತರಿಗೆ ಅನುಕೂಲವಾಗಲಿದೆ. ಅಲ್ಲದೆ, ರೈತರಿಗೆ ಬರ ಪರಿಹಾರ ಕೊಡಬೇಕು. ಎಪಿಎಂಸಿ ಆವರಣದಲ್ಲಿ ಟೆಂಡರ್ ಪ್ರಕ್ರಿಯೆ ನಡೆಸುವಂತೆ ಈಗಾಗಲೇ ಹಲವಾರು ಬಾರಿ ಮನವಿ ಪತ್ರ ಸಲ್ಲಿಸಿದ್ದೇವೆ. ಆದರೂ ಇನ್ನೂವರೆಗೂ ಟೆಂಡರ್ ಪ್ರಕ್ರಿಯೆ ನಡೆದಿಲ್ಲ ಎಂದು ಹೇಳಿದರು.

15 ದಿನಗಳೊಳಗೆ ಬೇಡಿಕೆ ಈಡೇರಿಸಬೇಕು. ಇಲ್ಲದಿದ್ದರೆ ಕುಕನೂರು ಬಂದ್‌ಗೆ ಕರೆ ನೀಡಲಾಗುವುದು ಎಂದು ಎಚ್ಚರಿಕೆ ನೀಡಿದರು. ಅಂದಪ್ಪ ಹುರುಳಿ, ದೇವಪ್ಪ ಸೋಬಾನದ, ಮಲ್ಲಪ್ಪ ಚಳಿ ಮರದ್, ಹನುಮಪ್ಪ ಮರಡಿ, ಉಮೇಶ ಬೆದವಟ್ಟಿ, ಬಸವರಾಜ ದೊಡ್ಡಮನಿ, ಈರಪ್ಪ ಈಬೇರಿ, ಶರಣಪ್ಪ ಯತ್ನಟ್ಟಿ, ಖಾಸಿಂಸಾಬ್ ಸಂಗಟಿ, ಶ್ರೀಕಾಂತ ಬಿಳಿಗಿ, ಬಸಪ್ಪ ಲಾಳಗೊಂಡರ್, ಹನುಮಪ್ಪ ಗೋರ್ಲೆಕೊಪ್ಪ, ಶರಣಪ್ಪ ದಿವಟಿರ ಇದ್ದರು.

# ಸ್ವಚ್ಛತೆಗೆ ಆದ್ಯತೆ ನೀಡಲು ಪುರಸಭೆ ಅಧಿಕಾರಿಗಳಿಗೆ ಸೂಚನೆ

### • ಸಾರ್ವಜನಿಕರಿಂದ ಪದೇ ಪದೇ ದೂರುಗಳು ಬರದ ಹಾಗೆ ಕ್ರಮ ವಹಿಸಿ: ಶಾಸಕ ಸಿ.ಎಸ್.ನಾಡಗೌಡ

• **ಉದಯವಾಹಿನಿ ತಾಳಿಕೋಟೆ**

ಪಟ್ಟಣದ ಪ್ರತಿವಾರ್ಡುಗಳಲ್ಲಿ ಚರಂಡಿ, ರಸ್ತೆ ಒಳಗೊಂಡು ಇನ್ನಿತರ ಗಲಿಜು ಕಾಣಿಸದಂತೆ ಎಚ್ಚರ ವಹಿಸಬೇಕು ಸಾರ್ವಜನಿಕರಿಂದ ದೂರುಗಳು ಬರದ ಹಾಗೆ ಕ್ರಮ ವಹಿಸಲು ಪುರಸಭೆ ಮುಖ್ಯಾಧಿಕಾರಿ ವಸಂತ ಪವಾರ ಅವರಿಗೆ ಕರ್ನಾಟಕ ಸಾಬೂನು ಮಾರ್ಜಕ ನಿಗಮದ ಅಧ್ಯಕ್ಷ ಶಾಸಕ ಸಿ.ಎಸ್.ನಾಡಗೌಡ(ಅಪ್ಪಾಜಿ) ಅವರು ಸೂಚಿಸಿದರು.

ಪಟ್ಟಣದ ರಾಜವಾಡೆ ಬಡಾವಣೆಯ ವಾರ್ಡ ನಂ.21, 22, 17ಕ್ಕೆ ಬೆಳಿಗ್ಗೆ 8 ಗಂಟೆಗೆ ಆಗಮಿಸಿದ ಶಾಸಕ ನಾಡಗೌಡ ಅವರು ವಾರ್ಡ ನಾಗರಿಕರಿಂದ ಅಹವಾಲುಗಳನ್ನು ಸ್ವೀಕರಿಸಿದರು. ಈ ಸಮಯದಲ್ಲಿ ವಾರ್ಡ ನಾಗರಿಕರು ವಾರ್ಡಿನಲ್ಲಿ ಚರಂಡಿ ಸ್ವಚ್ಛತೆಗೆ ವಾರಕ್ಕೊಮ್ಮೆ ಬರುತ್ತಿದ್ದು ಕನಿಷ್ಠ ಎರಡು ದಿನಕ್ಕೊಮ್ಮೆಯಾದರೂ ಪುರಸಭೆ ಕಾರ್ಮಿಕರು ಬರುವಂತಾಗಬೇಕು ಕೆಲವುಕಡೆಗಳಲ್ಲಿ ಬೀದಿ ದೀಪಗಳು ಹತ್ತುತ್ತಿಲ್ಲಾವೆಂದು ದೂರಿದರು. ಈ ಸಮಯದಲ್ಲಿ ಸ್ಥಳದಲ್ಲಿಯೇ ಉಪಸ್ಥಿತರಿದ್ದ ಪುರಸಭೆ ಮುಖ್ಯಾಧಿಕಾರಿಗಳಿಗೆ ವಾರ್ಡಗಳ ಸ್ವಚ್ಛತೆಗೆ ಹೆಚ್ಚಿಗೆ ಆದ್ಯತೆ ನೀಡಿ ದೊಡ್ಡ ಬಡಾವಣೆಗಳಿಗೆ ಎರಡುದಿನಕ್ಕೊಮ್ಮೆಯಾದರೂ ಸ್ವಚ್ಚತಾ ಸಿಬ್ಬಂದಿಗಳನ್ನು ಕಳುಹಿಸಿ ಚರಂಡಿ ಮತ್ತು ರಸ್ತೆ ಮೇಲೆ ಕಸ ನೀರು ನಿಲ್ಲದಂತೆ ನೋಡಿಕೊಳ್ಳಿ ಸಾರ್ವಜನಿಕರಿಂದ ಪದೇ ಪದೇ ದೂರುಗಳು ಬರದ ಹಾಗೆ ಕ್ರಮ ವಹಿಸಿ ಎಂದು ಸೂಚಿಸಿದರು. ನಂತರ ಶ್ರೀ ಗ್ರಾಮದೇವತೆ ದೇವಸ್ಥಾನಕ್ಕೆ ಬೆಟ್ಟಿ ನೀಡಿದ ಶಾಸಕ ನಾಡಗೌಡರು ಪೂಜೆ ಸಲ್ಲಿಸಿದರು. ಈ ಸಮಯದಲ್ಲಿ ರಾಜವಾಡೆ


ಉದಯವಾಹಿನಿ ಚಿತ್ರ

> **ರಸ್ತೆ ಮೇಲೆ ಕಸ ನೀರು ನಿಲ್ಲದಂತೆ ನೋಡಿಕೊಳ್ಳಿ**

ಬಡಾವಣೆಯ ನಾಗರಿಕರು ಶ್ರೀಗ್ರಾಮದೇವತೆ ದೇವಸ್ಥಾನವು ಪುರಾತನ ದೇವಸ್ಥಾನವಾಗಿದೆ. ಅಭಿವೃದ್ದಿಯಿಂದ ವಂಚಿತಗೊಂಡಿದೆ ಮತ್ತು ಶ್ರೀ ಮಹಾದೇವರ ಮಂದಿರವು ಪುರಾತನವಾಗಿದೆ ಈ ಎರಡು ದೇವಸ್ಥಾನಗಳ ಅಭಿವೃದ್ಧಿ ಯಾವುದಾರೂ ಯೋಜನೆಯೊಳಗೆ ಸೇರಿಸಿ ಅಭಿವೃದ್ಧಿ ಪಡಿಸಬೇಕೆಂದು ಮನವಿ ಮಾಡಿದರು, ಈ ಸಮಯದಲ್ಲಿ ಶಾಸಕ ನಾಡಗೌಡರು ಶ್ರೀ ಗ್ರಾಮದೇವತೆ ದೇವಸ್ಥಾನಕ್ಕೆ ಸಂಬಂಧಿಸಿದಂತೆ ಮತ್ತು ಶ್ರೀ ಮಹಾದೇವರ ಮಂದಿರಕ್ಕೆ ಸಂಬಂಧಿಸಿ ಉತ್ತಾರೆ ದಾಖಲೆಗಳನ್ನು ಕೊಡಿ ಮುಜರಾಯಿ ಇಲಾಖೆಯಡಿ ಹಣ ಒದಗಿಸಿ ಅಭಿವೃದ್ದಿಗೆ ಮುಂದಾಗುತ್ತೇನೆ ಈ ಕುರಿತು ಮುಜರಾಯಿ ಇಲಾಖೆ ಸಚಿವರಾದ ರಾಮಲಿಂಗರಾಡ್ಡಿಯವರೊಂದಿಗೆ ಚರ್ಚಿಸುತ್ತೇನೆ ಆದಷ್ಟು ಬೇಗನೆ ದಾಖಲೆಗಳನ್ನು ಕೊಡಿ ಎಂದು ಹೇಳಿದರು.

> **ತಾಳಿಕೋಟೆ ಪಟ್ಟಣದ 23 ವಾರ್ಡಿಗಳಿಗೂ ವಾರ್ಡ ಸಭೆಯನ್ನು ನಡೆಸಲಾಗುತ್ತಿದೆ ಆಯಾ ವಾರ್ಡ್‌ಗಳಲ್ಲಿರುವ ಮೂಲಭೂತ ಸೌಕರ್ಯಗಳನ್ನು ಪರಿಶೀಲಿಸಲಾಗುತ್ತಿದೆ ಚರಂಡಿ ಮತ್ತು ರಸ್ತೆ ಸ್ವಚ್ಚತೆ ಅಲ್ಲದೇ ಬೀದಿ ದೀಪಗಳು ಹತ್ತುತ್ತಿಲ್ಲಾವೆಂದು ನಾಗರಿಕರಿಂದ ದೂರುಗಳು ಬಂದಿದ್ದು ಸಾರ್ವಜನಿಕರಿಂದ ಈ ರೀತಿ ಇನ್ನೊಮ್ಮೆ ದೂರುಗಳು ಬರದಂತೆ ನಿಗಾ ವಹಿಸಲು ಪುರಸಭೆ ಅಧಿಕಾರಿಗಳಿಗೆ ಸೂಚಿಸಿದ್ದೇನೆ.** -ಸಿ.ಎಸ್.ನಾಡಗೌಡ(ಅಪ್ಪಾಜಿ) ಶಾಸಕರು ಮುದ್ದೇಬಿಹಾಳ ಮತಕ್ಷೇತ್ರ

### ಸೌಲಭ್ಯಗಳ ಕುರಿತು ಪರಿಶೀಲನೆ

**ನಂತರ ವಾರ್ಡ ನಂ.19 ಮಹಲ್‌ಗಲ್ಲಿ ಬಡಾವಣೆಗೆ ಕಾಲ್ನಡಿಗೆಯ ಮೂಲಕ ತೆರಳಿಸಿದ ಶಾಸಕ ನಾಡಗೌಡರು ಚರಂಡಿ ಸ್ವಚ್ಚತೆ ವಾರ್ಡಿಗೆ ಅಗತ್ಯವಿರುವ ಮೂಲಭೂತ ಸೌಲಭ್ಯಗಳ ಕುರಿತು ಪರಿಶೀಲನೆ ನಡೆಸಿದರು.**

ನಂತರ ರಾಜವಾಡೆಯ ಅಗಸಿ ಬಾಗಿಲು ಹಳೆಯದಾಗಿದೆ ಮತ್ತು ಯಾವುದೇ ವಾಹನಗಳು ಒಳಗಡೆ ಬರುತ್ತಿಲ್ಲಾ ಗಣೇಶೋತ್ಸವ ಸಮಯದಲ್ಲಿ ದಸರಾ ಉತ್ಸವ ಸಮಯದಲ್ಲಿ ಊರಿನಲ್ಲಿರುವ ಎಲ್ಲಾ ಉತ್ಸವ ಮೂರ್ತಿಗಳು ರಾಜವಾಡೆಗೆ ಆಗಮಿಸಿ ಹೋಗುತ್ತವೆ ಇಕ್ಕಲಿನ ಅಗಸಿ ಬಾಗಿಲುದಿಂದ ತೊಂದರೆಯಾಗುತ್ತಿದೆ ನೂತನ ಅಗಸಿ ಬಾಗಿಲು ನಿರ್ಮಾಣಕ್ಕೆ ಕ್ರಮ ವಹಿಸಲು ಬಡಾವಣೆ ನಾಗರಿಕರು ಶಾಸಕ ನಾಡಗೌಡರಿಗೆ ಮನವಿ ಮಾಡಿದರು. ಇದೇ ಸಮಯದಲ್ಲಿ ಉಪಸ್ಥಿತರಿದ್ದ ಪುರಸಭೆ ಮುಖ್ಯಾಧಿಕಾರಿ ವಸಂತ ಪವಾರ ಮತ್ತು ಪುರಸಭೆ ಕಿರಿಯ ಅಭಿಯಂತರ ಸಂದೀಪ ವಠಾರ ಅವರಿಗೆ ಈ ಅಗಸಿ ಬಾಗಿಲು ನಿರ್ಮಾಣಕ್ಕೆ ಅಂದಾಜು ಪತ್ರಿಕೆ ಮತ್ತು ಡಿಸೈನ್ ತಯಾರಿಸಿ ಕೊಡಿ ಇದು ಬಡಾವಣೆಯ ನಾಗರಿಕರ ಬಹುದಿನಗಳ ಬೇಡಿಕೆ ಇದ್ದು ಆದಷ್ಟು ಬೇಗನೆ ಈ ಕಾಮಗಾರಿ ಕೈಗೆತ್ತಿಕೊಳ್ಳೋಣವೆಂದು ಸೂಚಿಸಿದರು.

# ಹೊಸ ವರ್ಷದಿಂದ 'ಜೋಡೆತ್ತು' ಶೂಟಿಂಗ್ ಶುರು

ಚಿಕ್ಕಣ್ಣ ನಾಯಕ ನಟರಾಗಿರುವ ಜೋಡೆತ್ತು ಸಿನಿಮಾ ಇತ್ತೀಚೆಗಷ್ಟೇ ಸೆಟ್ಟೇರಿತ್ತು. ಚಿತ್ರತಂಡ ಇದೀಗ ಶೂಟಿಂಗ್‌ಗೆ ಹೊರಡಲು ಸಜ್ಜಾಗಿದೆ. ಇಡೀ ಸಿನಿಮಾ ಗ್ರಾಮೀಣ ಸೊಗಡಿನ ಹಿನ್ನೆಲೆಯಲ್ಲಿ ಕಟ್ಟಿಕೊಡುವ ಬಯಕೆಯಿಂದ, ಅದಕ್ಕಾಗಿ ಒಂದು ಗ್ರಾಮವನ್ನೇ ಸೆಟ್‌ನಲ್ಲಿ ನಿರ್ಮಿಸುತ್ತಿದೆ 'ಜೋಡೆತ್ತು' ತಂಡ. ಇದಕ್ಕಾಗಿ ಚಿಕ್ಕಮಗಳೂರಿನಲ್ಲಿ ಬೃಹತ್ ಸೆಟ್ ಹಾಕಲಾಗಿದೆ. ಜನವರಿ 5 ರಿಂದ ಚಿತ್ರೀಕರಣ ಶುರುವಾಗಲಿದೆ.

ಸೋಮಶೇಖರ್ (ಕಟ್ಟಿಗೇನಹಳ್ಳಿ) ನಿರ್ಮಾಣದ ಜೋಡೆತ್ತು ಸಿನಿಮಾ ಪ್ಯಾನ್ ಇಂಡಿಯಾ ಮಟ್ಟದಲ್ಲಿ ಅದ್ದೂರಿಯಾಗಿ ನಿರ್ಮಾಣವಾಗುತ್ತಿದೆ. ಆಕಾಶ್ ಎಂಟರ್ ಪ್ರೈಸಸ್ ಬ್ಯಾನರ್ ಅಡಿಯಲ್ಲಿ ನಿರ್ಮಾಣವಾಗುತ್ತಿರುವ ಮೂರನೇ ಸಿನಿಮಾವಿದು. ಚಿಕ್ಕಣ್ಣ ಜತೆಗೆ ತೆಲುಗಿನ ಸುನಿಲ್ ಸಹ ಪ್ರಮುಖ ಪಾತ್ರ ನಿರ್ವಹಿಸುತ್ತಿದ್ದಾರೆ. ಇವರೊಟ್ಟಿಗೆ ಇನ್ನೂ ಅನೇಕ ಕಲಾವಿದರು ನಟಿಸಲಿದ್ದು, ಅದರ ಕುರಿತು ಸದ್ಯದಲ್ಲೇ ಚಿತ್ರತಂಡ ಅಧಿಕೃತವಾಗಿ ಮಾಹಿತಿ ಹರಿಬಿಡಲಿದೆ. ಅಧ್ಯಕ್ಷ, ರಾಬರ್ಟ್, ಕಾಟೇರ ಹಾಗೂ ಇತ್ತೀಚೆಗೆ ಬಿಡುಗಡೆಯಾದ 'ದಿ ಡೆವಿಲ್' ಸಿನಿಮಾಕ್ಕೆ ಕ್ಯಾಮೆರಾಮನ್ ಆಗಿದ್ದ ಸುಧಾಕರ್ ಎಸ್ ರಾಜ್ ಈ ಸಿನಿಮಾಕ್ಕೆ ಆಕ್ಷನ್ ಕಟ್ ಹೇಳಲಿದ್ದಾರೆ. ಜತೆಗೆ ಛಾಯಾಗ್ರಹಣ ಜವಾಬ್ದಾರಿಯೂ ಅವರೇ ನಿರ್ವಹಿಸುವ ಮೂಲಕ 'ಜೋಡೆತ್ತು'ಗಳಿಗೆ ಕಣ್ಣಾಗಲಿದ್ದಾರೆ. ಇನ್ನು ಈ ಚಿತ್ರಕ್ಕೆ ವಿ.ಹರಿಕೃಷ್ಣ ಸಂಗೀತ ಸಂಯೋಜಿಸಲಿದ್ದು, ಐದು ಹಾಡುಗಳನ್ನು ಕಟ್ಟಿಕೊಡಲಿದ್ದಾರೆ. ಮಾಸ್ತಿ, ರಾಜಶೇಖರ್ ಹಾಗೂ ರಘು ನಿಡುವಳ್ಳಿ ಈ ಚಿತ್ರಕ್ಕೆ ಸಂಭಾಷಣೆ ಬರೆಯುತ್ತಿದ್ದು, ಮೋಹನ್ ಬಿ ಕೆರೆ ಕಲಾ ನಿರ್ದೇಶನ ಜೋಡೆತ್ತು ಸಿನಿಮಾಕ್ಕಿದೆ.



ಸದ್ಯದಲ್ಲೇ ಚಿತ್ರತಂಡದಿಂದ ಅಧಿಕೃತ ಮಾಹಿತಿ



ಸಿನಿ ವಾಹಿನಿ

# ರಾಜೀವ್ ಕೃಷ್ಣ ನಿರ್ದೇಶನದ ಚಂದ್ರಗಿರಿಯಲ್ಲಿ ದೇವರಾಜ್

ಶಿಲ್ಪಾಶ್ರೀ ಪಿಕ್ಚರ್ಸ್ ಸಮರ್ಪಿಸಿ, ಸ್ನೇಹಾಲಯಂ ಕ್ರಿಯೇಷನ್ಸ್ ಲಾಂಛನದಲ್ಲಿ ಶಿಲ್ಪಾ ಶ್ರೀನಿವಾಸ್ ಅವರು ನಿರ್ಮಿಸುತ್ತಿರುವ ಚಿತ್ರ ಚಂದ್ರಗಿರಿ.ಈಗಾಗಲೇ ಬಿಡುಗಡೆಗೆ ಸಿದ್ದವಾಗಿರುವ ಮುಗಿಲ ಮಲ್ಲಿಗೆ ಚಿತ್ರದ ನಿರ್ದೇಶಕ ರಾಜೀವ್ ಕೃಷ್ಣ ಕಥೆ, ಚಿತ್ರಕಥೆ, ಸಂಭಾಷಣೆ ಬರೆದು ನಿರ್ದೇಶನ ಮಾಡುತ್ತಿರುವ ಮತ್ತೊಂದು ಚಿತ್ರವಿದು. ಈ ಚಿತ್ರದಲ್ಲಿ ಬಹಳ ದಿನಗಳ ನಂತರ ಡೈನಾಮಿಕ್ ಹೀರೋ ದೇವರಾಜ್ ಅವರು ನಾಯಕನಾಗಿ ಕಾಣಿಸಿಕೊಳ್ಳಲಿದ್ದಾರೆ. ಇತ್ತೀಚೆಗಷ್ಟೇ ಚಂದ್ರಗಿರಿ ಚಿತ್ರದ ಹಾಡುಗಳ ಧ್ವನಿಮುದ್ರಣ ಕಾರ್ಯ ಮುಗಿದಿದ್ದು ಮೂರು ಹಾಡುಗಳಿಗೆ ಅನಿರುದ್ಧ ಶಾಸ್ತ್ರಿ, ಕಾರುಣ್ಯ ಮತ್ತು ಶ್ರೀಕೃಷ್ಣ ದನಿಯಾಗಿದ್ದಾರೆ, ದೈವ ಮತ್ತು ಆತ್ಮವೊಂದರ ನಡುವಿನ ಹೋರಾಟದ ಕಥೆ ಈ ಚಿತ್ರದಲ್ಲಿದೆ.

ಪ್ರತಿ ಅಮಾವಾಸ್ಯೆಯ ದಿನ ಕಾಣಿಸಿಕೊಳ್ಳುವ ಎರಡು ಶವಗಳು, ಮತ್ತು ಚಂದ್ರಗಿರಿ ಊರಿನ ಬೀದಿ ಬೀದಿಗಳಲ್ಲಿ ರಕ್ತದ ಕಲೆ, ಆ ಇಬ್ಬರು ಹೇಗೆ ಸತ್ತರು ಎಂಬ ನಿಗೂಢ, ಅದನ್ನು ಭೇದಿಸಲು ಬರುವವರಿಗೆ ಗೋಚರವಾಗುವ ಅಗೋಚರ ಶಕ್ತಿ. ಆ ಅಗೋಚರ ಶಕ್ತಿಯು ದೈವದ ನೆಲೆಯನ್ನು ಧ್ವಂಸ ಮಾಡಲು ಆತ್ಮಗಳನ್ನು ಸಿದ್ದಪಡಿಸುವ ದುಷ್ಟರನ್ನು ಹೇಗೆ ದಮನಗೊಳಿಸುತ್ತದೆ ಎಂಬುದನ್ನು ಈ ಚಿತ್ರದಲ್ಲಿ ಹೇಳಲಾಗಿದೆ. ಹಾರರ್, ಸಸ್ಪೆನ್ಸ್, ಥ್ರಿಲ್ಲರ್ ಜಾನರ್ ಒಳಗೊಂಡ ಚಂದ್ರಗಿರಿ ಚಿತ್ರಕ್ಕೆ ಚಿಕ್ಕಬಳ್ಳಾಪುರ ,ಬೆಳ್ಳಿಕೆರೆ ಮತ್ತು ಹೊಸಕೋಟೆ ಸುತ್ತುಮುತ್ತ ಜ. 8 ರಿಂದ ಚಿತ್ರೀಕರಣ ಪ್ರಾರಂಭವಾಗಲಿದೆ. ಈ ಚಿತ್ರದಲ್ಲಿ ಬಾಹುಬಲಿ ಖ್ಯಾತಿಯ ಕಾಲಕೇಯ ಪ್ರಭಾಕರ್, ಶೋಭರಾಜ್,ಪ್ರಿಯ, ಧನ್ಯ, ಭೂಮಿಕಾಶ್ರೀ, ಮರಿಸ್ವಾಮಿ, ಪಂಚಾಕ್ಷರಯ್ಯ, ಬೆಂಗಳೂರು ಮನು, ಕಿಶೋರ್ ಕಾಸರಗೋಡು, ಮಂಜುನಾಥ್ ಸಾರೊಟ ಹಾಗೂ ಇತರರು ನಟಿಸುತ್ತಿದ್ದು ಉಳಿದ ಕಲಾವಿದರ ಆಯ್ಕೆ ನಡೆಯುತ್ತಿದೆ, ಪ್ರಮೋದ್ ಭಾರತೀಯ ಅವರ ಛಾಯಾಗ್ರಹಣ, ಎಂ. ಎಲ್. ರಾಜ ಅವರ ಸಂಗೀತ, ಆರ್. ಕೆ. ಗಾಂಧಿ ಅವರ ಸಾಹಿತ್ಯ, ವಿನಯ್ ಜಿ. ಆಲೂರು ಅವರ ಸಂಕಲನ, ಮೋಹನ್ ಕುಮಾರ್ ಅವರ ಪ್ರಸಾದನ, ಮಲ್ಲಿಕಾರ್ಜುನ ಅವರ ಕಲೆ, ಮಾರುತಿ ಅವರ ಸಾಹಸ ಈ ಚಿತ್ರಕ್ಕಿದೆ.

ಅಗೋಚರ ಶಕ್ತಿಯ ದೈವದ ನೆಲೆ

# ರುಕ್ಮಿಣಿ ಆಕಾಂಕ್ಷೆ ಬೇರೆಯೇ ಇತ್ತು

'ಸಪ್ತ ಸಾಗರದಾಚೆ ಎಲ್ಲೋ' ಮತ್ತು 'ಕಾಂತಾರ: ಚಾಪ್ಟರ್ 1' ಸಿನಿಮಾಗಳಲ್ಲಿ ರುಕ್ಮಿಣಿ ವಸಂತ್ ಅವರ ನಟನೆ ನೋಡಿ ಪ್ರೇಕ್ಷಕರು ಫಿದಾ ಆಗಿದ್ದಾರೆ. ಪರ ಭಾಷೆಯ ದೊಡ್ಡ ನಿರ್ಮಾಣ ಸಂಸ್ಥೆಯ ಸಿನಿಮಾಗಳಲ್ಲಿ ರುಕ್ಮಿಣಿ ನಟಿಸುತ್ತಿದ್ದಾರೆ. ಇವುಗಳ ನಡುವೆ ಬಾಲಿವುಡ್‌ಗೂ ಸಹ ರುಕ್ಮಿಣಿ ವಸಂತ್ ಕಾಲಿಡುತ್ತಿದ್ದಾರೆ. ಆದರೆ ರುಕ್ಮಿಣಿ ಅವರಿಗೆ ನಟಿ ಆಗುವ ಆಸೆಯೇ ಇರಲಿಲ್ಲ, ಬೇರೆ ಏನೋ ಆಗುವ ಆಸೆ ಇತ್ತು. ರುಕ್ಮಿಣಿ ವಸಂತ್ ಪ್ರಸ್ತುತ ದಕ್ಷಿಣ ಭಾರತದ ಸ್ಟಾರ್ ನಟಿ. ತಮ್ಮ ನಟನೆ ಮತ್ತು ಸೌಂದರ್ಯದಿಂದ ಕೋಟ್ಯಂತರ ಹೃದಯಗಳನ್ನು ಗೆದ್ದಿದ್ದಾರೆ ರುಕ್ಮಿಣಿ ವಸಂತ್. 'ಸಪ್ತ ಸಾಗರದಾಚೆ ಎಲ್ಲೋ' ಮತ್ತು 'ಕಾಂತಾರ: ಚಾಪ್ಟರ್ 1' ಸಿನಿಮಾಗಳಲ್ಲಿ ರುಕ್ಮಿಣಿ ಅವರ ನಟನೆ ನೋಡಿ ಪ್ರೇಕ್ಷಕರು ಫಿದಾ ಆಗಿದ್ದಾರೆ. ಪರ ಭಾಷೆಯ ದೊಡ್ಡ ನಿರ್ಮಾಣ ಸಂಸ್ಥೆಯ ಸಿನಿಮಾಗಳಲ್ಲಿ ರುಕ್ಮಿಣಿ ನಟಿಸುತ್ತಿದ್ದಾರೆ. ಇವುಗಳ ನಡುವೆ ಬಾಲಿವುಡ್‌ಗೂ ಸಹ ರುಕ್ಮಿಣಿ ವಸಂತ್ ಕಾಲಿಡುತ್ತಿದ್ದಾರೆ. ಆದರೆ ರುಕ್ಮಿಣಿ ಅವರಿಗೆ ನಟಿ ಆಗುವ ಆಸೆಯೇ ಇರಲಿಲ್ಲ, ಬೇರೆ ಏನೋ ಆಗುವ ಆಸೆ ಇತ್ತು.

ಬಹುತೇಕರಿಗೆ ಗೊತ್ತಿರುವಂತೆ ಭಾರತೀಯ ಸೇನೆಯ ಹೆಮ್ಮೆಯ ಕರ್ನಲ್ ವಸಂತ್ ವೇಣುಗೋಪಾಲ್ ಅವರ ಪುತ್ರಿ ರುಕ್ಮಿಣಿ ವಸಂತ್. ಎಳವೆಯಿಂದ ವಿದ್ಯಾಭ್ಯಾಸದಲ್ಲಿಯೂ ಮುಂದಿದ್ದರಂತೆ ರುಕ್ಮಿಣಿ. ಬಹಳ ವರ್ಷ ಅವರಿಗೆ ತಾವು ಪಶು ವೈದ್ಯರಾಗಬೇಕು ಎಂಬ ಆಸೆ ಇತ್ತಂತೆ.



# ಧರ್ಮ 25ನೇ ಚಿತ್ರ ನಯನ ಮನೋಹರ

ಧರ್ಮಕೀರ್ತಿರಾಜ್ ನಾಯಕತ್ವದ 25ನೇ ಚಿತ್ರ 'ನಯನ ಮನೋಹರ' ಸಿನಿಮಾದ ಶೀರ್ಷಿಕೆ ಅನಾವರಣ ಮತ್ತು ಟೀಸರ್ ಬಿಡುಗಡೆ ಕಾರ್ಯಕ್ರಮ ಅದ್ದೂರಿಯಾಗಿ ನಡೆಯಿತು. ಬೆಂಗಳೂರು ಮೂಲದ ಯುವ ಉದ್ಯಮಿ, ಬಿಲ್ಡರ್ ಅನುಷ್ ಸಿದ್ದಪ್ಪ ಕನ್ನಡ ಚಿತ್ರರಂಗಕ್ಕೆ ಏನಾದರೂ ಕೊಡುಗೆ ಕೊಡಬೇಕೆಂಬ ಅಭಿಲಾಷೆಯಿಂದ 'ನಯನ ಮನೋಹರ' ಚಿತ್ರವನ್ನು ತಮ್ಮದೇ ಎಕ್ಸ್‌ಕ್ವಿಸಿಟ್ ಎಂಟರ್‌ಟೈನ್‌ಮೆಂಟ್ಸ್ ಬ್ಯಾನರ್ ಅಡಿಯಲ್ಲಿ ನಿರ್ಮಾಣ ಮಾಡುತ್ತಿದ್ದಾರೆ.

ಯುವ ಪ್ರತಿಭೆ ನಿರ್ದೇಶಕ ಪುನೀತ್. ಕೆಜಿಆರ್ ಚೊಚ್ಚಲ ಚಿತ್ರಕ್ಕೆ ತಮ್ಮದೇ 'ಲಾಸ್ಟ್ ಬೆಂಚ್ ವಂಡರ್ಸ್ ಸಿನ್ಸ್ 1990' ತಂಡದೊಂದಿಗೆ ನಿರ್ದೇಶನ ಮಾಡುತ್ತಿದ್ದು, 'ಇದು ನಿಮ್ಮನ್ನು ನಿಮಗೆ ಪರಿಚಯಿಸುವ ಸುಂದರ ಕಾವ್ಯ' ಎಂಬ ಅರ್ಥಪೂರ್ಣ ಅಡಿಬರಹ ವಿಶೇಷವಾಗಿತ್ತು.

ಅಪ್ಪ, ಅಮ್ಮ, ಅಕ್ಕ ಬಂದಿರುವುದು ನನಗೆ ಶಕ್ತಿ ಬಂದಿದೆ. ಎಲ್ಲರೂ ಸಮಯ ಬಿಡುವು ಮಾಡಿಕೊಂಡು ತಂಡಕ್ಕೆ ಹರಸಲು ಆಗಮಿಸಿದಕ್ಕೆ ತುಂಬಾ ಥ್ಯಾಂಕ್ಸ್. 25ನೇ ಫಿಲಂ ಮೈಲ್‌ಸ್ಟೋನ್ ಅಂತ ಹೇಳಬಹುದು. ಮೇಜರ್ ಹೀರೋ ಅಂದರೆ ನಿರ್ಮಾಪಕರು. ನನ್ನ ಲುಕ್ಕಿಗೆ ಅವರೇ ಕಾರಣ. ನಿರ್ದೇಶಕರು ಕಥೆ ಹೇಳಿದಾಗ ಬಹಳ ಖುಷಿ ಆಯಿತು. ಮೂರು ಶೇಡ್‌ಗಳಲ್ಲಿ ಕಾಣಿಸಿಕೊಳ್ಳುತ್ತೇನೆ. ವಾಸುಕಿ ವೈಭವ್ ಸಂಗೀತ ಚಿತ್ರಕ್ಕೆ ಪ್ಲಸ್ ಆಗಿದೆ. ಪ್ರಿಯಾಂಕ ಮೇಡಂ ಜತೆಗೆ 'ವೈರಸ್'ದಲ್ಲಿ ನಟಿಸಿದ್ದೇನೆ. ಅವರು ತುಂಬಾ ಸರಳವ್ಯಕ್ತಿ. ಗೆಳೆಯ ವಿನೋದ್ ಪ್ರಭಾಕರ್ ಮೊದಲಿನಿಂದಲೂ ಸಪೋರ್ಟ್ ಮಾಡುತ್ತಾ ಬಂದಿದ್ದಾರೆ. ಏನೇ ತಪ್ಪು ಮಾಡಿದರೂ, ಮನೆಗೆ ಕರೆಸಿಕೊಂಡು ಬುದ್ದಿವಾದ ಹೇಳುತ್ತಾರೆ. ಸುಮಾರು ಸಲ ಲುಕ್ ಚೇಂಜ್ ಮಾಡಿಕೊಳ್ಳಿ ಎಂದು ಹೇಳಿದ್ದಾರೆ. ಇದು ನನಗೆ ಹೆಸರು ತಂದುಕೊಡುತ್ತದೆಂಬ ನಂಬಿಕೆ ಇದೆ ಅಂತ ಧರ್ಮಕೀರ್ತಿರಾಜ್ ಎಲ್ಲರಿಗೂ ಥ್ಯಾಂಕ್ಸ್,ಥ್ಯಾಂಕ್ಸ್ ಎನ್ನುತ್ತಾ ಮೈಕ್‌ನ್ನು ಹಸ್ತಾಂತರಿಸಿದರು.



# ನಿಧಿಯ ಉಡುಗೆ ಜನರನ್ನು ಕೆರಳಿಸಿತು; ವಿವಾದಾತ್ಮಕ ಹೇಳಿಕೆ ಕೊಟ್ಟ ನಟ



ಹೈದರಾಬಾದ್ ಮಾಲ್ ಕಾರ್ಯಕ್ರಮದಲ್ಲಿ ನಟಿ ನಿಧಿ ಅಗರ್ವಾಲ್ ಅವರಿಗೆ ಆದ ಅನುಭವದ ಬಗ್ಗೆ ತೆಲುಗು ನಟ ಶಿವಾಜಿ ವಿವಾದಾತ್ಮಕ ಹೇಳಿಕೆ ನೀಡಿದ್ದಾರೆ. ನಟಿಯ ಉಡುಗೆಯೇ ಜನರನ್ನು ಕೆರಳಿಸಿತು ಎಂದು ಶಿವಾಜಿ ಆರೋಪಿಸಿದ್ದಾರೆ. ಇದಕ್ಕೆ ಪ್ರತಿಕ್ರಿಯಿಸಿದ ನಿಧಿ ಅಗರ್ವಾಲ್, ಸಂತ್ರಸ್ತೆಯನ್ನು ದೂಷಿಸುವುದು ತಪ್ಪು ಎಂದು ಆಕ್ರೋಶ ವ್ಯಕ್ತಪಡಿಸಿದ್ದಾರೆ. ಈ ಹೇಳಿಕೆ ಸಾರ್ವಜನಿಕ ವಲಯದಲ್ಲಿ ವ್ಯಾಪಕ ಚರ್ಚೆಗೆ ಕಾರಣವಾಗಿದೆ.

ಹೈದರಾಬಾದ್ ಮಾಲ್‌ನಲ್ಲಿ ನಡೆದ 'ರಾಜಾ ಸಾಬ್' ಸಾಂಗ್ ರಿಲೀಸ್ ಕಾರ್ಯಕ್ರಮದಲ್ಲಿ ನಟಿ ನಿಧಿ ಅಗರ್‌ವಾಲ್ ಭಾಗಿ ಆಗಿದ್ದರು. ಈ ವೇಳೆ ನಟಿಯ ಮೇಲೆ ಅಲ್ಲಿದ್ದ ಜನರು ಮುಗಿಬಿದ್ದಿದ್ದರು.ಇದು ಸಾಕಷ್ಟು ಚರ್ಚೆಗೆ ಕಾರಣ ಆಗಿತ್ತು. ನಟಿ ಇದರಿಂದ ಸಾಕಷ್ಟು ತೊಂದರೆ ಅನುಭವಿಸಿದ್ದರು. ಈಗ ಈ ಘಟನೆ ಬಗ್ಗೆ ತೆಲುಗು ನಟ ಶಿವಾಜಿ ನೀಡಿದ ಹೇಳಿಕೆ ಚರ್ಚೆಗೆ ಕಾರಣವಾಗಿದೆ. 'ನಟಿಯರು ಸಾಧಾರಣ ಉಡುಗೆ ತೊಡಬೇಕು' ಎಂದಿದ್ದಾರೆ.

ಈ ಹೇಳಿಕೆ ನಟಿಗೆ ಬೇಸರ ಮೂಡಿಸಿದೆ. ಡಿಸೆಂಬರ್ 17 ರಂದು ಹೈದರಾಬಾದ್‌ನ ಲುಲು ಮಾಲ್‌ನಲ್ಲಿ ರಾಜಾ ಸಾಬ್‌ನ ಹಾಡಿನ ಬಿಡುಗಡೆ ಸಮಾರಂಭದಲ್ಲಿ ನಿಧಿ ಚಿತ್ರತಂಡದೊಂದಿಗೆ ಭಾಗವಹಿಸಿದ್ದರು. ಕಾರ್ಯಕ್ರಮಕ್ಕೆ ಊಹೆಗೂ ಮೀರಿದ ಸಂಖ್ಯೆಯಲ್ಲಿ ಜನರು ಸೇರಿದ್ದರು.ಈವೆಂಟ್ ಮುಗಿದ ಬಳಿಕ ನಟಿ ಅಲ್ಲಿಂದ ಹೊರ ಬರಲು ಸಾಕಷ್ಟು ತೊಂದರೆ ಅನುಭವಿಸಬೇಕಾಯಿತು. ಸಾಕಷ್ಟು ಜನರು ಅವರ ದೇಹವನ್ನು ಟಚ್ ಮಾಡಿದ್ದರು. ಈ ಸಂಬಂಧ ಕೇಸ್ ಕೂಡ ದಾಖಲಾಯಿತು. ಶಿವಾಜಿ ಪ್ರತಿಕ್ರಿಯೆ.. ಹೈದರಾಬಾದ್‌ನಲ್ಲಿ ನಡೆದ ಸುದ್ದಿಗೋಷ್ಠಿಯಲ್ಲಿ ಮಾತನಾಡಿರೋ ಶಿವಾಜಿ, 'ನಿಧಿಯ ಉಡುಗೆ ಜನಸಮೂಹವನ್ನು ಕೆರಳಿಸಿತು' ಎಂದು ನೇರವಾಗಿ ಅವರ ಉಡುಗೆ ಬಗ್ಗೆ ಆರೋಪ ಮಾಡಿದ್ದಾರೆ.

# ಬಾಕ್ಸಿಂಗ್ ಡೇ ಟೆಸ್ಟ್‌ಗೆ 12 ಆಟಗಾರರನ್ನು ಹೆಸರಿಸಿದ ಆಸ್ಟ್ರೇಲಿಯಾ

ಟೆಸ್ಟ್ ಕ್ರಿಕೆಟ್‌ನ ಮದಗಜಗಳ ಕಾಳಗ ಎಂದೇ ಬಿಂಬಿತವಾಗಿರುವ ಆಯಶಸ್ ಸರಣಿಯನ್ನು ಆಸ್ಟ್ರೇಲಿಯಾ ತಂಡ ವಶಪಡಿಸಿಕೊಂಡಿದೆ. ಇಂಗ್ಲೆಂಡ್ ವಿರುದ್ಧದ ಈ ಸರಣಿಯ ಮೊದಲ ಮೂರು ಮ್ಯಾಚ್‌ಗಳನ್ನು ಆಸೀಸ್ ಪಡೆ ಗೆದ್ದುಕೊಂಡಿದ್ದು, ಇದೀಗ ಡಿಸೆಂಬರ್ 26 ರಿಂದ ಶುರುವಾಗಲಿರುವ ಬಾಕ್ಸಿಂಗ್ ಡೇ ಟೆಸ್ಟ್ ಪಂದ್ಯಕ್ಕಾಗಿ ಉಭಯ ತಂಡಗಳು ಸಜ್ಜಾಗುತ್ತಿದೆ. ಡಿಸೆಂಬರ್ 26 ರಿಂದ ಶುರುವಾಗಲಿರುವ ಇಂಗ್ಲೆಂಡ್ ವಿರುದ್ಧದ 4ನೇ ಟೆಸ್ಟ್ ಪಂದ್ಯಕ್ಕಾಗಿ ಆಸ್ಟ್ರೇಲಿಯಾ 12 ಆಟಗಾರರ ಪಟ್ಟಿಯನ್ನು ಪ್ರಕಟಿಸಿದೆ. ಈ ಹನ್ನೆರಡು ಆಟಗಾರರಲ್ಲಿ 11 ಮಂದಿ ಕಣಕ್ಕಿಳಿಯುವುದು ಖಚಿತ. ಅದರಂತೆ ಈ ಬಾರಿ ಕೂಡ ಇನಿಂಗ್ಸ್ ಆರಂಭಿಕರಾಗಿ ಟ್ರಾವಿಸ್ ಹೆಡ್ ಹಾಗೂ ಜೇಕ್ ವೆದರಾಲ್ಡ್ ಕಣಕ್ಕಿಳಿಯಲಿದ್ದಾರೆ. ಮೂರನೇ ಕ್ರಮಾಂಕದಲ್ಲಿ ಮಾರ್ನಸ್ ಲಾಬುಶೇನ್ ಬ್ಯಾಟ್ ಬೀಸಲಿದ್ದಾರೆ. ಇನ್ನು ಪ್ಯಾಟ್ ಕಮಿನ್ಸ್ ಅವರ ಅನುಪಸ್ಥಿತಿಯಲ್ಲಿ ನಾಯಕನಾಗಿ ಸ್ಟೀವ್ ಸ್ಮಿತ್ 4ನೇ ಕ್ರಮಾಂಕದಲ್ಲಿ ಕಣಕ್ಕಿಳಿಯಲಿದ್ದಾರೆ. ಐದನೇ ಕ್ರಮಾಂಕದಲ್ಲಿ ಉಸ್ಮಾನ್ ಖ್ವಾಜಾ ಕಾಣಿಸಿಕೊಂಡರೆ, ವಿಕೆಟ್ ಕೀಪರ್ ಬ್ಯಾಟರ್ ಅಲೆಕ್ಸ್ ಕ್ಯಾರಿ ಆರನೇ ಕ್ರಮಾಂಕದಲ್ಲಿ ಆಡಲಿದ್ದಾರೆ. ಹಾಗೆಯೇ ಆಲ್‌ರೌಂಡರ್ ಕ್ಯಾಮರೋನ್ ಗ್ರೀನ್ ಏಳನೇ ಕ್ರಮಾಂಕದಲ್ಲಿ ಕಣಕ್ಕಿಳಿಯಲಿದ್ದಾರೆ. ವೇಗಿಗಳಾಗಿ ಮಿಚೆಲ್ ಸ್ಟಾರ್ಕ್ ಹಾಗೂ ಸ್ಕಾಟ್ ಬೋಲ್ಯಾಂಡ್ ಪ್ಲೇಯಿಂಗ್ ಇಲೆವೆನ್‌ನಲ್ಲಿ ಕಾಣಿಸಿಕೊಳ್ಳುವುದು ಖಚಿತ. ಇನ್ನು ಮತ್ತೋರ್ವ ವೇಗಿಯಾಗಿ ಬ್ರೆಂಡನ್ ಡಾಗೆಟ್‌ಗೆ ಸ್ಥಾನ ಸಿಗುವ ನಿರೀಕ್ಷೆಯಿದೆ. ಆದರೆ ಹನ್ನೊಂದನೇ ಆಟಗಾರನ ಸ್ಥಾನಕ್ಕೆ ಮೈಕೆಲ್ ನೇಸರ್ ಹಾಗೂ ಜೈ ರಿಚರ್ಡ್ಸನ್ ನಡುವೆ ನೇರ ಪೈಪೋಟಿ ಇದೆ. ಹೀಗಾಗಿ ಇವರಿಬ್ಬರಲ್ಲಿ ಒಬ್ಬರು ಪ್ಲೇಯಿಂಗ್ ಇಲೆವೆನ್‌ನ ಭಾಗವಾಗಲಿದ್ದಾರೆ.

ಹೆಡ್ ಹಾಗೂ ಜೇಕ್ ಕಣಕ್ಕೆ



**ಬಾಕ್ಸಿಂಗ್ ಡೇ ಟೆಸ್ಟ್‌ಗೆ ಆಸ್ಟ್ರೇಲಿಯಾದ 12 ಆಟಗಾರರು:** ಟ್ರಾವಿಸ್ ಹೆಡ್, ಜೇಕ್ ವೆದರಾಲ್ಡ್, ಮಾರ್ನಸ್ ಲಾಬುಶೇನ್, ಸ್ಟೀವ್ ಸ್ಮಿತ್ (ನಾಯಕ), ಉಸ್ಮಾನ್ ಖ್ವಾಜಾ, ಅಲೆಕ್ಸ್ ಕ್ಯಾರಿ (ವಿಕೆಟ್ ಕೀಪರ್), ಕ್ಯಾಮರೋನ್ ಗ್ರೀನ್, ಮಿಚೆಲ್ ಸ್ಟಾರ್ಕ್, ಸ್ಕಾಟ್ ಬೋಲ್ಯಾಂಡ್, ಬ್ರೆಂಡನ್ ಡಾಗೆಟ್, ಮೈಕೆಲ್ ನೇಸರ್, ಜೈ ರಿಚರ್ಡ್ಸನ್.


ಇಂಗ್ಲೆಂಡ್ ಪ್ಲೇಯಿಂಗ್ 11: ಝಾಕ್ ಕ್ರಾಲಿ, ಬೆನ್ ಡಕೆಟ್, ಜೇಕಬ್ ಬೆಥೆಲ್, ಜೋ ರೂಟ್, ಹ್ಯಾರಿ ಬ್ರೂಕ್, ಬೆನ್ ಸ್ಟೋಕ್ಸ್ (ನಾಯಕ), ಜೇಮಿ ಸ್ಮಿತ್ (ವಿಕೆಟ್ ಕೀಪರ್), ವಿಲ್ ಜ್ಯಾಕ್ಸ್, ಗಸ್ ಅಟ್ಕಿನ್ಸನ್, ಬ್ರೈಡನ್ ಕಾರ್ಸ್, ಜೋಶ್ ಟಂಗ್.

ಆಸ್ಟ್ರೇಲಿಯಾ ಟೆಸ್ಟ್ ತಂಡ: ಸ್ಟೀವ್ ಸ್ಮಿತ್ (ನಾಯಕ), ಸ್ಕಾಟ್ ಬೋಲ್ಯಾಂಡ್, ಅಲೆಕ್ಸ್ ಕ್ಯಾರಿ , ಬ್ರೆಂಡನ್ ಡಾಗೆಟ್, ಕ್ಯಾಮರೋನ್ ಗ್ರೀನ್, ಟ್ರಾವಿಸ್ ಹೆಡ್, ಜೋಶ್ ಇಂಗ್ಲಿಸ್, ಉಸ್ಮಾನ್ ಖ್ವಾಜಾ , ಮಾರ್ನಸ್ ಲ್ಯಾಬುಶೇನ್, ಟಾಡ್ ಮರ್ಫಿ, ಮೈಕೆಲ್ ನೇಸರ್, ಜೈ ರಿಚರ್ಡ್ಸನ್, ಮಿಚೆಲ್ ಸ್ಟಾರ್ಕ್, ಜೇಕ್ ವೆದರಾಲ್ಡ್, ಬ್ಯೂ ವೆಬ್‌ಸ್ಟರ್.

**ಇಂಗ್ಲೆಂಡ್ ಟೆಸ್ಟ್ ತಂಡ:** ಬೆನ್ ಸ್ಟೋಕ್ಸ್ (ನಾಯಕ), ಹ್ಯಾರಿ ಬ್ರೂಕ್ (ಉಪನಾಯಕ), ಜೋಫ್ರಾ ಆರ್ಚರ್, ಗಸ್ ಅಟ್ಕಿನ್ಸನ್, ಶೋಯೆಬ್ ಬಶೀರ್, ಜೇಕಬ್ ಬೆಥೆಲ್, ಬ್ರೈಡನ್ ಕಾರ್ಸ್, ಝಾಕ್ ಕ್ರಾಲಿ, ಬೆನ್ ಡಕೆಟ್, ವಿಲ್ ಜ್ಯಾಕ್ಸ್, ಓಲಿ ಪೋಪ್, ಮ್ಯಾಥ್ಯೂ ಪಾಟ್ಸ್, ಜೋ ರೂಟ್, ಜೇಮಿ ಸ್ಮಿತ್, ಜೋಶ್ ಟಂಗ್.

# 50 ಎಸೆತಗಳಲ್ಲಿ 61 ರನ್ ಬಾರಿಸಿದ ಆರ್‌ಸಿಬಿ ದಾಂಡಿಗ!

ಟಿ20 ಕ್ರಿಕೆಟ್ ಅಂದರೆ ಹೊಡಿಬಡಿಯಾಟ ಅದರಲ್ಲೂ ಕಡಿಮೆ ಮೊತ್ತದ ಟಾರ್ಗೆಟ್ ಸಿಕ್ಕರೆ ಬ್ಯಾಟರ್‌ಗಳು ಅಬ್ಬರಿಸುವುದು ವಾಡಿಕೆ. ಆದರೆ ದುಬೈನಲ್ಲಿ ನಡೆದ ಇಂಟರ್‌ನ್ಯಾಷನಲ್ ಲೀಗ್ ಟಿ20 ಪಂದ್ಯದಲ್ಲಿ ಸ್ಲೋ ಇನಿಂಗ್ಸ್ ಆಡಿದ ಜೋರ್ಡನ್ ಕಾಕ್ಸ್ ಸುದ್ದಿಯಾಗಿದ್ದಾರೆ.




ದುಬೈ ಇಂಟರ್‌ನ್ಯಾಷನಲ್ ಸ್ಟೇಡಿಯಂನಲ್ಲಿ ನಡೆದ ಈ ಪಂದ್ಯದಲ್ಲಿ ಶಾರ್ಜಾ ವಾರಿಯರ್ಸ್ ಹಾಗೂ ದುಬೈ ಕ್ಯಾಪಿಟಲ್ಸ್ ತಂಡಗಳು ಮುಖಾಮುಖಿಯಾಗಿದ್ದವು. ಈ ಮ್ಯಾಚ್‌ನಲ್ಲಿ ಮೊದಲು ಬ್ಯಾಟ್ ಮಾಡಿದ ಶಾರ್ಜಾ ವಾರಿಯರ್ಸ್ ತಂಡವು 20 ಓವರ್‌ಗಳಲ್ಲಿ 8 ವಿಕೆಟ್ ಕಳೆದುಕೊಂಡು 134 ರನ್ ಗಳಿಸಲಷ್ಟೇ ಶಕ್ತರಾಗಿದ್ದರು.

135 ರನ್‌ಗಳ ಗುರಿ ಬೆನ್ನತ್ತಿದ ದುಬೈ ಕ್ಯಾಪಿಟಲ್ಸ್ ತಂಡಕ್ಕೆ ಶಯಾನ್ ಜಹಾಂಗೀರ್ ಉತ್ತಮ ಆರಂಭ ಒದಗಿಸಿದ್ದರು. 39 ಎಸೆತಗಳನ್ನು ಎದುರಿಸಿದ ಶಯಾನ್ 1 ಸಿಕ್ಸ್ ಹಾಗೂ 6 ಫೋರ್‌ಗಳೊಂದಿಗೆ 51 ರನ್ ಬಾರಿಸಿದ್ದರು.

ಆದರೆ ಮೂರನೇ ಕ್ರಮಾಂಕದಲ್ಲಿ ಕಣಕ್ಕಿಳಿದ ಜೋರ್ಡನ್ ಕಾಕ್ಸ್ ನಿಧಾನಗತಿಯಲ್ಲಿ ಬ್ಯಾಟ್ ಬೀಸಿ ಅಚ್ಚರಿ ಮೂಡಿಸಿದರು. ಬರೋಬ್ಬರಿ 50 ಎಸೆತಗಳನ್ನು ಎದುರಿಸಿದ ಜೋರ್ಡನ್ 1 ಸಿಕ್ಸ್ ಹಾಗೂ 6 ಫೋರ್‌ಗಳೊಂದಿಗೆ ಅಜೇಯ 61 ರನ್ ಕಲೆಹಾಕಿದರು. ಕಾಕ್ಸ್ ಅವರ ಈ ನಿಧಾನಗತಿಯ ಬ್ಯಾಟಿಂಗ್ ಪರಿಣಾಮ 135 ರನ್‌ಗಳ ಗುರಿ ತಲುಪಲು ದುಬೈ ಕ್ಯಾಪಿಟಲ್ಸ್ ತಂಡವು ಬರೋಬ್ಬರಿ 19.1 ಓವರ್‌ಗಳನ್ನು ತೆಗೆದುಕೊಂಡಿತು. ಅಂದರೆ ಕೊನೆಯ ಓವರ್‌ನಲ್ಲಿ 6 ವಿಕೆಟ್‌ಗಳ ಜಯ ದಕ್ಕಿಸಿಕೊಂಡಿದ್ದರು. ಅಂದಹಾಗೆ ಜೋರ್ಡನ್ ಕಾಕ್ಸ್ ಮುಂಬರುವ ಐಪಿಎಲ್‌ನಲ್ಲಿ ರಾಯಲ್ ಚಾಲೆಂಜರ್ಸ್ ಬೆಂಗಳೂರು ಪರ ಕಣಕ್ಕಿಳಿಯಲಿದ್ದಾರೆ. ಈ ಬಾರಿಯ ಮಿಜಿ ಹರಾಜಿನ ಮೂಲಕ ಕಾಕ್ಸ್ ಅವರನ್ನು ಆರ್‌ಸಿಬಿ 75 ಲಕ್ಷ ರೂ.ಗೆ ಖರೀದಿಸಿದೆ.

ಆರ್‌ಸಿಬಿ 75 ಲಕ್ಷ ರೂ.ಗೆ ಖರೀದಿ


# ಒಂದೇ ದಿನ ಮೂರು ಸ್ಫೋಟಕ ಸೆಂಚುರೀಸ್!



ವಿಜಯ ಹಜಾರೆ ಟೂರ್ನಿಯ ಮೊದಲ ದಿನವೇ ಬರೋಬ್ಬರಿ 22 ಶತಕಗಳು ಮೂಡಿಬಂದಿವೆ. ಈ ಇಪ್ಪತ್ತೆರಡು ಸೆಂಚುರಿಗಳಲ್ಲಿ ಮೂರು ವಿಸ್ಫೋಟಕ ಶತಕಗಳು ಕೂಡ ಸೇರಿವೆ. ಅಂದರೆ ವಿಜಯ ಹಜಾರೆ ಟೂರ್ನಿಯ ದಾಖಲೆಯ ಎರಡು ಸೆಂಚುರಿಗಳು ಒಂದೇ ದಿನ ಮೂಡಿಬಂದಿವೆ. ಲಿಸ್ಟ್ ಎ ಕ್ರಿಕೆಟ್‌ನಲ್ಲಿ 40 ಕ್ಕಿಂತ ಕಡಿಮೆ ಎಸೆತಗಳಲ್ಲಿ ಭಾರತದ ನಾಲ್ವರು ಶತಕ ಸಿಡಿಸಿದ್ದಾರೆ. ಈ ನಾಲ್ವರಲ್ಲಿ ಮೂವರು ಒಂದೇ ದಿನ ಈ ಸಾಧನೆ ಮಾಡಿರುವುದು ವಿಶೇಷ. ಅದು ಕೂಡ ಡಿಸೆಂಬರ್ 24ರ ಮಧ್ಯಾಹ್ನದೊಳಗೆ ಈ ವಿಸ್ಫೋಟಕ ಸೆಂಚುರಿಗಳು ಮೂಡಿಬಂದಿರುವುದು ಮತ್ತೊಂದು ವಿಶೇಷ. 2025-26ರ ವಿಜಯ ಹಜಾರೆ ಟೂರ್ನಿಯ ಮೊದಲ ಪಂದ್ಯದಲ್ಲಿ ಬಿಹಾರ ತಂಡದ ನಾಯಕ ಸಕಿಬುಲ್ ಗನಿ ಕೇವಲ 32 ಎಸೆತಗಳಲ್ಲಿ ಶತಕ ಬಾರಿಸಿದ್ದಾರೆ. ಅರುಣಾಚಲ ಪ್ರದೇಶ್ ವಿರುದ್ಧದ ಈ ಪಂದ್ಯದಲ್ಲಿ ವಿಸ್ಫೋಟಕ ಶತಕ ಸಿಡಿಸಿ ಸಕಿಬುಲ್ ಏಕದಿನ ಪಂದ್ಯದಲ್ಲಿ ಅತೀ ವೇಗದ ಸೆಂಚುರಿ ಸಿಡಿಸಿದ ಭಾರತೀಯ ಬ್ಯಾಟರ್ ಎನಿಸಿಕೊಂಡಿದ್ದಾರೆ. ಸಕಿಬುಲ್ ಗನಿಯ ದಾಖಲೆಯ ಶತಕದ ಬೆನ್ನಲ್ಲೇ ಇಶಾನ್ ಕಿಶನ್ ಕೂಡ ಪ್ರಚಂಡ ಬ್ಯಾಟಿಂಗ್ ಪ್ರದರ್ಶಿಸಿದ್ದರು. ಕರ್ನಾಟಕ ವಿರುದ್ಧದ ಮ್ಯಾಚ್‌ನಲ್ಲಿ ಅಬ್ಬರಿಸಿದ ಜಾರ್ಖಂಡ್ ತಂಡದ ನಾಯಕ ಇಶಾನ್ ಕೇವಲ 33 ಎಸೆತಗಳಲ್ಲಿ ಶತಕ ಪೂರೈಸಿದ್ದರು. ಈ ಮೂಲಕ ಲಿಸ್ಟ್ ಎ ಕ್ರಿಕೆಟ್‌ನಲ್ಲಿ ಅತೀ ಕಡಿಮೆ ಎಸೆತಗಳಲ್ಲಿ ಸೆಂಚುರಿ ಸಿಡಿಸಿದ 2ನೇ ಭಾರತೀಯ ಎನಿಸಿಕೊಂಡಿದ್ದಾರೆ. ಹಾಗೆಯೇ ಅರುಣಾಚಲ ಪ್ರದೇಶ್ ವಿರುದ್ಧದ ಪಂದ್ಯದಲ್ಲಿ ಬಿಹಾರ ಪರ ಆರಂಭಿಕನಾಗಿ ಕಣಕ್ಕಿಳಿದ ವೈಭವ್ ಸೂರ್ಯವಂಶಿ ಶತಕ ಪೂರೈಸಲು ತೆಗೆದುಕೊಂಡಿದ್ದು ಕೇವಲ 36 ಎಸೆತಗಳನ್ನು ಮಾತ್ರ. ಈ ಮೂಲಕ ವಿಜಯ ಹಜಾರೆ ಟೂರ್ನಿಯಲ್ಲಿ ಅತೀ ವೇಗದ ಶತಕ ಸಿಡಿಸಿದ ಅತ್ಯಂತ ಕಿರಿಯ ಬ್ಯಾಟರ್ ಎನಿಸಿಕೊಂಡಿದ್ದಾರೆ.

ಕಿಶನ್ ಕೂಡ ಪ್ರಚಂಡ ಬ್ಯಾಟಿಂಗ್

# ಕೊಹ್ಲಿ, ರೋಹಿತ್ ಮತ್ತೆ ಕಣಕ್ಕೆ



ಜೈಪುರ ಪರ ರೋಹಿತ್ ಆಟ

ವಿಜಯ ಹಜಾರೆ ಟೂರ್ನಿಯ ದ್ವಿತೀಯ ಪಂದ್ಯಗಳು ಡಿಸೆಂಬರ್ 26 ರಂದು ನಡೆಯಲಿದೆ. ಮೊದಲ ದಿನದಂತೆ ಶುಕ್ರವಾರ ಕೂಡ 32 ತಂಡಗಳು ಕಣಕ್ಕಿಳಿಯಲಿವೆ. ಇದರಲ್ಲಿ ದೆಹಲಿ ಹಾಗೂ ಮುಂಬೈ ತಂಡಗಳು ಸೇರಿವೆ. ಹೀಗಾಗಿ ರೋಹಿತ್ ಶರ್ಮಾ ಹಾಗೂ ವಿರಾಟ್ ಕೊಹ್ಲಿ ದ್ವಿತೀಯ ಪಂದ್ಯದಲ್ಲೂ ಕಣಕ್ಕಿಳಿಯುವುದು ಬಹುತೇಕ ಖಚಿತ. ವಿಜಯ ಹಜಾರೆ ಟೂರ್ನಿಯ ಮೂಲಕ ವಿರಾಟ್ ಕೊಹ್ಲಿ ಹಾಗೂ ರೋಹಿತ್ ಶರ್ಮಾ ದೇಶೀಯ ಕ್ರಿಕೆಟ್‌ಗೆ ಮರಳಿದ್ದಾರೆ. ಬೆಂಗಳೂರಿನ ಸಿಓಇ ಮೈದಾನದಲ್ಲಿ ನಡೆದ ಮೊದಲ ಪಂದ್ಯದಲ್ಲಿ ಕಿಂಗ್ ಕೊಹ್ಲಿ ದೆಹಲಿ ಪರ ಕಣಕ್ಕಿಳಿದರೆ, ಜೈಪುರದಲ್ಲಿ ನಡೆದ ಮತ್ತೊಂದು ಪಂದ್ಯದಲ್ಲಿ ರೋಹಿತ್ ಶರ್ಮಾ ಬ್ಯಾಟ್ ಬೀಸಿದ್ದರು. ವಿಶೇಷ ಎಂದರೆ ಈ ಇಬ್ಬರು ದಿಗ್ಗಜರು ಮೊದಲ ಮ್ಯಾಚ್‌ನಲ್ಲೇ ಶತಕ ಸಿಡಿಸಿದ್ದಾರೆ. ಆಂಧ್ರ ಪ್ರದೇಶ್ ವಿರುದ್ಧದ ಪಂದ್ಯದಲ್ಲಿ ದೆಹಲಿ ಪರ ಮೂರನೇ ಕ್ರಮಾಂಕದಲ್ಲಿ ಬ್ಯಾಟ್ ಬೀಸಿದ ವಿರಾಟ್ ಕೊಹ್ಲಿ 101 ಎಸೆತಗಳಲ್ಲಿ 3 ಸಿಕ್ಸ್ ಹಾಗೂ 14 ಫೋರ್‌ಗಳೊಂದಿಗೆ 131 ರನ್ ಬಾರಿಸಿದ್ದಾರೆ. ಸಿಕ್ಕಿಂ ವಿರುದ್ಧದ ಮ್ಯಾಚ್‌ನಲ್ಲಿ ಮುಂಬೈ ಪರ ಆರಂಭಿಕನಾಗಿ ಕಣಕ್ಕಿಳಿದ ರೋಹಿತ್ ಶರ್ಮಾ ಸಿಡಿಲಬ್ಬರದ ಬ್ಯಾಟಿಂಗ್ ಪ್ರದರ್ಶಿಸಿದ್ದಾರೆ. ಈ ಪಂದ್ಯದಲ್ಲಿ 94 ಎಸೆತಗಳನ್ನು ಎದುರಿಸಿದ ಹಿಟ್ ಮ್ಯಾನ್ 9 ಭರ್ಜರಿ ಸಿಕ್ಸ್ ಹಾಗೂ 18 ಫೋರ್‌ಗಳೊಂದಿಗೆ 155 ರನ್ ಬಾರಿಸಿದ್ದಾರೆ. ಅಂದರೆ 15 ವರ್ಷಗಳ ಬಳಿಕ ದೇಶೀಯ ಏಕದಿನ ಪಂದ್ಯವಾಡಿದ ವಿರಾಟ್ ಕೊಹ್ಲಿ ಭರ್ಜರಿ ಸೆಂಚುರಿಯೊಂಧಿಗೆ ಅಬ್ಬರಿಸಿದ್ದಾರೆ. ಮತ್ತೊಂದೆಡೆ 7 ವರ್ಷಗಳ ಬಳಿಕ ವಿಜಯ ಹಜಾರೆ ಪಂದ್ಯವಾಡಿದ ರೋಹಿತ್ ಶರ್ಮಾ ಕೂಡ ಶತಕದೊಂದಿಗೆ ಮಿಂಚಿದ್ದಾರೆ. ಈ ಅಬ್ಬರದೊಂದಿಗೆ ಇಬ್ಬರು ದಿಗ್ಗಜರು ತಮ್ಮ ಫಾರ್ಮ್ ಅನ್ನು ಮುಂದುವರೆಸಿದ್ದಾರೆ.



Printed by : A. BALACHANDRA, Printed at : RAJHANS ENTERPRISES No. 134, 4th Main Road, Industrial Town, Rajajinagar, Bengaluru - 560044, Karnataka. Owned By, Published By, Editor :T. HOMBE GOWDA, No. 1230, Jayamahal, Ground Floor, 13th Cross, 2nd Phase, Girinagar, Bengaluru - 560 085, Karnataka. Email Id: udayavahininews@yahoo.com , epaper.udayavahini.in www.udayavahini.in Udaya vahini news Udaya vahini news
ಉದಯವಾಹಿನಿ ಪತ್ರಿಕೆ ಹೆಸರಿನಲ್ಲಿ ಯಾರಾದರೂ ಬ್ಲ್ಯಾಕ್‌ಮೇಲ್ ಮಾಡಿದರೆ ಅಥವಾ ಹೆಸರು ದುರ್ಬಳಕೆ ಮಾಡಿಕೊಳ್ಳುತ್ತಿದ್ದರೆ ಕೂಡಲೇ ಈ ನಂಬರ್‌ಗೆ ಕರೆ ಮಾಡಿ: 9448225966